# New Creation ಹೊಸ ಸೃಷ್ಟಿ

**ಲೇಖಕರ ಸಂದೇಶ**

ಪ್ರಿಯ ಓದುಗರೆ:

ಈ ಸತ್ಯವೇದ ಅಧ್ಯಯನ ನಿಮಗೆ ಹೊಸ ಒಡಂಬಡಿಕೆಯ ಗ್ರಂಥದ ಮೂಲಕ ಭೋಧಿಸುವದಕ್ಕೆ ವಿನ್ಯಾಸಗೊಳಿಸಿದ ನಾಲ್ಕನೆಯ ಸರಣಿಯಾಗಿದೆ.ಈ ಅಧ್ಯಯನದ ಪ್ರಾಮುಖ್ಯತೆ,ಮತ್ತು ಸತ್ಯವೇದದ ಸ್ಫೋಟಕ ಸಂಕಲ್ಪವು ನಿಗದಿಯಾಗಿದೆ,ನಮ್ಮ ಪ್ರೀತಿಪೂರ್ವಕ ಪ್ರಾರ್ಥನೆಯು ನೀವು ಅದರ ಸರಿಯಾದ ಉದ್ದೇಶವನ್ನು ಸಾಧಿಸುವುದು.

ಈ ಅಧ್ಯಯನದಲ್ಲಿ ಅನುಸರಿಸುವ ಮೂಲ ತೀರ್ಮಾನಗಳು ಈ ಕೆಳಕಂಡಂತಿದೆ: -

1. ಕ್ರಿಸ್ತನೊಳಗೆ ದೀಕ್ಷಸ್ನಾನದಲ್ಲಿ ಸೇರಿದ ಮೇಲೆ ಆತನಲ್ಲಿ ಹೊಸ ಸೃಷ್ಟಿಯಾಗುತ್ತಾನೆ, ಹಾಗು ನಂತರದಲ್ಲಿ ಕ್ರಿಸ್ತನಂತಾಗುತ್ತಾನೆ. ಕ್ರೈಸ್ತನಿಗೆ ಇದು ಸಾಧ್ಯ.

2. ಈ ಹೊಸ ಸೃಷ್ಟಿ ಕ್ರಿಸ್ತನ ಪುನುರುತ್ಥಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರಂತರ ಪ್ರಕ್ರಿಯೆಯಲ್ಲಿ ಅಭಿವೃದ್ಧಿಯಾಗಿ ಮನಸ್ಸನ್ನು ನೂತನ ಮಾಡಿಕೊಳ್ಳುತ್ತ -ಕ್ರಿಸ್ತನ ಪುನುರುತ್ಥಾlನದ ದೃಷ್ಟಿಕೋನವನ್ನು ಅಭಿವೃದ್ಧಿಮಾಡಿಕೊಳ್ಳುತ್ತಾ, ಪುನುರುತ್ಥಾನಹೊಂದಿದ ಕ್ರಿಸ್ತನಲ್ಲಿಯೇ ಮನಸ್ಸಿಟ್ಟು ನಿರಂತರ ಕೇಂದ್ರಿಕರಿಸಿಕೊಳ್ಳಬೇಕು.

3. ದೇವರು ಹಿಂದಿನ ಕಾಲದಿಂದಲೂ ತನಗೆ ನಂಬಿಗಸ್ತರಾದವರಿಗೆ ತನ್ನ ಪವಿತ್ರಾತ್ಮನನ್ನು ದಯಪಾಲಿಸಿ, ಅವರ ಜೊತೆಗಿನ ಅನ್ಯೂನ್ಯತೆ ಪುನಃ ಪ್ರತಿಷ್ಠಾಪಿಸುವುದು ಮತ್ತು ಅವರು ತನ್ನ ಸಾರೂಪ್ಯವುಳ್ಳವರಾಗಿ ಪರಿಪೂರ್ಣವಾಗಬೇಕೆಂದು ಉದ್ದೇಶಿಸಿದ್ದನು.ದೇವರು ತನ್ನ ಈ ಅಧ್ಬುತ ಸಂಕಲ್ಪವನ್ನು ಹೊಸ ಒಡಂಬಡಿಕೆಯ ತನ್ನ ವಾಕ್ಯದಲ್ಲಿ **ವಾಗ್ದಾನ,ಮರ್ಮ,ಮಹಿಮೆ** ಮತ್ತು **ಕನ್ನಡಿ** ಎಂಬವುಗಳ ಪದದ ಮೂಲಕ ತಿಳಿಸಿ ನಾವು ಸರಿಯಾಗಿ ಆತನ ಚಿತ್ತವನ್ನು ಅರ್ಥ ಮಾಡಿಕೊಳ್ಳಬೇಕೆಂದು ಉದ್ದೇಶಿಸಿದನು.ಪಾಪಕ್ಷಮಾಪಣೆಯು ನಮ್ಮೊಳಗಿರುವ ಪವಿತ್ರಾತ್ಮನಿಗೆ ಸಂಚಾಲನೆಯಾಗಿದೆ,ಮತ್ತು ದೇವರ ಮುಖ್ಯ ವಿಷಯವಾಗಿದೆ,ಹೊಸ ಒಡಂಬಡಿಕೆಯ ಸಂದೇಶದಲ್ಲಿ ದೇವರ ಮುಖ್ಯ ವಿಷಯ ಪಾಪ ಕ್ಷಮಾಪಣೆಯೆಂದು ಗ್ರಹಿಸಿ ಅರ್ಥಮಾಡಿಕೊಳ್ಳಬೇಕು.ಹಳೆ ಒಡಂಬಡಿಕೆಯ ಸಂದೇಶವು ಕ್ರಿಸ್ತನಲ್ಲ,**ಕ್ರಿಸ್ತನು ನಿಮ್ಮೊಳಗಿರವುದೇ!** ದೇವರ ಪರಿಪೂರ್ಣ ಪ್ರಕಟಣೆಯ ಕನ್ನಡಿಯಲ್ಲಿ - ಸಂಪೂರ್ಣಗೊಂಡ ಹೊಸ ಒಡಂಬಡಿಕೆಯೂ ಮತ್ತು ಪರಿಪೂರ್ಣ ಧರ್ಮಪ್ರಮಾಣ-ಪುನರುತ್ಥಾನಗೊಂಡ ಕ್ರಿಸ್ತನ ಮಹಿಮಾ ರೂಪವನ್ನು ನಾವು ನೋಡುತ್ತೇವೆ, ಮತ್ತು ಇದರ ಪರಿಣಾಮವಾಗಿ ಅದೇ ರೂಪದಲ್ಲಿ ನಮ್ಮನ್ನು ಮಾರ್ಪಡಿಸಲಾಗುತ್ತಿದೆ.

4. ಪವಿತ್ರಾತ್ಮನು ಕ್ರೈಸ್ತನಿಗೆ, ಶರೀರಾಧೀನ ಸ್ವಭಾವವನ್ನು ನಾಶಮಾಡುವದಕ್ಕೂ, ದೇವರ ಮಗನಾಗುವದಕ್ಕೂ,ಸಂಪೂರ್ಣನಾಗುವುದಕ್ಕೂ, ಸಹಾಯಮಾಡಿ ಮುನ್ನಡೆಸಿ ಮತ್ತು ಕ್ರೈಸ್ತನ ಪ್ರಾರ್ಥನೆಗಳಿಗೆ ಮಧ್ಯಸ್ಥನಾಗಿದ್ದಾನೆ.

5. ಕ್ರೈಸ್ತರು ಪವಿತ್ರಾತ್ಮ ಭರಿತರಾಗಿರಬೇಕೆಂದು ಉತ್ತೇಜನವು,ಪವಿತ್ರಾತ್ಮನನ್ನು ದುಃಖಪಡಿಸಬಾರದೆಂದು,ಅಥವ ನಂದಿಸಬಾರದೆಂದು,ನಮ್ಮ ದೇಹವನ್ನ ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಎಚ್ಚರಿಸುತ್ತಾನೆ.

6. ಕ್ರಿಸ್ತನಲ್ಲಿ ಜೀವಿಸುವುದೆಂದರೆ ಪೂರ್ವ ಸ್ವಭಾವದಿಂದ ಬಿಡುಗಡೆಯು.ಕ್ರೈಸ್ತನು ದೇವರು ಅಪೇಕ್ಷಿಸುವದನ್ನು ಸಂತೋಷದಿಂದ ಕೈಕೊಳ್ಳುವನು ಹಾಗು ಈ ಪ್ರಕ್ರಿಯೆ ಮೂಲಕ ಕ್ರಿಸ್ತನಂತಾಗುತ್ತಾನೆ. ದೇವರು ನಾವು ಯೋಚಿಸುವದಕ್ಕಿಂತಲೂ ಬೇಡಿಕೊಳ್ಳುವುದಕ್ಕಿಂತಲೂ ಅತ್ಯಾಧಿಕವಾದದನ್ನು ಮಾಡಲು ತನ್ನ ಪವಿತ್ರಾತ್ಮ ಮೂಲಕ ಶಕ್ತನಾಗಿದ್ದಾನೆಂದು ನಂಬುತ್ತೇವೆ.

ಹೊಸ ಸೃಷ್ಟಿಯ ಸಂಕಲ್ಪವನ್ನು ತಿಳಿದುಕೊಳ್ಳುವುದು ಕ್ರೈಸ್ತತ್ವದ ಕೇಂದ್ರ ಬಿಂದುವಾಗಿದೆ.ಕ್ರಿಸ್ತನಲ್ಲಿ ನಾವೇನಾಗಬೇಕು ಎನ್ನುವ ದೃಷ್ಟಿಯಿಂದ ಪ್ರಾಮಾಣಿಕ ಪ್ರಯತ್ನಮಾಡಿದರೆ ದೇವರ ಅಪೇಕ್ಷೆಯನ್ನು ನೆರವೇರಿಸಿಲು ಪ್ರೇರಣೆ.ಶುಭವಾರ್ತೆಯೆಂದರೆ ಇದೇ.

ಪ್ರಿಯ ಓದುಗರೇ ಈ ಪುಸ್ತಕದ ಲೇಖಕ ದೈವಪ್ರೇರಿತರಲ್ಲ,ಆದುದರಿಂದ ತಪ್ಪುಗಳು,ಮತ್ತು ಪೂರ್ವಾಗ್ರಹ ಇರಬಹುದು.ಆದುದರಿಂದ ನೀವು ಸತ್ಯವೇದಕ್ಕೆ ಹೋಗಿ ಉತ್ತರಗಳನ್ನು ಕಂಡುಕೊಳ್ಳಿ. ಈ ಅಧ್ಯಯನ ನಿಮ್ಮ ಆಲೋಚನೆಯನ್ನು ಉತ್ತೇಜಿಸುವದಕ್ಕಾಗಿ ನಾನು ಮಾಡಿದ ಪ್ರಯತ್ನ.

ಈ ಲೇಖನ **Jay Wilson** ಅವರು ಬರೆದ English ಭಾಷಯಿಂದ ಭಾರತೀಯ ಸತ್ಯವೇದ ಸಂಸ್ಥೆಯಿಂದ (bible society of India) ಪ್ರಕಾಷಿತಗೂಂಡ ಕನ್ನಡ ಸತ್ಯವೇದ ಗ್ರಂಥ ಮೂಲದಿಂದ ಭಾಷಾಂತರಿಸಿದೆ.

ಕ್ರಿಸ್ತನಲ್ಲಿ ಸಹೋದರ
ಸುನಿಲ್ ಕುಮಾರ್

## *" ಸತ್ಯವೇದವು ಮಾತ್ರ...ಕ್ರೈಸ್ತನನ್ನೇ ಉಂಟುಮಾಡುತ್ತದೆ."*

---

### Introduction ಪರಿಚಯ

ಕ್ರೈಸ್ತತ್ವದ ಶುಭವಾರ್ತೆಯೂ ಪಾಪಗಳ ಕ್ಷಮಾಪಣೆಯಲ್ಲಿಯೇ ಕೇಂದ್ರಿತವಾಗಿಲ್ಲ. ಸುವಾರ್ತೆಯು ನರಕಪಾತ್ರನಾದ ಪಾಪಿಯ ಎಲ್ಲಾ ಅಪರಾಧಗಳನ್ನು ಕ್ಷಮಿಸಲ್ಪಡುವುದು ಎಂಬುದು ನಂಬತಕ್ಕದ್ದೇ,ಆದರೇ ಪಾಪ ಕ್ಷಮಾಪಣೆಯನ್ನು ಪಡೆಯಬೇಕಾದರೆ ಮಾನಸಾಂತರ ಹೊಂದಿ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಸ್ನಾನ ಮಾಡಿಸಿಕೊಳ್ಳುವುದು ಹಿಂದಿನವುಗಳನ್ನು ತೆಗೆದುಹಾಕುವುದು. ಒಂದು ಸಾರಿ ತೆಗೆದುಹಾಕಿದ ಮೇಲೆ ಕ್ರೈಸ್ತನು ಹೊಸಬನಾಗಿ ಕ್ರಿಸ್ತನಿಗೋಸ್ಕರ ಜೀವಿಸಬೇಕು,ನಿಷ್ಕಳಂಕ ಮತ್ತು ಪಾಪರಹಿತನಾಗಿರಬೇಕು.ಯೇಸು ಹೇಳಿದ ಹಾಗೆ **(ಯೋಹಾನ 3:7) ರಲ್ಲಿ "ನೀನು ಹೊಸದಾಗಿ ಹುಟ್ಟದಿದ್ದರೆ."** ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿ ಜೀವಿಸಬೇಕಾದರೆ ಕ್ರೈಸ್ತನು ಕಂಡುಕೊಳ್ಳುವುದು ತನಗೆ ಸಹಾಯದ ಅವಶ್ಯಕತೆ ಎಂದು, ಆದಕಾರಣ ಈ ಸಹಾಯವು ಪವಿತ್ರಾತ್ಮನ ಮೂಲಕ ಕೂಡಲ್ಪಟ್ಟಿದೆ.

ಅಪೊಸ್ತಲನಾದ ಪೌಲನು ನಮ್ಮ ಮುಖ್ಯ ಅಧ್ಯಯನ ವಿಷಯದ ಬಗ್ಗೆ ಹೀಗೆ ಹೇಳುತ್ತಾನೆ: **"ಸುನ್ನತಿಯಾಗುವುದರಲ್ಲಿ ಏನು ಇಲ್ಲ,ಸುನ್ನತಿಯಾಗದೆ ಇರುವುದರಲ್ಲಿಯೂ ಏನು ಇಲ್ಲ ಹೊಸ ಸೃಷ್ಟಿಯೇ ಬೇಕು."(ಗಲಾತ್ಯ 6:15)**

ಕ್ರೈಸ್ತತ್ವದ ಮೂಲ ತತ್ವ ಸಾರಾಂಶ ಹೊಸ ಸೃಷ್ಟಿಯನ್ನು ಅರ್ಥಮಾಡಿಕೊಳ್ಳುವದು ಅದನ್ನು ನಾವು ನಿಜವಾಗಿ ತಿಳಯದಿದ್ದರೆ ಕ್ರೈಸ್ತತ್ವವು ಸಾರವಿಲ್ಲದ ಹೂರಲಾರದ ಭಾರವುಳ್ಳ ಧರ್ಮಪ್ರಮಾಣವಾಗಿರುತ್ತದೆ, ಭಾರವೆನ್ನುವವರ ಗುಣಗುಟ್ಟುವವರ ಅಂತ್ಯಫಲ ಮರಣವೇ.

## I. Meaning of New Creation ಹೊಸ ಸೃಷ್ಟಿಯ ಅರ್ಥವು

### New Creation ಹೊಸ ಸೃಷ್ಟಿ

**"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು.ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."** (2 ಕೊರಿಂಥ 5:17)

ನಾವು ನೋಡಿರುವ ಹಾಗೆ (ದೇವರ ರಕ್ಷಣೆಯ ಸಂಕಲ್ಪದ ಯೋಜನೆಯಲ್ಲಿ) ಒಬ್ಬ ವ್ಯಕ್ತಿಯು ನೀರಿನಲ್ಲಿ ಮುಳುಗಿಸುವುದರ ಮೂಲಕ ಕ್ರಿಸ್ತನಲ್ಲಿ ಸೇರುತ್ತಾನೆ ಎಂದು ನಮಗೆ ತಿಳಿಯಬೇಕು (ರೋಮಾಯ 6:3,ಗಲಾತ್ಯ3:27). ಮುಳುಗಿಸುವದರಲ್ಲಿನ ಸದ್ಗುಣವು ಕ್ರಿಸ್ತನೊಳಗೆ ಸೇರಿಸಲುಲ್ಪಡುವುದೇ- ಈ ವ್ಯಕ್ತಿಯು ಈಗ ಹೊಸ ಸೃಷ್ಟಿ,ಯೇಸು ನಿಕೂದೇಮನ ಪ್ರಶ್ನೆಗೆ ಉತ್ತರಿಸಿ **" ಒಬ್ಬನು ನೀರಿನಿಂದಲೂ ಆತ್ಮದಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು."**(ಯೋಹಾನ 3:5). ಅಂದರೆ ಹೊಸದಾಗಿ ಹುಟ್ಟುವುದೆಂದರೆ ಒಬ್ಬ ವ್ಯಕ್ತಿಯು ನೀರಿನಿಂದಲೂ ಆತ್ಮದಿಂದಲೂ ಹುಟ್ಟುವುದು ಒಳಗೊಂಡಿದೆ, ಪಂಚಾಶತ್ತಮದ ಹಬ್ಬದ ದಿನ ಪೇತ್ರನು ಹೇಳಿದ ಹಾಗೆ **"ನಿಮ್ಮ ಪಾಪಗಳು ಪರಿಹಾರವಾಗುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಸ್ನಾನ**[ನೀರಿನಲ್ಲಿ -ಅ.ಕೃ. 10:47,48] **ಮಾಡಿಸಿಕೊಳ್ಳಿರಿ,ಆಗ ನಿಮಗೆ ಪವಿತ್ರಾತ್ಮ ದಾನವಾಗುವುದು.**(ಅ.ಕೃ. 2:38).

ಈ ಹೊಸ ಸೃಷ್ಟಿಯಲ್ಲಿ ಯೇಸುವಿನೊಂದಿಗೆ ದೀಕ್ಷಾಸ್ನಾನದಲ್ಲಿ ಹಿಂದಿನವುಗಳೆಲ್ಲಾ ಹೊಣಲ್ಪಟ್ಟಿದೆ (ರೋಮಾಯ 6:4) ಆದರೆ ಇನ್ನು ಮುಖ್ಯವಾಗಿ ಹೊಸ ಸೃಷ್ಟಿ ಹಿಂದಿನ ಪಾಪಗಳು ಹೊಣಲ್ಪಡುವುದು ಮಾತ್ರವಲ್ಲ ಕ್ರಿಸ್ತನ ಪುನುರುತ್ಥಾನದಲ್ಲಿಯೂ ಪಾಲು ಹೊಂದುತ್ತಾನೆ.ಇಗೋ ಹೊಸದವುಗಳು ಬಂದಿದೆ.(ಹೆಚ್ಚಿನ ವಿವರಗಳಿಗೆ "ಪರಿಶುದ್ದಾತ್ಮ " ಅಧ್ಯಯನದಲ್ಲಿ ಪವಿತ್ರಾತ್ಮ ನಮ್ಮೊಳಗೆ ವಾಸಿಸುವ ಭಾಗವನ್ನು ನೋಡಿರಿ.)

ಈ ಹೊಸ ಸೃಷ್ಟಿಯೆಂದರೇನು?ಹೊರಟುಹೋದ ಹಳೇ ಹಿಂದಿನ ಸಂಗತಿಗಳೆಂದರೇನು?ಬಹಳ ಮುಖ್ಯವಾಗಿ ಬಂದಿರುವ ಸಂಗತಿಗಳೆಂದರೇನು?

### New Potential ಹೊಸ ಸಾಮರ್ಥ್ಯ

ಪರ್ವತದ ಪ್ರಸಂಗದಲ್ಲಿ,ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ : **ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ.**(ಮತ್ತಾಯ 5:48)

ಯೇಸುವಿನ ಹೇಳಿಕೆಗೆ ಕೆಲವರು ಹಲವು ವ್ಯರ್ಥ ವಿವರಣೆಯನ್ನು ಕೂಡುತ್ತಾರೆ, ಕೆಲವರು "ಪರಿಪೂರ್ಣ ಪ್ರೀತಿ" ಯನ್ನು (ಅದು ಪರಿಪೂರ್ಣ ದೋಷರಹಿತ ಸ್ವಭಾವವಿಲ್ಲದೆ ಸಾಧ್ಯ) ಎಂಬಂತೆ ಮಾತನಾಡುವಾಗ ಯೇಸು ಕ್ರಿಸ್ತನು ಸ್ಪಷ್ಟವಾಗಿ ಹೇಳುವುದೇನಂದರೆ- ನಾವೆಲ್ಲರೂ ಎಲ್ಲಾ ವಿಷಯದಲ್ಲಿಯೂ ಪರಲೋಕದಲ್ಲಿರುವ ನಮ್ಮ ತಂದೆಯಂತಿರಬೇಕು.

ಇದೇ ಆಲೋಚನೆ ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ಬರೆಯಲ್ಪಟ್ಟಿದೆ.ಪೌಲನು ನಮ್ಮ ಪೂರ್ವ ನಿರ್ಣಯದ ಉದ್ದೇಶ ಬಗ್ಗೆ ಮಾತಾಡುತ್ತಾ " **ತನ್ನ ಮಗನ ಸಾರೂಪ್ಯವುಳ್ಳವರಾಗುವದಕ್ಕೆ ಮೊದಲೆ ನೇಮಿಸಿದನು"** (ರೋಮಾಯ 8:29) ಪೌಲನು ಹೇಳುವುದು-**ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವರಾಗಿರಿ** (1 ಕೊರಿಂಥ 11:1) ಪೇತ್ರನು ಕ್ರಿಸ್ತನ ಬಗ್ಗೆ ಬರೆದಿರುವುದೇನಂದರೆ **ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ**

**ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿಹೋದನು. ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ; ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ."**(1ಪೇತ್ರ 2:21,22) ಕ್ರೈಸ್ತರಾದ ನಾವು ಕ್ರಿಸ್ತನ ಸ್ವರೂಪವಾಗಬೇಕು.ಆತನನ್ನು ಅನುಸರಿಸುವವರಾಗಬೇಕು ಮತ್ತು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕು.ಸರಳವಾಗಿ ಕ್ರೈಸ್ತರಾದ ನಾವು ಕ್ರಿಸ್ತನಂತಾಗಬೇಕು.

ಆದರೆ ಇದು ಸಾಧ್ಯವೇ?ದೇವರು ನಾವು ಪೂರೈಸಲಾಗದ ಕಾರ್ಯವನ್ನು ನಮ್ಮ ಮುಂದೆ ಇಟ್ಟಿದ್ದಾನೂ?ನಾವೆಲ್ಲ ಮುಟ್ಟಲಾರದ ಗುರಿಯನ್ನು ಆತನು ನಮಗೆ ಇಟ್ಟಿದ್ದಾನೊ?ನಾವಾಗಲಿ ನಮ್ಮ ಪಿತೃಗಳಾಗಲಿ ಹೂರಲಾರದ ಬಾರಗಳನ್ನು ಹಾಕಿದ್ದಾನೂ?

ಈ ಮೇಲಿನ ಪ್ರಶ್ನೆಗಳಿಗೆ ಉತ್ತರವು ನಾವು ನೋಡುವುದು ಎನೆಂದರೆ "ಇಲ್ಲ " ದೇವರು ನಮಗೆಲ್ಲ ಪರಿಪೂರ್ಣರಾಗುವಂತೆ ಬಾಗಿಲನ್ನು ತೆರೆದಿದ್ದಾನೆ. ಕ್ರಿಸ್ತನಂತಾಗುವುದು ಒಂದು ಪ್ರಕ್ರಿಯೆ ಅದು ಬಾವಚಿತ್ರ ತೆಗೆದು ರೊಪಿಸಿದ ಪ್ರಕ್ರಿಯೆಯಂತೆ.ಪರಿಪೂರ್ಣಮಾಡಿ " - ಅದು ಮೆದುಳಿನ ಚಿತ್ರದಲ್ಲಿ ಅಳವಡಿಸಲ್ಪಡಿಸುವ ಹಾಗೆ.ಅದು ನಮ್ಮ ಬಾವಚಿತ್ರ ತೆಗೆದು, ರೂಪಿಸಿ, ತೊಳೆದು ನೋಡುವಂತಿರುವ ಶಾಶ್ವತ ಚಿತ್ರ ಅಭಿವೃದ್ಧಿ ಪಡಿಸಬೇಕು. ಹಾಗೆ,ನಾವು ತೆಗೆದ ಚಿತ್ರ ಯಾವಾಗಲೂ ನಮ್ಮ ಮುಂದೆಯೇ ಇಟ್ಟಿರಬೇಕು ಇಲ್ಲವಾದರೆ ಅದನ್ನ ಮರೆತುಹೋಗುತ್ತೇವೆ.

## New Picture ಹೊಸ ಚಿತ್ರ

ಹಾಗಾದರೆ ಮೊದಲ ಕಾರ್ಯವೂ ನಮ್ಮ ಬಾವಚಿತ್ರ ತೆಗೆದುಕೊಂಡ ನಂತರ ನಾವು ತಂದೆಯಾದ ದೇವರು ಪರಿಪೂರ್ಣನು ದೋಷವಿಲ್ಲದವನಾಗಿರುವಂತೆ ನಾವು ಆತನಂತೆ ಸಂಪೂರ್ಣರಾಗಬೇಕು ಎಂದು ತಿಳಿದುಕೊಂಡು, ಇದು ಹೇಗೆ ಸಾಧ್ಯ? ಎಂದು ಕಂಡುಕೊಂಡು ಅರ್ಥಮಾಡಿಕೊಳ್ಳುವುದು,ಅನುಸರಿಸುವುದು.

ನಾವು ಯೇಸುವಿನ ಮಾತುಗಳೊಂದಿಗೆ ಪ್ರಾರಂಭಿಸುತ್ತೇವೆ:**"ನಿಮಗೆ ನಿಜನಿಜವಾಗಿ ಹೇಳುತ್ತೇನೆ ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ,ಆದರೂ ಪರಲೋಕ ರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.**(ಮತ್ತಾಯ 11:11)

ಯೇಸು ಯೋಹಾನ ವಿಷಯದಲ್ಲಿ ವಿವರಿಸಿವುದೇನೆಂದರೆ ಸ್ತ್ರೀಯರಲ್ಲಿ ಹುಟ್ಟಿದವರಲ್ಲಿ ಆತನೇ ಶ್ರೇಷ್ಠ ಎಂದು ಹೇಳುವಾಗ (ತನ್ನನ್ನು ಇದರಿಂದ ಹೊರತುಪಡಿಸಿಕೊಂಡನು ಎನ್ನುವ ಆಧಾರಿತ ವಾಕ್ಯ ನೋಡುವ) **(ಮತ್ತಾಯ 11:9)** ರಲ್ಲಿ ಯೇಸು ಹೇಳಿದ್ದು ಯೋಹಾನನು ಪ್ರವಾದಿಗಿಂತಲೂ ಹೆಚ್ಚಿನವನು.ಯೇಸುವಿನ ಪೂರ್ಣ ಪರಿಣಾಮ ಪಡೆಯಬೇಕಾದರೆ ಹಳೆ ಒಡಂಬಡಿಕೆಯ ಉತ್ತಮ ವ್ಯಕ್ತಿತ್ವದ ಹೆಸರುಗಳನ್ನು ಪರಿಗಣಿಸುವ.ಹೇಬೇಲನು,ಹನೋಕನು,ಅಬ್ರಹಾಮ,ಮೋಶೆ,ದಾವೀದ,ಎಲೀಯ,ಎಲೀಷ,ಯೆಶಾಯ,ಜೆರುಬ್ಬಾಬೇಲ,ಮತ್ತು ಜಕರ್ಯನು ನಮ್ಮ ಮನಸ್ಸಲ್ಲಿ ಬರುತ್ತಾರೆ.ಇವರು ಎಂಥವರೆಂದರೆ ತಮ್ಮ ನಂಬಿಕೆಯ ಮೂಲಕ ರಾಜ್ಯಗಳನ್ನು ವಶಪಡಿಸಿಕೊಂಡರು,ನೀತಿ ಕಾರ್ಯಗಳನ್ನು ಮಾಡಿದರು,ವಾಗ್ದಾನಗಳನ್ನು ಪಡೆದುಕೊಂಡರು,ಸಿಂಹದ ಬಾಯನ್ನು ಕಟ್ಟಿದವರು,.ಬೆಂಕಿಯ ಶಕ್ತಿಯನ್ನು ನಂದಿಸಿದರು,ಕತ್ತಿಯ ಬಾಯಿಗೆ ತಪ್ಪಿಸಿಕೊಂಡರು,ನಿರ್ಬಲರಾಗಿದ್ದು ಬಲಿಷ್ಠರಾದರು,ಯುದ್ಧದಲ್ಲಿ ಪರಾಕ್ರಮಶಾಲಿಗಳಾದರು,ವೈರಿಗಳ ದಂಡುಗಳನ್ನು ಓಡಿಸಿಬಿಟ್ಟರು.**(ಇಬ್ರಿಯ 11:34).**

ಇದು ಪ್ರಭಾವಶಾಲಿ ಪಟ್ಟಿ.ಆದರೆ ಯೋಹಾನನು,ಹಳೆ ಒಡಂಬಡಿಕೆಯ ಪ್ರವಾದಿಗಳಲ್ಲಿ ಕಡೆಯವನು(ಹೊಸ ಒಡಂಬಡಿಕೆಯ ಪ್ರಾರಂಭ ಕರ್ತನ ಮರಣದ ನಂತರ ಪ್ರಾರಂಭವಾಯಿತು- **(ಇಬ್ರೀಯ 9:16,17)**,ಇವರೆಲ್ಲರಲ್ಲಿ ಈತನೇ ಶ್ರೇಷ್ಠನು.ಇದರಿಂದ ಸ್ಪಷ್ಟವಾದ ವಿಷಯವೇನೆಂದರೆ ದೇವರು ಕಾಲದಿಂದಲೂ ನೋಡಿದ ಮನುಷ್ಯರಲ್ಲಿ ಆತ್ಯೂತ್ತಮನು ತನಗೆ

ಮುಂದಾಗಿ ಆರಿಸಿಕೊಂಡನು,ಆತನ ಸಂದೇಶಕನು ಕ್ರಿಸ್ತನ ದಾರಿಯನ್ನು ಸಿದ್ಧಪಡಿಸುವನು **(ಮತ್ತಾಯ 11:10).**ಹೇಬೇಲನಿಂದ ಜಕರ್ಯನವರೆಗು ಯೋಹಾನನೇ ಶ್ರೇಷ್ಠನು.

ನಂತರ ಯೇಸು ಹೇಳಿದ್ದು **"ಆದರೂ ಪರಲೋಕ ರಾಜ್ಯದದಲ್ಲಿರುವ ಕನಿಷ್ಠನು ಯೋಹಾನನಿಗಿಂತಲೂ ಶ್ರೇಷ್ಠ".**ಹಾಗಾದರೆ ಪರಲೋಕ ರಾಜ್ಯ ಎಂದರೇನು?

ಕ್ರಿಸ್ತನ ಸಭೆಯು ಪರಲೋಕ ರಾಜ್ಯ ಅದಲು ಬದಲಾಗಿ ಹೇಳಲ್ಪಟ್ಟರುವ ವಾಕ್ಯಗಳನ್ನು  ನೋಡಬಹುದು,(ಕ್ರಿಸ್ತನ ಸಭೆಯ ಅಧ್ಯಯನ ಭಾಗದಲ್ಲಿ ಸಭೆಯ ಮತ್ತೊಂದು ಆರ್ಥ ರಾಜ್ಯ ಎಂದು ತಿಳುಕೊಳ್ಳುತ್ತೇವೆ) ಉದಾ:**ಕೊಲಸ್ಸೆ 1:13**,ಕ್ರೈಸ್ತರು (ಯಾರಾರು ಅಂಧಕಾರ ದೊರತನದಿಂದ ಬಿಡಿಸಲ್ಪಟ್ಟವರೂ) ಆಗಲೆ ಕ್ರಿಸ್ತನ ರಾಜ್ಯ ದಲ್ಲಿ ಸೇರಿಸಲ್ಪಟ್ಟಿದ್ದಾರೆ;ಕ್ರಿಸ್ತನ ರಾಜ್ಯವು ಆತನ ಶರೀರವೆಂಬ ಸಭೆಗೆ ಸರಿಸಮಾನವಾದದ್ದು. ಮತ್ತಾಯ 16:28ನ್ನು **ಮಾರ್ಕ 9:1** ಹೋಲಿಸಿ ನೋಡಿದಾಗ ಕ್ರಿಸ್ತನ ರಾಜ್ಯ ಮತ್ತು ದೇವರ ರಾಜ್ಯ ಒಂದೇ ಎಂದು ತಿಳುಯುತ್ತೇವೆ.ಮತ್ತು ಮತ್ತಾಯ 13:11 ವಚನವನ್ನು **ಮಾರ್ಕ4:11** ಹೋಲಿಸಿ ನೋಡಿದಾಗ ಪರಲೋಕ ರಾಜ್ಯವು ದೇವರ ರಾಜ್ಯವೆಂದು ಸ್ಪಷ್ಟವಾಗಿ ತೋರಿಸುತ್ತದೆ.

ಈಗ ನಮ್ಮ ಮೂಲ ಹೇಳಿಕೆಗೆ ಮರಳಿ ಬರುವ ದೇವರ ರಾಜ್ಯದಲ್ಲಿರುವ ಕನಿಷ್ಠನು ಸ್ನಾನಿಕನಾದ ಯೋಹಾನನಿಗಿಂತ ಶ್ರೇಷ್ಠ ಇದನ್ನು ಇನ್ನು ನಿರ್ದಿಷ್ಟವಾಗಿ ನೋಡುವಾಗ ಒಬ್ಬ ಕನಿಷ್ಠ ಕ್ರೈಸ್ತನು ಮೋಶೆಯಾಗಲಿ ದಾವೀದನು  ಎಲೀಯನಗಿಂತಲೂ ಪರಲೋಕ ರಾಜ್ಯದಲ್ಲಿರುವ ಕನಿಷ್ಠನು ಹೆಚ್ಚಿನವನು.ಆದರೆ ಇದು ಆಗುವ ಬಗೆ ಹೇಗೆ?

ಸ್ತ್ರೀಯರಲ್ಲಿ ಹುಟ್ಟಿದ ನಾನು ಬಹಳ ಕನಿಷ್ಠ ಸಾಮರ್ಥ್ಯವುಳ್ಳವನು ಪಾಪವು ನಮ್ಮನ್ನು ಆತಿಶಯವಾಗಿ ಆಳುತಿತ್ತು,ಮತ್ತು ನಾವು ದೇವರ ಮಹಿಮೆಯನ್ನು ಕಳೆದುಕೊಂಡೆವು **(ರೋಮಾಯ 3:23).**ಸ್ತ್ರೀಯರಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯ ಇತಿಹಾಸ ಇದೆ.

ಆದರೆ ಯೋಹಾನನು ಬರೆದ ಸುವಾರ್ತೆಯ ಪ್ರಾರಂಭದಲ್ಲಿ ಇದಕ್ಕೆ ದೇವರು ಪರಿಹಾರ ಕೊಟ್ಟಿದ್ದಾರೆ.ಯೇಸು ಈ ಲೋಕಕ್ಕೆ ಬಂದಾಗ,ಆತನು ಉಂಟುಮಾಡಿದ ಲೋಕವು ಆತನನ್ನು ಆರೆಯಲಿಲ್ಲ.ಆತನ ಸ್ವಂತ ಜನ ಇಸ್ರಾಯೇಲರ  ಹತ್ತಿರ ಬಂದಾಗ ಅವರು ಆತನನ್ನು ಆಂಗೀಕರಿಸಲಿಲ್ಲ, ಆದರೇ ಆತನನ್ನು ತಿರಸ್ಕರಿಸಿದರು,ಆದರೂ ಅದರಲ್ಲಿ ಕೆಲವರು ಆತನನ್ನು ಕ್ರಿಸ್ತನೆಂದು ಗುರುತುಹಿಡಿದರು.ಇಂತಹ ಜನರ ವಿಷಯವಾಗಿ ಬರೆದಿರುವುದೇನಂದರೆ **"ಯಾರಾರು ಆತನನ್ನು ಅಂಗಿಕರಿಸಿದರರೋ,ಅಂದರೆ ಆತನ ಹೆಸರಿನ ಮೇಲೆ ನಂಬಿಕೆಯಿಟ್ಟರೋ,ಆವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.ಇವರು ರಕ್ತಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ,ದೇವರಿಂದಲೇ ಹುಟ್ಟಿದವರು".(ಯೋಹಾನ 1:12,13).**ಯಾರಾರು ಆತನನ್ನು ಕ್ರಿಸ್ತನೆಂದು ಗುರುತುಹಿಡಿದರೊ ಅವರಿಗೆ ಆತನ ಪುನುರುತ್ಥಾನವಾದ ಸ್ವಲ್ಪ ಸಮಯ ನಂತರದಲ್ಲಿಯೇ ದೇವರ ಮಕ್ಕಳಾಗುವ ಅಧಿಕಾರ ಪವಿತ್ರಾತ್ಮನ ದಾನ ಮೂಲಕ ಕೊಟ್ಟನು. **(ಯೋಹಾನ 7:37).**

ಸ್ನಾನಿಕನಾದ ಯೋಹಾನನಿಗಿಂತ ಶ್ರೇಷ್ಠ ಯಾರು ಸ್ತ್ರೀಯರಲ್ಲಿ ಹುಟ್ಟಿಲ್ಲವಾದರೂ ಆತನು ಸ್ತ್ರೀಯರಲ್ಲಿ ಹುಟ್ಟಿದವರ ಹಾಗೆ ಕನಿಷ್ಟ ಸಾಮರ್ಥ್ಯವುಳ್ಳವನಾಗಿದ್ದನು.ಯಾಕೆಂದರೆ ಆತನು ಸ್ವಭಾವಿಕವಾಗಿ ಶರೀರದಿಂದ ಹುಟ್ಟಿದವನು.ಆದರೆ ಕನಿಷ್ಠ ಕ್ರೈಸ್ತನು ಆತನಗಿಂತಲೂ ಶ್ರೇಷ್ಠ ಯಾಕೆಂದರೆ ಈ ಸಾರಿ ಆತನು ಸ್ತ್ರೀಯಿಂದ ಹುಟ್ಟದೆ *ದೇವರಿಂದಲೇ ಹುಟ್ಟಿದವನು!.*

ನಾವು ಈಗ ಅರ್ಥ ಮಾಡಿಕೊಳ್ಳಲು ಪ್ರಾರಂಭಿಸಬೇಕು ಯಾಕೆ ಯೇಸುವಿನ ಆಜ್ಞೆಯು ಸಂಪೂರ್ಣವಾದದ್ದು ಇದು ಈಗ ಸಾಧ್ಯ.ನಾವು ಹೊಸ ಸೃಷ್ಟಿಯಾದ ಮೇಲೆ,ನಮಗೆ ಹೊಸ ತಂದೆಯಿದ್ದಾನೆ,ಮತ್ತು ಭೂಸಂಧವಾದ ತಂದೆಯ ಕನಿಷ್ಠ ಸಾಮರ್ಥ್ಯದ ಸ್ಥಿತಿ ಈಗ ಇಲ್ಲದಂತಾಗಿದೆ. (ಯೇಸು ಮತ್ತಾಯ 11:11 ರಲ್ಲಿರುವ ತನ್ನ ವಿಷಯದ ಕುರಿತಾಗಿ ಸ್ತ್ರೀಯಿಂದ ಹುಟ್ಟದೆ,ದೇವರಿಂದಲೇ ಹುಟ್ಟಿದನು).

## Dead To Sin ಪಾಪದ ಪಾಲಿಗೆ ಸತ್ತವರು

ಪೌಲನು ರೋಮಾಯ 6 ರಲ್ಲಿ ಈ ಚಿತ್ರವನ್ನು ಪ್ರೆಶ್ನೆಯ ಮೂಲಕ ಚಿತ್ರಿಸಿದ್ದಾನೆ. **"ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನು ಇರಬೇಕೋ?"** "ಎಂದಿಗೂ ಇರಬಾರದು".ನಂತರ ಎರಡು ಹಂತದಲ್ಲಿ,ನಾವು ಪಾಪವಿಲ್ಲದೆ ಜೀವಿಸಬಹುದೆಂದು ತೋರಿಸಲಾಗಿದೆ.ಎರಡು ಹಂತಗಳು ನಮಗಿರುವ ಚಿತ್ರದ ಹಾಗಿದೆ.

ಮೊದಲನೆ ಚಿತ್ರ ಆ ಹಳೇ ಮನುಷ್ಯ ಸತ್ತು ಹೋಗಿ ಊಣಲ್ಪಟ್ಟಿದ್ದಾನೆ. **" ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು.ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ.ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ."(ರೋಮಾಯ 6:3-7).**

ಒಂದು ಶವಗಾರಕ್ಕೆ ಹೋಗೋಣ(ನಾವು ಮರಣದ ವಿಷಯದಲ್ಲಿ ಅಧ್ಯಯನ ಮಾಡುತ್ತಿದ್ದೇವೆಂದು ಜ್ಞಾಪಕದಲ್ಲಿರಲಿ)ಒಬ್ಬನ ಶವಗಾರದ ಪೆಟ್ಟಿಗೆ ತೆಗೆಯೋಣ ಆತನನ್ನು ಶೋಧಿಸುವದಕ್ಕೆ ಪ್ರಯತ್ನಿಸಿ. ಯಾವ ಬಾವಚಿತ್ರ ಅದರ ಮಂದೆ ತೋರಿಸಿದರೆ ಪಾಪದ ಆಲೋಚನೆ ಹುಟ್ಟುತ್ತದೆ? ಆತನ ಹೃದಯದಲ್ಲಿ ಭಯ ಹುಟ್ಟಿಸುವದಕ್ಕಾಗುವುದೂ ನೋಡಿರಿ?

ಆದರೆ ಅಲ್ಲಿ "ಎನು ಆಗುವುದಿಲ್ಲ "."ಯಾಕೆಂದರೆ ಆತನು ಸತ್ತುಹೋಗಿದ್ದಾನೆ!".

" ಈ ಪ್ರಕರಣದ ರೀತಿಯಲ್ಲಿ ಪ್ರತಿಯೊಬ್ಬ ಕ್ರೈಸ್ತನು ತನ್ನನ್ನು ದೃಷ್ಟಸಿಕೊಳ್ಳಬೇಕು.ಆತನ ದೀಕ್ಷಸ್ನಾನದಲ್ಲಿ ಪೂರ್ವ ಸ್ವಭಾವವು ಸತ್ತು,ಹೊಣಲ್ಪಟ್ಟಿದೆ. ಕರ್ತನ ವಾಕ್ಯವೇನೆಂದರೆ "ಯಾವನು ಮರಣಹೊಂದಿದ್ದಾನೊ ಪಾಪದಿಂದ ಬಿಡುಗಡೆಯಾಗಿದ್ದಾನೆ.

ಸತ್ಯವೇದದ ನೀತಿಗಳಲ್ಲಿ ಒಂದೇನೆಂದರೆ ಪ್ರತಿಯೊಬ್ಬ ವ್ಯಕ್ತಿಯ ಬದುಕಿನಲ್ಲಿ ತನ್ನ ಸ್ವಂತ ಅಂತರ್ಯದ ಚಿತ್ರವನ್ನು ಒಯ್ಯುತ್ತಾ ಹೋಗುತ್ತಾನೆ.ಈ ಒಳ ಚಿತ್ರವನ್ನು ಆಧುನಿಕ ಸಮಾಜದಲ್ಲಿ ಸ್ವಯಂ ಚಿತ್ರ ಎನ್ನುತ್ತಾರೆ.ಸತ್ಯವೇದವು ಹೀಗೆ ಹೇಳುತ್ತದೆ: **"ಅವನು(ಮನುಷ್ಯನು) ತನ್ನ ಒಳಗಿನ ಯೋಚನೆಯಂತೆಯೆ ಇದ್ದಾನೆ.** (ಜ್ಞಾನೋಕ್ತಿ 23:7) ನಮ್ಮ ಆಂತರ್ಯ ಚಿತ್ರ ಹೇಗೊ ಹಾಗೆಯೇ ನಾವು ನಡತೆಯಿರುತ್ತದೆ.ನಿಜವಾದ ಬದಲಾವಣೆಯು ನಮ್ಮ ಆಂತರ್ಯ ಚಿತ್ರ ಬದಲಾಗಬೇಕು.

ಮನುಷ್ಯನ ಜೊತೆಗಿನ ಸಂಬಂಧದಲ್ಲಿ ದೇವರು ನೇರವಾಗಿ ಹೃದಯಕ್ಕೆ ಹೋಗುತ್ತಾರೆ.ಮೊದಲನೆ ಆಂಶವು ಒಂದಲ್ಲ ಅಥವ ಇನ್ನೊಂದು ಬಗೆಯಲ್ಲಿ ನಾವು ಸೋತುಹೋಗಿದ್ದೇವೆಂದು ಸ್ಥಾಪಿಸುವುದು. **"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ."(ರೋಮಾಯ 3:23).**

ಮನುಷ್ಯನ ಸಮಸ್ಯೆಯ ಜೊತೆ ಕೆಲಸ ಮಾಡದೆ ಅದನ್ನು ಸರಿಪಡಿಸುವ ಕೆಲಸ ಮಾಡದೆ ಆ ಹಳೇ ಮನುಷ್ಯನನ್ನ ಹೊಣುತ್ತಾರೆ.ಇದೇ ಮೊದಲನೇ ಆಂತರ್ಯದ ಚಿತ್ರ ದೇವರ ವಾಕ್ಯದ ಮೂಲಕ ಮೊಳೆಯಿಂದ ಜಡೆದಿದ್ದಾನೆ-"ಯಾವನು ಮರಣಹೊಂದಿದ್ದಾನೂ ಪಾಪದಿಂದ ಬಿಡುಗಡೆಯಾಗಿದ್ದಾನೆ!" ಪೂರ್ವ ಸ್ಥಿತಿ ಹೋಯಿತು!

## Alive To God ದೇವರಿಗಾಗಿ ಜೀವಿಸುವವರು

ಪೌಲನು ರೋಮಾಯ 6 ರಲ್ಲಿನ ಮೊದಲ 7 ವಚನಗಳಲ್ಲಿ ಪ್ರಾಥಮಿಕವಾಗಿ ಹಳೇ ಮನುಷ್ಯನು ಹೊಣಲ್ಪಡಬೇಕೆಂದು ಒತ್ತಿ ಹೇಳುತ್ತಾನೆ.8-11ನೇ ವಚನಗಳಲ್ಲಿ ಹೊಸ ಚಿತ್ರವನ್ನು ಕೊಡುತ್ತಾನೆ. **"ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ. ಯಾಕಂದರೆ ಕ್ರಿಸ್ತನು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದದರಿಂದ ಆತನು ಇನ್ನು ಮುಂದೆ ಸಾಯತಕ್ಕವನಲ್ಲ, ಮರಣವು ಇನ್ನೂ ಆತನನ್ನು ಆಳುವದಿಲ್ಲವೆಂದು ನಮಗೆ ತಿಳಿದದೆ. ಆತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ; ಆತನು ಜೀವಿಸುವದು ದೇವರಿಗಾಗಿಯೇ."(ರೋಮಾಯ 6: 8-10)** ನಮ್ಮ ಜೊತೆಯಲ್ಲಿ ವ್ಯವಹರಿಸುವಾಗ ಪ್ರೇರೇಪಿಸಲ್ಪಟ್ಟ ಅಪೋಸ್ತಲನಾದ ಪೌಲನು ಕ್ರಿಸ್ತನ ಪುನುರುತ್ಥಾನ ಚಿತ್ರಿಸಿದ್ದಾನೆ.

ಯೇಸುವಿನ ಪುನುರುತ್ಥಾನ ವಿವರಣೆಯು **"ಪಾಪದ ಪಾಲಿಗೆ ಸತ್ತವನು,ದೇವರ ಪಾಲಿಗೆ ಜೀವಿಸುವವನು"** ಈಗ ನಮ್ಮ ಪ್ರಶ್ನೆಯೇನೆಂದರೆ "ಯೇಸುವಿನ ಪುನುರುತ್ಥಾನ ನಂತರ ಸೈತಾನನಿಗೆ ಯೇಸುವಿನ ಮೇಲಿನ ಶಕ್ತಿ ಎಷ್ಟಿತ್ತು? ಇಧಕ್ಕೆ ಉತ್ತರ ಖಂಡಿತವಾಗಿ "ಯಾವುದೇ ಅಧಿಕಾರ ಇಲ್ಲ." ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ಮೇಲೆ ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ, **(ಇಬ್ರೀಯ 2:14)** ಯೇಸು ಶರೀರದಲ್ಲಿದ್ದಾಗ ಶೋಧಿಸಬಹುದಾಗಿದ್ದರೂ,ಯೇಸು ತನ್ನ ಪುನುರುತ್ಥಾನ ಮೂಲಕ ಸೈತಾನನ ಶಿರಸ್ಸನ್ನು ಜಜ್ಜಿಬಿಟ್ಟನು.ಈಗ ಆತನು ಶೋಧನೆಯಿಂದ ಹೊರಗಿದ್ದು ಯಾರು ಶೋಧಿಸುವುದಕ್ಕಾಗುವುದಿಲ್ಲಾ,ಆತನು ಸಹ ಯಾರನ್ನು ಶೋಧಿಸುವುದಿಲ್ಲ,**(ಯಾಕೋಬ 1:13)** ಮರಣವು ಇನ್ನೆಂದಿಗೂ ಆತನನ್ನು ಹಿಡಿಯುದಕ್ಕಾಗುವುದೇಯಿಲ್ಲಾ,ಮತ್ತು ಈ ಪುನುರುತ್ಥಾನ ಸ್ಥಿತಿಯಲ್ಲಿ **"ಪಾಪದ ಪಾಲಿಗೆ ಸತ್ತವನು, ದೇವರ ಪಾಲಿಗೆ ಜೀವಿಸುವವನು".**

**ಈಗ ನಾವು ವಚನ 11 ಧ್ಯಾನ ಮಾಡುವಾಗ, ನಿರ್ದಿಷ್ಟವಾಗಿ ನಮಗೋಸ್ಕರ ಬರೆಯಲ್ಪಟ್ಟಿದೆ "ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ."** ನಾವು ಈ ವಾಕ್ಯ ನೆನಪಿಸಿಕೊಳ್ಳುವಾಗ **"ಪಾಪದ ಪಾಲಿಗೆ ಸತ್ತವನು ದೇವರಿಗಾಗಿ ಜೀವಿಸುವವನು"** ಎಂಬುದು ಯೇಸು ತನ್ನ ಪುನುರುತ್ಥಾನ ಸ್ಥಿತಿಯ ನಿಜರೂಪ,ಈ ಚಿತ್ರವನ್ನು ಪರಿಗಣಿಸಿರೆಂದು ದೇವರು ಎಣಿಸಿಕೊಳ್ಳಿರೆಂದು ಉತ್ತೇಜಿಸುವನಾಗಿದ್ದಾನೆ, – ಈ ಪದವನ್ನು ಬರೆಯಿಸಿದ್ದಾನೆ ಅಂದರೆ ನಾವು ಈಗಾಗಲೇ ಪುನುರುತ್ಥಾನ ಹೊಂದಿದ್ದೇವೇ!ಯೇಸು ಸಮಾಧಿಯಿಂದ ಎದ್ದು ಬಂದ ಹಾಗೆ ನಾವು ಯೇಸುವಿನ ಹಾಗೆ ಪುನುರುತ್ಥಾನವಾಗಿದ್ದೇವೆಂದು ಎಣಿಸಬೇಕು.

ನಮ್ಮ ದೀಕ್ಷಾಸ್ನಾನದಲ್ಲಿ ದೇವರು ಹಳೆಯ ಮನುಷ್ಯನನ್ನು ನಾಶಪಡಿಸಿ ಹೊಣಲ್ಪಡುವಂತೆ ಆಜ್ಞಾಪಿಸಿದನು,ಆದರೂ ಬಹಳ ಮುಖ್ಯವಾಗಿ ಹೊಸ ಮನುಷ್ಯನ ಸೃಷ್ಟಿಸಿದನು!ಈ ಹೊಸ ಸೃಷ್ಟಿಯು ದೇವರ ಆಜ್ಞೆಯ ಮೇರೆಗೆ ಈ ಮನುಷ್ಯ ತಾನು ಪುನುರುತ್ಥಾನ ಹೊಂದಿದ್ದೇನೆಂದು ಎಣಿಸಬೇಕು.

"ಈ ಪುನುರುತ್ಥಾನ ಸ್ಥಿತಿ ಪ್ರಮುಖವಾಗಿ ಅತಿಯಾದ ಒತ್ತಡ ಹೇರಬಾರದು.ಒಬ್ಬ ವ್ಯಕ್ತಿ ತನ್ನನ್ನು ಪಾಪಿಯೆಂದು ಅಥವ ಸೋತುಹೋದವನೆಂದು ಅಂದುಕೊಂಡಿದ್ದರೆ ಅವನು ಹಾಗೆ ನಡೆದುಕೊಳ್ಳುತ್ತಾನೆ.ದೇವರು ಮನುಷ್ಯನಿಗೆ ಅವನ ಸಮಸ್ಯೆಗಳಿಗೆ ಪರಿಹಾರ ಎನೆಂದರೆ ಸೈತಾನನ ಕೈಗೆ ಸಿಕ್ಕದಂತೆ ನಮಗೆ ಸ್ವಂತ ರೂಪ ನೀಡುವುದು.ಕ್ರಿಸ್ತನಲ್ಲಿ ನಾವು ಜೀವಿಸುವಂತೆ ಇನ್ನೆಂದು ಪಾಪಮಾಡದಂತೆ ನಾವು ನೋಡಿಕೊಳ್ಳಬೇಕು. ಅವನು (ಮನುಷ್ಯನು) ಒಳಗಿನ ಯೋಚನೆಯಂತೆಯೇ ಇದ್ದಾನೆ;

ಆದ್ದರಿಂದ ಪೌಲನು ದೃಡವಾಗಿ ಹೇಳುವುದು **"ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು**."**(ರೋಮಾಯ 6:5).**ಯೇಸುವಿನ ಮರಣದಲ್ಲಿ ದೀಕ್ಷಾಸ್ನಾನದಲ್ಲಿ ಐಕ್ಯವಾಗುವೆವೊ, ಅದೇ ರೀತಿಯಲ್ಲೇ ಆತನ ಪುನುರುತ್ಥಾನ ಶಕ್ತಿಯಲ್ಲಿ ಐಕ್ಯವಾಗುವೆವು.ಈಗ!ಶೋಧನೆಗಳು ಮತ್ತು ಭಯ ಪಾಪದ ಪಾಲಿಗೆ ಸತ್ತವನ ಮೇಲೆ ಯಾವ ಪರಿಣಾಮ ಬೀರುವದಿಲ್ಲ,ಹಾಗಾದರೆ ಪಾಪದ ಪಾಲಿಗೆ ಸತ್ತು ಹೂಣಲ್ಪಟ್ಟು ಪುನುರುತ್ಥಾನವಾದ ಮೇಲೆ ಯಾವ ಪರಿಣಾಮ ಬೀರುವುದಿಲ್ಲ

ಇದೇ ಹೇಳಿಕೆಗಳು ಹೊಸ ಒಡಂಬಡಿಕೆಯ ಕೊಲಸ್ಸೆ ಪತ್ರಿಕೆಯಲ್ಲಿ ಬರೆಯಲ್ಪಟ್ಟಿದೆ **"ಆದಕಾರಣ ಕಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ. ಯಾಕಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ. ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ. ಆದದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ. ಜಾರತ್ವ ಬಂಡುತನ ಕಾಮಾಭಿಲಾಷೆ ದುರಾಶೆ ವಿಗ್ರಹಾರಾಧನೆಗೆ ಸಮವಾಗಿರುವ ಲೋಭ ಇವುಗಳನ್ನು ವಿಸರ್ಜಿಸಿಬಿಡಿರಿ; ಇವುಗಳ ನಿಮಿತ್ತ ದೇವರ ಕೋಪವು ಉಂಟಾಗುತ್ತದೆ. ಪೂರ್ವದಲ್ಲಿ ನೀವು ಸಹ ಈ ದುರ್ಭಾವಗಳ ಅಧೀನದಲ್ಲಿದ್ದು ಈ ಕೆಲಸಗಳನ್ನು ನಡಿಸುತ್ತಿದ್ದಿರಿ. ಈಗಲಾದರೋ ಕ್ರೋಧ ಕೋಪ ಮತ್ಸರ ದೂಷಣೆ ಬಾಯಿಂದ ಹೊರಡುವ ದುರ್ಭಾಷೆ ಇವುಗಳನ್ನು ವಿಸರ್ಜಿಸಿಬಿಡಿರಿ. ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ. ಇದನ್ನು ಧರಿಸಿಕೊಂಡಿರುವದರಲ್ಲಿ ಗ್ರೀಕನು ಯೆಹೂದ್ಯನು ಎಂಬ ಭೇದವಿಲ್ಲ; ಸುನ್ನತಿ ಮಾಡಿಸಿಕೊಂಡವರು ಸುನ್ನತಿಮಾಡಿಸಿಕೊಳ್ಳದವರು ಎಂಬ ಭೇದವಿಲ್ಲ; ಮ್ಲೇಚ್ಛ ಹೂಣ ಎಂಬ ಹೆಸರುಗಳಿಲ್ಲ; ಆಳು ಒಡೆಯ ಎಂಬ ಭೇದವಿಲ್ಲ. ಆದರೆ ಕ್ರಿಸ್ತನೇ ಸಮಸ್ತರಲ್ಲಿಯೂ ಸಮಸ್ತವೂ ಆಗಿರುವನು." (ಕೊಲಸ್ಸೆ 3:1-11)**

**ನೀವಾದರೋ ಕ್ರಿಸ್ತನ ಧರ್ಮವನ್ನು ಅಂಥದೆಂದು ಕಲಿತುಕೊಳ್ಳಲಿಲ್ಲ. ಆತನನ್ನೇ ಕೇಳಿದಿರಲ್ಲಾ, ಆತನಲ್ಲಿಯೇ ಉಪದೇಶವನ್ನು ಹೊಂದಿದಿರಲ್ಲಾ. ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದಂದರೆ - ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದುಹಾಕಿಬಿಡಬೇಕು; ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟುಹೋಗುವಂಥದು. ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ."(ಎಫೆಸ 4:20-24).**

"ಹೊಸ ಸೃಷ್ಟಿಯ ಹೊಸ ಸಾಮರ್ಥ್ಯ ಕ್ರಿಸ್ತನಂತಾಗವುದೇ.ಇದರ ಮೊದಲ ಹಂತದ ಸಾಮರ್ಥ್ಯದ ಬೆಳವಣಿಗೆಯೂ ಎನೆಂದರೆ ಉಭಯ ಹೊಸ ಚಿತ್ರಗಳು- ಹಳೆಯ ಮನುಷ್ಯ ಸತ್ತಿರುವುದು,ಹೊಸ ಮನುಷ್ಯನು ಆಗಲೇ ಕ್ರಿಸ್ತನಲ್ಲಿ ಪುನುರುತ್ಥಾನವಾಗಿರುವುದು.ಇದು ನಿಜವಾಗಿ ಸಂತೋಷ ಪಡುವ ವಿಷಯ "ಹೊಸ ಸಂಗತಿಗಳು ಬಂದಿದೆ"

ನಮ್ಮ ಚಿತ್ರಣ- ನಾವು ಕ್ರಿಸ್ತನಲ್ಲಿರಬೇಕು-ನಮ್ಮ ಮನಸ್ಸಿನ ಮೇಲೆ ಬಾವಚಿತ್ರ ತೆಗೆದುಕೊಂಡು ಅಂಟಿಸುವ ಹಾಗೆ ಇರಬೇಕು:

1. ನಾವು ಮಹಿಮೆಯುಳ್ಳ ಕ್ರಿಸ್ತನ ನಿಜ ಚಿತ್ರಣವನ್ನು ತೆಗೆದು.
2. ಅದನ್ನು ಆಭಿವೃದ್ಧಿ ಪಡಿಸಿ.
3. ಆ ಸಂಪೂರ್ಣವಾದ ಚಿತ್ರ ನಮ್ಮ ದೃಷ್ಟಿಯಲ್ಲಿಟ್ಟುಕೊಂಡಿರಬೇಕು.

**Summary ಸಾರಾಂಶ**

ಇದು ಪ್ರತಿಯೊಬ್ಬ ಕ್ರೈಸ್ತನಿಗೆ ಸಾಧ್ಯ,ಯಾಕೆಂದರೆ ಆತನು ಹೊಸ ಸೃಷ್ಟಿ ಆ ಸೃಷ್ಟಿಯನ್ನು ಅನುಸರಿಸಿ ಸಂಪೂರ್ಣನಾಗಿ ಕ್ರಿಸ್ತನ ಹಾಗೆ ಆಗುತ್ತಾನೆ

- **II. DEVELOPING THE NEW CREATURE ಹೊಸ ಸೃಷ್ಟಿಯನ್ನು ಅಭಿವೃದಿಪಡಿಸುವುದು**

## We Must Believe That We Can Be Like Christ

## ಕ್ರಿಸ್ತನಂತಾಗಬೇಕೆಂದು ನಾವು ನಂಬಬೇಕು.

ಕ್ರೈಸ್ತತ್ವ ನಮ್ಮ ದೃಷ್ಟಿಯಿಂದ ಹಿಡಿದು ನಮ್ಮ ತಲೆಯ ಹಿಂದಿನ ಮಧ್ಯದಲೆಲ್ಲೊ ಇರುವುದರಿಂದ,ಸತ್ಯವೇದ ಖಂಡಿತವಾಗಿ ಬರೆದಿರುವದನೇಂದರೆ ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ.(ರೋಮಾಯ 10:9), ಇದೇ ಪತ್ರಿಕೆಯಲ್ಲಿ ಪೌಲನು ನಮ್ಮ ಮನಸ್ಸಿಡುವ ಬಗ್ಗೆ ಕಾಳಜಿಯಿಂದ ಒರೆಯುತ್ತಾನೆ.(ರೋಮಾಯ 8:5)

ದೇವರ ರಕ್ಷಣೆಯ ಮೊದಲನೆಯ ಮಾತು ದುಃಖಿತ ಮನುಷ್ಯನಿಗೆ “ಬನ್ನಿರಿ,ವಾದಿಸುವ”( ಯೆಶಾಯ 1:18) ಎಂದು ಕರ್ತನು ನುಡಿಯುತ್ತಾನೆ. **“ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.”** **(ರೋಮಾಯ 10:17)**

ಅದೇ ರೀತಿಯಲ್ಲಿ,ಹೊಸ ಸಾಮರ್ಥ್ಯ ಅಭಿವೃದ್ಧಿಯ ಪ್ರಾರಂಭ ದೇವರ ಜೊತೆಯಲ್ಲಿ “ಬನ್ನಿರಿ,ವಾದಿಸುವ “ ಮತ್ತು ನಾವೇನಾಗಬಹುದೆಂದು ಆತನು ಹೇಳುತ್ತಾನೊ ಹಾಗೆ ಆಗುತ್ತೇವೆಂದು ನಂಬೋಣ.ನಮ್ಮಲ್ಲಿ ಕ್ರಿಸ್ತನ ಹಾಗೆ ನಾವಾಗುತ್ತೇವೆಂಬ ಸಾಮರ್ಥ್ಯ ಇದೆ ಎನ್ನುವ ನಂಬಿಕೆಯಿರಬೇಕು.ನಮಗೆ ನಂಬಿಕೆ ಇಲ್ಲದಿದ್ದರೆ ನಾವು ಕ್ರಿಸ್ತನಂತಾಗವುದೇ ಇಲ್ಲ. ಈ ಕೆಳಗಿನ ದೇವರ ವಾಕ್ಯ ಗಮನಿಸಿ:

**” ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ**

**ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು.(ರೋಮಾಯ 8:3,4).**

ಹಾಗಾದರೆ ಧರ್ಮಶಾಸ್ತ್ರದ ಅಗತ್ಯತೆಯೇನು? ಪಾಪ ಧರ್ಮಶಾಸ್ತ್ರವನ್ನ ಉಲ್ಲಂಘಿಸುವದು,ಅಥವ ಅಧರ್ಮ.(1 **ಯೋಹಾನ 3:4)**.ಯಾರು ಈ ಧರ್ಮಶಾಸ್ತ್ರದ ಅಗತ್ಯತೆಯನ್ನು ಕೈಗೊಳ್ಳುವರು? ಯೇಸು? ಪವಿತ್ರಾತ್ಮ ಹೇಳುವುದು ಕ್ರೈಸ್ತನು ಧರ್ಮಶಾಸ್ತ್ರವನ್ನ ನೆರವೇರಿಸಬೇಕು! ದೇವರಾತ್ಮ ಹೇಳುವುದೇನಂದರೆ ಪ್ರತಿಯೊಬ್ಬ ಕ್ರೈಸ್ತನು ಪವಿತ್ರಾತ್ಮಾನುಸಾರ ಬದುಕುವ ಹಂಗಿನಲ್ಲಿದ್ದಾನೆ ಹಾಗೆ ಅನುಸರಿಸಿದರೆ ಜೀವವು ಮನಶ್ಯಾಂತಿಯೂ ದೊರೆಯುವುದು.

ಧರ್ಮಶಾಸ್ತ್ರವು (ಹಳೇ ಒಡಂಬಡಿಕೆ) ನೀತಿವಂತನಾಗುವ ಒಬ್ಬ ವ್ಯಕ್ತಿಯನ್ನು ಉತ್ಪತ್ತಿ ಮಾಡಲಾಗದೆ ಇತ್ತು.ಆದರೆ ಶುಭವಾರ್ತೆಯೂ (ಹೊಸ ಒಡಂಬಡಿಕೆ) ನೀತಿವಂತ ಜನರನ್ನು ಉತ್ಪತ್ತಿ ಮಾಡುವ ಸಾಮರ್ಥ್ಯವುಳ್ಳದ್ದು ಇದರಿಂದ ಧರ್ಮಶಾಸ್ತ್ರದ ಅಗತ್ಯತೆಯೂ ಸಂಪೂರ್ಣವಾಯಿತು!.ದೇವರೇ ಈ ಎರಡೂ ಕೆಲಸ ಮಾಡಿ ಕ್ರಿಸ್ತನ ಶರೀರದಲ್ಲಿ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು.ಇದರಿಂದ ಧರ್ಮಶಾಸ್ತ್ರದ ನಿಯಮ ಪವಿತ್ರಾತ್ಮ ಮೂಲಕ ನೆರವೇರುವದಕ್ಕೆ ಮಾರ್ಗವಾಯಿತು.

1. **ದೇವರು ತನ್ನ ಮಗನನ್ನು ಪಾಪಕ್ಕೆ ಪ್ರಾಯಶ್ಚಿತ್ತ ಯಜ್ಞವಾಗಿ ಅರ್ಪಿಸಿದನು. ದೇವರ ಕೃಪೆಯ** ಒಂದು ಆಶ್ಚರ್ಯಕರವಾದ ಗುಣವೇನೆಂದರೆ ಯೇಸು ಮನುಷ್ಯರೆಲ್ಲರ ಪಾಪಪರಿಹಾರದ ಬೆಲೆಯನ್ನು ಕೊಟ್ಟಿದ್ದಾನೆ.ಒಬ್ಬ ವ್ಯಕ್ತಿಯೂ ಕ್ರಿಸ್ತನೊಳಗೆ ಸೇರುವದಕ್ಕೆ ಮುಳುಗಿಸಲ್ಪಟ್ಟಾಗ,ಪೂರ್ವ ಸ್ವಭಾವವೆಲ್ಲಾ ಹೊರಟುಹೋಯಿತು,**(ಇಬ್ರೀಯ 8:12)** ರಲ್ಲಿ ಹೇಳುವದೇನೆಂದರೆ **"ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು,ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಕರ್ತನು ನುಡಿಯುತ್ತಾನೆ".**

ಈ ಕೃಪೆಯ ಪ್ರಮುಖ ಗುಣಲಕ್ಷಣವು ಒಬ್ಬ ವ್ಯಕ್ತಿಯು ದೀಕ್ಷಸ್ನಾನದ ಮೂಲಕ ಕ್ರಿಸ್ತನಲ್ಲಿ ಸೇರುವುದು ಮಾತ್ರವಲ್ಲ, ಕ್ರಿಸ್ತೀಯ ಜೀವನದ ನಡೆಯಲ್ಲಿ ಅವನಿಗೆ ಅಗತ್ಯ ಇರುವ ಎಲ್ಲ ಸಮಯದಲ್ಲಿಯೂ ಇರುವಂಥದ್ದು."**ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶ್ರಯದಲ್ಲಿ ಆತನ ಮುಖಾಂತರವೇ ನಂಬಿಕೆಯಿಂದ ಪ್ರವೇಶವಾಯಿತು. ಮತ್ತು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ." (ರೋಮಾಯ 5:2)**. ಆಗ ತಾನೆ ದೀಕ್ಷಸ್ನಾನ ಮಾಡಿಸಿಕೊಂಡವನಿಗೂ ವಯಸ್ಸಾದ ಸಂಪೂರ್ಣ ಕ್ರೈಸ್ತನಿಗೂ ಕ್ರಿಸ್ತನಲ್ಲಿ ಪೂರ್ವ ಸ್ವಭಾವವು ಆತನು ಮರಣ ಹೊಂದಿದಾಗ ಕ್ರೂಜೆಗೆಹಾಕಲ್ಪಟ್ಟಿತು. ಈ ಕೃಪೆಯು ಕ್ರೈಸ್ತನಿಗೋಸ್ಕರ ದೇವರು ರೂಪಿಸಿದ್ದಾನೆ.

ದೇವರ ರಕ್ಷಣೆಯೆಂಬ ಶುಭವಾರ್ತೆಯ ಮೂಲಕ "ನಾನು ಈಗ ಸಂಪೂರ್ಣನಲ್ಲ" ಎನ್ನುವ ಜನರಿಗೆ ಈಗ ಯಾವ ರೀತಿಯ ನೆವಗಳು ಇಲ್ಲ.ಪಾಪಾಧೀನ ಸ್ವಭಾವದ ಪೂರ್ವ ಸ್ಥಿತಿಯ ಮನುಷ್ಯನನ್ನ ದೇವರು ಕ್ರಿಸ್ತನ ಕ್ರೂಜೆಗೆ ಜಡಿದು ಇಲ್ಲದಂತೆ ಮಾಡಿದನು.ಅತನ ಮರಣದಲ್ಲಿ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿ ಧರ್ಮಶಾಸ್ತ್ರದ ಅಗತ್ಯತೆಯನ್ನು ಸಂಪೂರ್ಣಗೊಳಿಸಿದನು.

2. **ಆತನು ತನ್ನ ಮಗನನ್ನು ದಾಸನ ರೂಪದಲ್ಲಿ ಕಳುಹಿಸಿದನು.** ಹೀಗೆ ಆತನು ಮನುಷ್ಯಕುಮಾರನಾಗಿದ್ದಾಗ ಹೇಗಿದ್ದನು? ಯೇಸು ಕ್ರಿಸ್ತನ ದೇವತ್ವ ಸಾಬೀತುಪಡಿಸುವ ನಿಟ್ಟಿನಿಂದ ಆತನು ತನ್ನನ್ನು ಬರಿದು ಮಾಡಿಕೊಂಡು ಮನುಷ್ಯ ಕುಮಾರನಾಗಿ ದಾಸನ ರೂಪದಲ್ಲಿ ಸದೃಶನಾಗಿ,ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡನು.**(ಫಿಲಿಪ್ಪಿ 2:7)**.ಯೇಸು 100% ಮನುಷ್ಯನು.ಅತನಿಗೆ ಹಸಿವು,ಆಯಾಸ,ಬಾಯಾರಿಕೆ,ಆತನು ಕಣ್ಣೀರಿಟ್ಟನು.

ಯೇಸು ಪಾಪ ಮಾಡಿದ್ದಾನೊ? **"ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ"**(ಇಬ್ರೀಯ 4:15)

ಯೇಸು ಯಾಕೆ ಪಾಪಮಾಡಲಿಲ್ಲ? ನಮ್ಮ ತಕ್ಷಣ ಪ್ರತಿಕ್ರಿಯೆ "ಯಾಕೆಂದರೇ ಆತನು ದೇವರು." ಹಾಗಾದರೆ ನಮ್ಮ ಪ್ರಶ್ನೆಯೇನೆಂದರೆ ಆತನು ಮನುಷ್ಯಕುಮಾರನಾಗಿದ್ದಾಗ ಹೇಗೆ ಪಾಪಮಾಡಲಿಲ್ಲ? ಇದಕ್ಕೆಲ್ಲ ಪೌಲನು ಗಲಾತ್ಯ ಪತ್ರಿಕೆಯಲ್ಲಿ **"ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ."**(ಗಲಾತ್ಯ 5:17). ಶರೀರಾಧೀನಸ್ವಭಾವವು ಆತ್ಮದ ವಿರುದ್ಧ ಹೋರಾಟ ಮಾಡಿ ಜಯಿಸಿದರೆ ಪಾಪವುಂಟಾಗುತ್ತದೆ.ಶರೀರಸ್ವಭಾವವು ತಾನು ಇಷ್ಟಬಂದಹಾಗೆ ಮಾಡುತ್ತದೆ.ಯೇಸು ಯಾವ ಪಾಪ ಮಾಡಲಿಲ್ಲ ಯಾಕೆಂದರೆ ಆತನ ಆತ್ಮ ಎಷ್ಟು ಮಾತ್ರಕ್ಕೂ ಪಾಪ ಮಾಡಲು ಬಿಡಲಿಲ್ಲ.

ಆತನು ಪಾಪ ರೂಪದಲ್ಲಿ ಬಂದಿದ್ದರು,ನಮ್ಮ ಹಾಗೆ ಎಲ್ಲಾ ರೀತಿಯ ಶೋಧನೆಗೆ ಒಳಗಾದರೂ,ಪಾಪ ಮಾತ್ರ ಮಾಡಲಿಲ್ಲ,ಯೇಸುವೇ ನಾವು" ಇದನ್ನು ಮಾಡಲು ಸಾಧ್ಯವಿಲ್ಲ " ಎಂದು ಹೇಳುವ ನೆಪಗಳನ್ನು ನಾಶಮಾಡಿದನು. ಪಾಪರೊಪದ ನರಭಾವದಲ್ಲಿ ಪಾಪಮಾಡದೇ ಜೀವಿಸಬಹುದು ಎಂದು ಯೇಸು ತೋರಿಸಿದ್ದಾನೆ.

ನಮ್ಮ ಹೊಸ ಸಾಮರ್ಥ್ಯದ ಅಭಿವೃದ್ಧಿಯ ಮೊದಲ ಹಂತವು ನಾವು ಧರ್ಮಶಾಸ್ತ್ರದ ನಿಯಮಗಳನ್ನು ಸಂಪೂರ್ಣಗೊಳಿಸಲು ಸಾಧ್ಯವಾಯಿತು.ಹೇಗೆಂದರೆ ಯೇಸು ಎಲ್ಲ ರೀತಿಯ ಶೋಧನೆಗೊಳಗಾದರೂ ಪಾಪ ಮಾತ್ರ ಮಾಡಲಿಲ್ಲ.ನಾವು ಪೌಲನ ರೀತಿ ನಂಬಬೇಕು: **"ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ"**. (ಫಿಲಿಪ್ಪಿಯವರಿಗೆ 4:13).

## We Must Set Our Minds ನಾವು ನಮ್ಮ ಮನಸ್ಸಿಡಬೇಕು

**"ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪವಿತ್ರಾತ್ಮನನ್ನನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರಭಾವದವುಗಳ ಮೇಲೆ ಮನಸ್ಸಿಡುವದು ಮರಣ; ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಶಾಂತಿಯೂ ಆಗಿದೆ. ಯಾಕಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು; ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ, ಒಳಪಡುವದಕ್ಕಾಗುವದೂ ಇಲ್ಲ. ಶರೀರಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು".**(ರೋಮಾಯ 8:3-8).

ಒಂದು ಸಾರಿ ಯೇಸುವಿನ ಹಾಗಿರಬಹುದೆಂದು ಅರ್ಥವಾಗಿ ಮತ್ತು ನಮಗೆ ಹೊಸ ಸಾಮರ್ಥ್ಯವಿದೆ ಎಂದು ನಂಬುತ್ತಾ, ನಾನು ಕ್ರಿಸ್ತನಂತಾಗಬೇಕೆಂದು ಮನಸ್ಸಿಡಬೇಕು.

ಯಾವುದೇ ಆಟಗಾರ ತಾನು ಜಯಿಸಬೇಕಾದರೆ,ಮೊದಲು ತಾನು ಜಯಿಸುವದರ ಮೇಲೇ ಮನಸ್ಸಿಡಬೇಕು.ಹಾಗಿಡದಿದ್ದರೆ ಅವನು ಸೋತುಹೋಗುವನು.

ಅಂದಮೇಲೇ ಸತ್ಯವೇದವು ನಮ್ಮನ್ನು ಎಚ್ಚರಿಸುತ್ತದೆ- ಶರೀರಾಧೀನಸ್ವಭಾವದ ಮೇಲೆ ಮನಸ್ಸಿಡುವುದು ಮರಣ.ಆದರೆ ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಯಾಂತಿಯು ಆಗಿದೆ.

ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದೆಂದರೇನು? ಹೊಸ ಒಡಂಬಡಿಕೆಯೂ ಈ ಕಾರಣಕ್ಕಾಗಿಯೇ ವಿನ್ಯಾಸಗೊಳಿಸಿದ ಗ್ರಂಥವಾಗಿದೆ.ಒಬ್ಬನು ಹೇಗೆ ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡಬೇಕೆಂದು ಸಹಾಯ ಪಡೆಯಬಹುದು.ಅದು-

**“ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು.” (2 ತಿಮೋಥೆ 3:16,17).**

1. **“ಹೀಗಿರುವದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು.” (ಮತ್ತಾಯ 6:33).**

ಕ್ರೈಸ್ತರಿಗೆ ಇರುವ ಬಹು ದೊಡ್ಡ ಚಿಂತೆ “ಎಲ್ಲಿಂದ ಸಂಪಾದನೆ ಬರುತ್ತೆ?” ಯೇಸು ಈ ಚಿಂತೆಯನ್ನು ಅಥವಾ ಭಯವನ್ನು ನಿವಾರಿಸುತ್ತಾನೆ ಅದು ದೇವರು ಒದುಗಿಸುತ್ತಾನೇ.ನಾವು ಮೊದಲು ದೇವರ ರಾಜ್ಯಕ್ಕಾಗಿ ಆತನ ನೀತಿಗಾಗಿ ತವಕಪಡಿರಿ.

ಹಾಗಾದರೆ ಸಭೆ ಪ್ರಾಮುಖ್ಯ ಎಂದರ್ಥ.ಇದು ಆಶ್ಚರ್ಯ ವಿಷಯವಾಗುವುದಿಲ್ಲ- ಯಾಕೆಂದರೆ ಯೇಸು ಸಭೆಗೋಸ್ಕರ ಸತ್ತನು,ಮತ್ತು ಸಭೆಯನ್ನು ತನ್ನ ಸ್ವಂತ ರಕ್ತದಿಂದ ಕೊಂಡುಕೊಂಡನು.

ನಾವು ಕ್ರಿಸ್ತನಂತಾಗುವುದು ಬಹಳ ಮುಖ್ಯ ಆದ್ದರಿಂದ ಆತನ ಸಭೆಯ ಕಾರ್ಯಕ್ರಮ ನಡೆಯುವಾಗ ನಮ್ಮ ಮನಸ್ಸಿಡಬೇಕು.ಸತ್ಯವೇದ ಅಧ್ಯಯನ,ಬೆಳಗಿನ ಮತ್ತು ಸಾಯಂಕಾಲ ಸಭೆ ಕೂಡುವುದು,ಸಹೋದರ ಅನ್ಯೂನ್ಯತೆ ಕೂಟಗಳು,ಇತ್ಯಾದಿ.

ಸಭೆಯ ಈ ಕಾರ್ಯಕ್ರಮಗಳಲ್ಲಿ ಹಾಜರಾಗುವುದಲ್ಲದೆ ನಮ್ಮ ನಡವಳಿಕೆಯೂ ಮುಖ್ಯ.ಯೇಸು ಹೇಳಿದ್ದು **“ತೆಗೆದುಕೊಳ್ಳುವದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯವೆಂಬದಾಗಿ ಕರ್ತನಾದ ಯೇಸು ತಾನೇ ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡಿರಬೇಕು ಅಂದನು.” (ಅಪೋಸ್ತಲರ ಕೃತ್ಯ 20:35).** ನಾವು ಪರಸ್ಪರ ಹಿತಚಿಂತಕಾಗಿದ್ದು ಒಬ್ಬರನ್ನೊಬ್ಬರು ಪ್ರೀತಿಸುತ್ತಿರಬೇಕು **(ಇಬ್ರೀಯ 10:24)** ನಾವು ನಮ್ಮ ಮನಸ್ಸಿಟ್ಟು ಜೀವನದಲ್ಲಿ ಕೊಡುವವರಾಗಿರಬೇಕು.

a. ನಾವು ನೆನಪಿಟ್ಟುಕೊಳ್ಳಬೇಕು ಯೇಸು ಬಂದಿದ್ದು **“ಮನುಷ್ಯಕುಮಾರನು ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು ಎಂದು ಹೇಳಿದನು.” (ಲೂಕ 19:10).**

ಯೇಸು ಕ್ರಿಸ್ತನು ಕ್ರೂಜೆಯಲ್ಲಿ ಮರಣಹೊಂದಿ ಕೆಟ್ಟುಹೋದ ಆತ್ಮಗಳನ್ನು ಹುಡುಕಿ ರಕ್ಷಿಸುವ ಕೆಲಸ ನಮಗೆಲ್ಲ ಕೊಟ್ಟಿದ್ದಾನೆ **“ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ.”**ಎಂದು ಹೇಳಿದನು.**(ಮತ್ತಾಯ 28:19,20)** ಈ ಸುಗ್ರೀವಾಜ್ಞೆ ಅಪೋಸ್ತಲರಿಗೆ ಮಾತ್ರ ಕೊಟ್ಟಿದ್ದು ಎಂದು ಆಂದುಕೊಳ್ಳಬಾರದು,ಈ ದಿನವೂ ಶಿಷ್ಯರನ್ನು ತಂದೆಯ,ಮಗನ,ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಸ್ನಾನವಾಗುತ್ತಿದೆಯಲ್ಲವೇ.ಕ್ರೈಸ್ತನು ಈ ಕಾರ್ಯಕ್ರಮ ಮಾಡಬಹುದು.ಮನಸ್ಸು ಮಾಡಬೇಕು!

ಯೇಸು ನಮಗೆ ಆಜ್ಞಾಪಿಸಿದ್ದು:

a. ಹೊರಟುಹೋಗಿ

b. ಶಿಷ್ಯರನ್ನಾಗಿ ಮಾಡಿ

c. ತಂದೆಯ,ಮಗನ,ಪವಿತ್ರಾತ್ಮನ ಹೆಸರಿನ ಮೇಲೆ ದೀಕ್ಷಸ್ನಾನ ಮಾಡಿಸಿರಿ

d. ಉಪದೇಶ ಮಾಡಿರಿ.

**ನಾವು** ಈ ಸುಗ್ರೀವಾಜ್ಞೆಯ ನಾಲ್ಕು ಭಾಗಗಳನ್ನು **ಕೈಗೊಳ್ಳಲು ಮನಸ್ಸಿಡಬೇಕು**.ಇದು ನಮ್ಮನ್ನು ಕ್ರಿಸ್ತನ ಸಾರೂಪ್ಯಕ್ಕೆ ವಿನ್ಯಾಸ ಮಾಡಿ ಕೈಕೊಳ್ಳುವ ಉದ್ದೇಶ ನಾವು ಕೆಟ್ಟುಹೋದ ಆತ್ಮಗಳನ್ನು ಹುಡುಕಿ ರಕ್ಷಿಸುವ ಕೆಲಸವಾಗಿದೆ.

e. ಪೌಲನು ಪಿಲಿಪ್ಪಿಯಲ್ಲಿನ ಸಭೆಗೆ:" **ಹೀಗಿರುವಲ್ಲಿ ನನ್ನ ಪ್ರಿಯರೇ, ನೀವು ನನ್ನ ಮಾತನ್ನು ಯಾವಾಗಲೂ ಕೇಳಿದಂತೆ ಈಗಲೂ ಕೇಳಿರಿ. ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ ನಾನಿಲ್ಲದಿರುವಾಗಲೂ ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ."(ಫಿಲಿಪ್ಪಿ2:12).**

ರಕ್ಷಣೆಯು ಕರ್ತನ ನಮ್ಮ ಜೊತೆಗಿನ ಒಪ್ಪಂದ,ನಮ್ಮೆಲ್ಲರನ್ನು ನ್ಯಾಯತೀರ್ಪಿನ ದಿನ ನಿತ್ಯಮರಣದಿಂದ ರಕ್ಷಿಸುವ ಕಾರ್ಯಕ್ಕೆ ಆತನು ಬದ್ಧನಾಗಿದ್ದಾನೆ ನಾವು ಆತನಿಗಾಗಿ ಪ್ರತಿ ಕ್ಷಣ ಜೀವಿಸುತ್ತೇವೆ.

ಪೌಲನು ನಮಗೆ ವಿವರಿಸಿ ಬರೆದಿರುವುದು: " **ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು." (ಗಲಾತ್ಯ 2:20).**
ಯೇಸು ಈ ಪರಿಕಲ್ಪನೆಯನ್ನೇ ವ್ಯಕ್ತಪಡಿಸುತ್ತಾ **"ಇದಲ್ಲದೆ ಆತನು ಎಲ್ಲರಿಗೂ ಹೇಳಿದ್ದೇನಂದರೆ - ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು."** ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ತನ್ನನ್ನೇ ಕೆಡಿಸಿಕೊಂಡರೆ ಅಥವಾ ನಷ್ಟಪಡಿಸಿಕೊಂಡರೆ ಅವನಿಗೆ ಪ್ರಯೋಜನವೇನು?
**ನಾವು ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಲೂ ಮನಸ್ಸಿಡಬೇಕು.**ಈ ರಕ್ಷಣೆಯ ಒಪ್ಪಂದ ನಮ್ಮನ್ನು ಯೇಸುವಿನ ಹಾಗೆ ಮಾಡುವ ಖಾತ್ರಿಯುಳ್ಳದ್ದಾಗಿದೆ.

f. ಯೇಸುವಿನಂತಾಗಬೇಕೆಂದು ಈ ಲೋಕದಲ್ಲಿ ನಾವು ಪ್ರಯಾಸಪಟ್ಟು ಶ್ರಮಪಡುತ್ತೇವೆ,ಒಬ್ಬ ವ್ಯಕ್ತಿಯು ಯೇಸುವಿನಂತಾಗುವ ಪ್ರಮುಖ ವಿಷಯವನ್ನು ಬಿಟ್ಟು ತಪ್ಪು ದಾರಿ ಹಿಡಿದು,ತನ್ನ ವಿಷಯದಲ್ಲಿ ನಿರುತ್ಸಾಹಗೊಳ್ಳುತ್ತಾನೆ. ತಾನು ಯೇಸುವಿನಂತಾಗುವದಕ್ಕೆ ಸೋತುಹೋಗಿರುವುದಕ್ಕೆ ನಿರಾಶೆಯಾಗಿ,ಇದಕ್ಕೆಲ್ಲ ಕಾರಣವಾದವರ ಇತರರ ಮೇಲೂ ನಿರಾಶೆಯಾಗಿ ಆತನು ರಕ್ಷಣೆಯ ಸಂಕಲ್ಪದಿಂದ ಬಿದ್ದುಹೋಗುತ್ತಾನೆ.
ಯೇಸು ನಮಗಿಂತ ಮುಂಚೆ ಇಹಲೋಕದ ಪ್ರಯಾಣ ಮಾಡಿದ್ದಾರೆಂದು ನಾವು ಗುರುತಿಸಬೇಕು,ಆತನು ನಮ್ಮಂತೆಯೇ ಎಲ್ಲಾ ರೀತಿಯ ಸಮಸ್ಯೆಗಳನ್ನು ಎದುರಿಸಿ,ಅವುಗಳನ್ನು ಜಯಿಸಿದನು. ಆತನನ್ನು ದ್ವೇಷಿಸಿದರು **(ಯೋಹಾನ 15:25)**,ಅತನ ಸಂದೇಶಗಳನ್ನು ತಿರಸ್ಕರಿಸಿ **(ಯೋಹಾನ 6:60)** ಕಡೆಗೆ

ಕೊಂದರು.

ಆದರೆ ನಾವು ಪೌಲನ ಪ್ರೇರಣೆಯ ಸದ್ಬೋದನೆಯನ್ನು ಸರಿಯಾಗಿ ಗಮನಿಸಿ ನಿರ್ದಿಷ್ಟ ರೀತಿಯಲ್ಲಿ ಅನುಸರಿಸಬೇಕು." **ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ. (ಕೊಲಸ್ಸೆ3:2).**

ಒಬ್ಬ ಕ್ರೈಸ್ತನು ತನ್ನಲ್ಲಿ ಕ್ರಿಸ್ತನಂತಾಗುವದಕ್ಕೆ ಸಾಮರ್ಥ್ಯವಿದೆಯೆಂದು **ಗುರುತಿಸಬೇಕು**.ತಾನು ನಿಜವಾಗಿ ನಂತರ ಕ್ರಿಸ್ತನಂತಾಗುವುದನ್ನು ದೃಢವಾಗಿ **ನಂಬಬೇಕು.**ನಂತರ ಆತನು ಕ್ರಿಸ್ತನಂತಾಗುವದಕ್ಕೆ **ಮನಸ್ಸಿಟ್ಟು** ಗುರಿಮಾಡಿಕೊಂಡು ಪಡೆಯಬೇಕು.

ಕ್ರೈಸ್ತನು ತಾನು  ಕ್ರಿಸ್ತನಂತಾಗವುದಕ್ಕೇ ಮನಸ್ಸಿಡುವುದೆಂದರೆ ಪಕ್ವದ ಪವಿತ್ರಾತ್ಮನವುಗಳಲ್ಲಿ ಮನಸ್ಸಿಡುವುದೇ.ಆವುಗಳು ಹೀಗಿದೆ:

1. ಕ್ರಿಸ್ತನ ಸಭೆ ಮೊದಲು.
2. ವೈಯಕ್ತಿಕವಾಗಿ ಕಳೆದುಹೋದವರನ್ನು ಹುಡುಕಿ ರಕ್ಷಿಸುವುದು.
3. ರಕ್ಷಣೆಯೆಂಬ ಒಪ್ಪಂದ ಸಾಧಿಸಿಕೊಳ್ಳುವುದು.
4. ಮೇಲಿರುವುಗಳ ಮೇಲೆ ಮನಸ್ಸಿಡುವದು.

## Keep Focusing The Mind On God's Things ದೇವರದವುಗಳ ಮೇಲೆ ಯಾವಾಗಲೂ ಮನಸ್ಸಿಟ್ಟು ಗಮನಿಸುತ್ತಾಯಿರಿ

ಒಂದು ಸಾರಿ ಕ್ರೈಸ್ತನು ಕ್ರಿಸ್ತನಂತಾಗಬೇಕೆಂದು ಮನಸ್ಸಿಟ್ಟ ಮೇಲೆ,ಆತನು ಎದುರಿಸುವ ಇನ್ನೊಂದು ಸಮಸ್ಯೆ-ತನ್ನ ನಿರ್ಧಾರವನ್ನು ಕಳೆದುಕೊಳ್ಳುವ ಪ್ರವೃತ್ತಿ.

ನಾವು ಕಳೆದುಕೊಳ್ಳುವ ಅಂತಹ ಪ್ರವೃತ್ತಿಯ ಬಗ್ಗೆ ಎಚ್ಚರಿಸಿದ್ದೆವು.**"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ". (ರೋಮಾಯ 12:2).**

ಮತ್ತೂ ಪವಿತ್ರಾತ್ಮನು ಹೇಳುವುದೇನೆಂದರೆ," **ಕಡೇ ಮಾತೇನಂದರೆ, ಸಹೋದರರೇ, ಯಾವಾವದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ, ಯಾವದು ಸದ್ಗುಣವಾಗಿದೆಯೋ, ಯಾವದು ಕೀರ್ತಿಗೆ ಯೋಗ್ಯವೋ, ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ".(ಫಿಲಿಪ್ಪಿ 4:8).**

ಮನಸ್ಸು ನೊತನಹೊಂದುವ ನಿರಂತರ ಪ್ರಕ್ರಿಯೆಯಲ್ಲಿರುತ್ತದೆ. ಬಹಳ ಜನರು ತನ್ನ ಮನಸ್ಸನ್ನು ನೂತನಪಡಿಸೆಂದು ದೇವರನ್ನು ಪ್ರಾರ್ಥಸುತ್ತಾರೆ.ದೇವರು ಸ್ಪಷ್ಟವಾದ ಮಾತಿನಿಂದ ಹೇಗೆ ನೂತನಪಡಿಸುವುದೆಂದು ಹೇಳಿದ್ದಾರೆ:**ಮನಸ್ಸನ್ನು ನೂತನಪಡಿಸಿಕೊ!** ಮನಸ್ಸನ್ನು ನೂತನ ಮಾಡಿಕೊಳ್ಳುತ್ತ ಹೋಗದಿದ್ದರೆ ಅವನು ಇಹಲೋಕದ ನಡವಳಿಕೆಗೆ ಸೋತುಹೋಗುತ್ತಾನೆ.

ಕ್ರೈಸ್ತನು ತನ್ನ ಮನಸ್ಸಿನೊಳಗಿನ ವಾತಾವರಣವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಅತಿಮುಖ್ಯ.ಹೊರಗಿನ ನಡತೆಗಳು ಮನಸ್ಸಿನ ಪ್ರತಿಬಿಂಬ.ಆದ್ದರಿಂದ ಪವಿತ್ರಾತ್ಮನು ನಮ್ಮ ಮನಸ್ಸಿನಲ್ಲಿ ಯಾವಾಗಲೂ ಉತ್ತಮ ಆಲೋಚನೆಗಳು-ವಾಸಿಸಬೇಕು ಮತ್ತು ಇರಬೇಕೆಂದು ಪ್ರೇರಣೆಮಾಡುತ್ತಾನೆ.

ನಮ್ಮ ಮನಸ್ಸಿಗೆ ಕ್ರಿಸ್ತನನ್ನು ಗಮನಿಸುವ ಪ್ರಾಯೋಗಿಕ ಮಾರ್ಗಗಳ ಆವಶ್ಯಕತೆಯುಂಟು.ನಾವು ನಮ್ಮ ಮನಸ್ಸನ್ನು ಯಾವಾಗಲೂ ಕ್ರಿಸ್ತನಲ್ಲಿ ಗಮನನಿಸಲೂ ದೇವರು ಸಭೆಯನ್ನು  ವಿನ್ಯಾಸಗೂಳಿಸಿದ್ದಾನೆ.

1. ಕರ್ತನ ಭೋಜನವು  ನಾವು ಕ್ರಿಸ್ತನಂತಿರುವಂತೆ  ಮನಸ್ಸಿಡುವದಕ್ಕೆ ಆತ್ಯಂತ ಪ್ರಮುಖವಾದ ಪ್ರಯೋಗ.**"ಇದು ನಿಮಗೋಸ್ಕರವಾಗಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು - ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನಮಾಡಿರಿ ಅಂದನು."( 1ಕೊರಿಂಥ 11:24,25)**.
ಆದಿ ಸಭೆಯು ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಲೂ  (ಅದನ್ನ ಅವರು "ರೊಟ್ಟಿ ಮುರಿಯುವ ನಿಯಮ"-(**1 ಕೊರಿಂಥ 10:16)** ವಾರದ ಮೊದಲನೆಯ ದಿನ ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೊಡಬಂದರು.**(ಅ.ಕೃ.20:7)**

**ಈ ಭೋಜನದ ಬಗ್ಗೆ ಯೇಸು ಹೇಳುವುದು** "**ಯೇಸು ಅವರಿಗೆ - ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ;" (ಯೋಹಾನ 6:53)**.ಈ **ಜೀವವೇ** ನಮಗೆ ಬೇಕಾದದ್ದಲ್ಲವೇ.

2. ದೇವಜನರು ಸಭೆಯಾಗಿ ಕೊಡಿಕೊಳ್ಳುವ ವಿನ್ಯಾಸ ಕ್ರಿಸ್ತನನ್ನು ದೃಷ್ಟಿಕೋನ ಮಾಡಿಕೊಂಡು ಕ್ರಿಸ್ತನಂತಾಗುವದಕ್ಕಾಗಿ ಯಾವಾಗಲೂ ಗಮನವಿಟ್ಟುಕೊಂಡಿರವುದೇ. ಯೇಸು ಎಲ್ಲರಿಗೂ ಒಳ್ಳೇದನ್ನ ಮಾಡಿದ ಹಾಗೆ **(ಅ.ಕೃ.10:38)**,ಅದೇ ರೀತಿಯ ಪ್ರಯತ್ನ ನಾವು ಮಾಡಬೇಕು **" ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ". (ಇಬ್ರೀಯ 10:24).**

ಒಂದೇ ಗುರಿ ಹೊಂದಿರುವ ಒಳ್ಳೆಯ ಗುಂಪಿನ ಮೌಲ್ಯ ದೇವರಿಗೆ ಗೂತ್ತುಂಟು.ಈ ಕಾರಣದಿಂದ **" ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ."(1 ಕೊರಿಂಥ 12:18).**

ಸ್ಥಾನಿಕ ಸಭೆಯ ಜೊತೆಗಿನ ಸೇವೆ ಚಮತ್ಕಾರವಲ್ಲ.ಬದಲಾಗಿ ಅದು ಪರಸ್ಪರ ಸಂತೋಷವಾಗಿ ಕೆಲಸಮಾಡಿ ಸಹಾಮಾಡುತ್ತ  ಕ್ರಿಸ್ತನಂತಾಗವುದೇ ಆಗಿದೆ.

3. ಹೊಸ ಜೀವಿಗಳಿಂದು ನಮ್ಮ ಗಮನವನ್ನು ಕೇಂದ್ರೀಕರಿಸಲು ಪ್ರಾರ್ಥನೆಯನ್ನು ವಿನ್ಯಾಸಗೊಳಿಸಲಾಗಿದೆ. ಅವರು ಉತ್ತರ ನೀಡುವ ಮೊದಲು ನಮ್ಮ ವರ್ತನೆಗಳು ಮತ್ತು ಬಯಕೆಗಳೊಂದಿಗೆ ದೇವರು ಎಷ್ಟು ಎಚ್ಚರಿಕೆಯಿಂದ ಕೆಲಸ ಮಾಡುತ್ತಾನೆ ಎಂಬುದನ್ನು ಗಮನಿಸಿ

a. ದೇವರು ಪಾರ್ಥನೆಗಳನ್ನು ಯೇಸು ಕ್ರಿಸ್ತನ ಹೆಸರಿನಲ್ಲಿ ಉತ್ತರಿಸುತ್ತಾನೆ.**"ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು." (ಯೋಹಾನ**

14:14).ಇದರಿಂದ ನಾವು ನಮ್ಮ ಸ್ವಂತ ಹೆಸರಿನ ಮೂಲಕ ದೇವರ ಬಳಿ ಬರಲಾಗದು,ಆದರೆ ನಮಗೋಸ್ಕರ ಮರಣಹೊಂದಿದಾತನ ಮೂಲಕವೇ ನಾವು ಆತನಂತಾಗುತ್ತೇವೆ.

b. ಆತನು ನಮ್ಮ ನಡವಳಿಕೆ ಜೊತೆ ಕೆಲಸಮಾಡುತ್ತಾನೆ."**ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ ಅಂದನು.**"(ಮತ್ತಾಯ 21:22).ಇದು ಮತ್ತೊಮ್ಮೆ ನಮ್ಮ ಮನಸ್ಸಿನಲ್ಲಿ ಚಿಂತನೆಯನ್ನು ಪ್ರಚೋದಿಸುತ್ತದೆ, ನಾವು ಕ್ರಿಸ್ತನಲ್ಲಿರುವ ಸಾಮರ್ಥ್ಯವನ್ನು ಮಾತ್ರ ಗುರುತಿಸಬಾರದು,ನಾವು ಪ್ರತಿ ವಿಷಯದಲ್ಲೂ ನಮ್ಮ ನಂಬಿಕೆಯ ಮಟ್ಟದಲ್ಲಿ ನಿಜವಾಗಿಯೂ ಕೆಲಸ ಮಾಡಬೇಕು!

c. ಪ್ರಾರ್ಥನೆಯು ನಮ್ಮ ಆಂತರಿಕ ಉದ್ದೇಶಗಳೊಂದಿಗೆ ಕಾರ್ಯನಿರ್ವಹಿಸುತ್ತದೆ."**ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೆಯುವದಿಲ್ಲ.**" (ಯಾಕೋಬ 4:3).ಯೇಸುವಿನಂತೆಯೇ ನಮ್ಮ ಆಂತರಿಕ ಉದ್ದೇಶಗಳು ಇದೆಯೋ? ಮತ್ತು ಅತನ ಸಾಮ್ರಾಜ್ಯದ ಹರಡುವಿಕೆ ಮತ್ತು ಬೆಳವಣಿಗೆಗಾಗಿ ಕೆಲಸ ಮಾಡುವದಕ್ಕೆ ಇದೆಯೇ?

d. ದೇವರು ನಮ್ಮೊಳಗೆ ಸ್ಥಿರತೆಯನ್ನು ಬೆಳೆಸಿಕೊಳ್ಳಲು ಪ್ರಾರ್ಥನೆಯನ್ನು ಬಳಸುತ್ತಾನೆ. "**ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು.**"(ಲೂಕ 18:1).ಪ್ರಾರ್ಥನೆಯಲ್ಲಿ ಯೇಸು ತಂದೆಯ ಜೊತೆ ನಿರಂತರ ಅನ್ಯೂನ್ಯತೆಯಲ್ಲಿ ಇದ್ದನು:ಆದರೂ ತಂದೆಯು ಯೇಸುವಿನ ಪ್ರಾರ್ಥನೆಗಳಿಗೆ ಅವರ ಸ್ವಭಾವಿಕ ಆಸೆಗಳನ್ನು ಉತ್ತರಿಸುವ ರೀತಿಯಲ್ಲಿ ಯಾವಾಗಲೂ ಉತ್ತರಿಸುವುದಿಲ್ಲ: "**ಸ್ವಲ್ಪ ಮುಂದೆ ಹೋಗಿ ಬೋರಲಬಿದ್ದು - ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದನು.**"(ಮತ್ತಾಯ 26:39).

4. ಗ್ರಂಥವನ್ನು ಅಧ್ಯಯನ ಮಾಡುವುದು ಮತ್ತು ನೆನಪಿಸುವುದು ಹೊಸ ಸೃಷ್ಟಿಗೆ ಬಹಳ ಮುಖ್ಯವಾಗಿದೆ ಪೌಲನು ಬರೆದದ್ದು. "**ಹೀಗಿರಲಾಗಿ ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಕ್ಕಾಗಿ ನಾವಂತೂ ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿ ಮಾಡುತ್ತೇವೆ. ಅದು ನಿಜವಾಗಿ ದೇವರ ವಾಕ್ಯವೇ; ಅದು ನಂಬುವವರಾದ ನಿಮ್ಮೊಳಗೆ ಬಲವಾಗಿ ಕೆಲಸ ನಡಿಸುತ್ತದೆ.**"**(1 ಥೆಸಲೊನಿಕ 2:13)** ಯೇಸು ಹೇಳಿದ್ದು "**ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ.**"**(ಯೋಹಾನ 6:63).**

ಮಾರ್ಪಡಿಸುವ ಏಕೈಕ ಮಾರ್ಗವೆಂದರೆ "ಮನಸ್ಸು ನೊತನ ಪಡಿಸಿಕೊಳ್ಳುವುದರಿಂದಲೇ "(ರೋಮಾಯ 12:2).ಮನಸ್ಸನ್ನು ನೂತನ ಮಾಡಿಕೊಳ್ಳುತ್ತ ಇರುವ ಅತ್ಯುತ್ತಮ ಪ್ರಕ್ರಿಯೆಂದರೆ ನಿರಂತರವಾಗಿ ದೇವರ ವಾಕ್ಯದಲ್ಲಿ ನೆಲಗೊಂಡಿರುವುದೇ.
ದೇವರ ವಾಕ್ಯ ಒದಿದರೆ ಸಾಲದು ಆದನ್ನು ಚೆನ್ನಾಗಿ ಅಭ್ಯಾಸ ಮಾಡಿದ ನಂತರ ನೆನಪಿನಲ್ಲಿಟ್ಟುಕೊಂಡಿರಬೇಕು ಯೇಸು ಸೈತಾನನಿಗೆ ಉತ್ತರ ಕೊಟ್ಟ ರೀತಿಯನ್ನು ಜ್ಞಾಪಕಮಾಡಕೊಳ್ಳಿರಿ. **(ಮತ್ತಾಯ 4:1-11)** ಹನ್ನೆರಡು

ವರ್ಷ ವಯಸ್ಸಿನಲ್ಲೇ ಯೇಸುವಿನ ಜ್ಞಾನ ವಿಕಾಸವನ್ನು ನೋಡಿ ದೇವರ ವಾಕ್ಯದ ಗ್ರಹಿಕೆಯನ್ನು ಯಾಜಕರು ಶಾಸ್ತ್ರಿಗಳು ಹಿರಿಯರು ಬೆರಗಾದರು.

ಯೇಸು ಈ ರೀತಿಯಲ್ಲಿ ಗ್ರಂಥವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವ ಮಹತ್ವವನ್ನು ಒತ್ತಿಹೇಳಿದರು. **"ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು." (ಯೋಹಾನ 15:7).**

5. **ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ. ಇದು ಸಹ ಕ್ರಿಸ್ತನಂತಾಗುವದಕ್ಕೆ ಒಂದು ಭಾಗ. ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; (ಎಫೆಸ 5:19). ದೇವರಾತ್ಮ ಭರಿತರೆಂದರೆ ಇದೇ.**

6. ದೇವರ ವಾಕ್ಯದ ಭೋಧಕರಾಗಿರುವುದು ಮಾರ್ಪಟ್ಟಿರುವ ಪರಿಣಾಮಕಾರಿ ವಿಧಾನವಾಗಿದೆ. ನಮ್ಮೆಲ್ಲರಿಗೂ ತಿಳಿದಿರುವ ಒಂದು ನೀತಿ ನಾವು ಇತರರಿಗೆ ಕಲಿಸಬಹುದಾದ ಹಂತವನ್ನು ತಲುಪುವವರೆಗೂ ನಾವು ನಿಜವಾಗಿಯೂ ಯಾವುದನ್ನೂ ಕಲಿಯಲಿಲ್ಲ.ಪುನರಾವರ್ತನೆ, ಪ್ರಶ್ನೆಗಳಿಗೆ ಉತ್ತರಿಸುವಿಕೆ, ಇತರರ ಆಸಕ್ತಿಯನ್ನು ಉತ್ತೇಜಿಸಲು ಬೇಕಾದ ಉತ್ಸಾಹ, ಮತ್ತು ತಯಾರಿಕೆಯ ಕಠಿಣ ಕಾರ್ಯಗಳು ಎಲ್ಲವು ಉಪದೇಶಕ ಎಂದು ಕರೆಯಲ್ಪಡುವ **ಅತನ** ಹಾಗೆ ನಮ್ಮನ್ನು ಮಾಡುತ್ತವೆ.ಉಪದೇಶಕರಾಗಲೂ ಬಯಸುವವರಿಗೆ **"ನನ್ನ ಸಹೋದರರೇ, ಬೋಧಕರಾದ ನಮಗೆ ಕಠಿನವಾದ ತೀರ್ಪು ಆಗುವದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ."(ಯಾಕೋಬ 3:1)** ನಾವು ಉಪದೇಶಕರಾಗುವಂತೆ ಸಹ ಉತ್ತೇಜಿಸಲಾಗಿದೆ.**(ಇಬ್ರಿಯ 5:12)**.ಆದರೆ ನಾವು ಅತಿ ವೇಗವಾಗಿ ಚಲಿಸಬಾರದೆಂದು ಎಚ್ಚರಿಸಿದೆ,ಏಕೆಂದರೆ ಉಪದೇಶಕನು ತಾನು ಹೇಳುವದರಲ್ಲಿ ದೇವರಿಗೆ ಹೊಣೆಗಾರನಾಗಿರುತ್ತಾನೆ,ಮತ್ತು ಸತ್ಯವಾಕ್ಯವನ್ನು ನಿರ್ವಹಿಸುವಲ್ಲಿ ಅವನು ಯಾವಾಗಲೂ ನಿಖರವಾಗಿರಬೇಕು.

7. ನಾವು ಯೇಸುವಿನ ಹಾಗೆ ಆಗಬೇಕೆಂದು ನಮ್ಮ ಆಲೋಚನೆಯನ್ನು ಶಿಸ್ತುಬದ್ಧಗೊಳಿಸಲು ನಾವು ಒಪ್ಪಿಕೊಳ್ಳಬೇಕೆಂದು ದೇವರು ಬಯಸುತ್ತಾನೆ. ನಾವು ಅತನ ಮಗನ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಲು ಮತ್ತು ಗಮನವನ್ನು ಕೇಂದ್ರೀಕರಿಸುವಲ್ಲಿ ನಾವು ಉತ್ಸಾಹದಿಂದ ಮುಂದುವರಿಸಲು ಸಹಾಯ ಮಾಡುವಂತೆ ಸಭೆ ವಿವಿಧ ಚಟುವಟಿಕೆಗಳನ್ನು ನೀಡಿದೆ.

ಪವಿತ್ರಾತ್ಮನ ವಿಷಯಗಳ ಮೇಲೆ ನಮ್ಮ ಮನಸ್ಸನ್ನು ಇಟ್ಟುಕೊಳ್ಳುವುದಕ್ಕೆ ಸಮರ್ಪಣೆ ಮತ್ತು ವಿನಯವುಳ್ಳ ಸರಳತೆಯ ಅಗತ್ಯ.ಹೊಸ ಜೀವಿಗಳಾಗುವದಕ್ಕೇ ಅರ್ಧಹಾದಿ ಕಾರ್ಯಕ್ರಮಗಳು ಇಲ್ಲ,ಸಾಧ್ಯತೆಗಳಿಲ್ಲ.ಇದು ಎಲ್ಲಾ ಸಾಧ್ಯವೇ ಅಥವ ಸಾಧ್ಯವಿಲ್ಲ,ಯೇಸು ಹೇಳಿದ ಹಾಗೆ, **"ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವನಾಗುತ್ತಾನೆ." (ಮತ್ತಾಯ 12:30)**. ಉತ್ಸಾಹದಿಂದ ನಮ್ಮ ಒಪ್ಪಂದವನ್ನು ಕಾರ್ಯಗತಗೊಳಿಸಲು ನಾವು ಶ್ರಮಪಡೋಣ!

## Summary ಸಾರಾಂಶ

ಹೊಸ ಜೀವಿಗಳ ಅಭಿವೃದ್ಧಿಯಾಗುವುದು ಮನಸ್ಸನ್ನು ನೂತನಪಡಿಸುವ ನಿರಂತರ ಪ್ರಕ್ರಿಯೆಯಿಂದ ಆಗುತ್ತದೆ. ಒಬ್ಬ ವ್ಯಕ್ತಿಯ ಮನಸ್ಸು ತಾನು ಕ್ರಿಸ್ತನಂತಾಗಬಹುದು ಎಂದು ಒಪ್ಪಿಕೊಳ್ಳಬೇಕು, ನಂತರ ಅವನು ಹಾಗೇ ಮಾಡಲು ನಿರ್ಧರಿಸಬೇಕು.

ಸಭೆಯ ಸಹಾಯವನ್ನು ಒದಗಿಸುವ ಮೂಲಕ ದೇವರು ತನ್ನ ನಿರ್ಣಯವನ್ನು ಕಾಪಾಡಿಕೊಳ್ಳಲು ಕ್ರೈಸ್ತನಿಗೆ ಸಹಾಯ ಮಾಡುತ್ತಾನೆ

## III. GOD'S PURPOSE ದೇವರ ಉದ್ದೇಶ

### Body, Soul, And Spirit ಶರೀರ,ಪ್ರಾಣ,ಮತ್ತು ಆತ್ಮ

**"ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ."** (1 **ಥೆಸಲೊನೀಕ 5:23).**

ಮನಷ್ಯನು ಮೂರು ಭಾಗ- ಶರೀರ,ಪ್ರಾಣ,ಮತ್ತು ಆತ್ಮ.

1. ದೇಹವು ನಮ್ಮ ದೈಹಿಕ ಭಾಗವನ್ನು ಸತ್ಯವೇದದಲ್ಲಿ "ಶರೀರಭಾವ " ಎಂದು ಉಲ್ಲೇಖಿಸಲಾಗಿದೆ.**(ಗಲಾತ್ಯ 5:16)** ದೇಹವೆಂಬ ಗುಡಾರ **(2 ಕೊರಿಂಥ 5:1)** ಇದು ನಮ್ಮ ತಾತ್ಕಾಲಿಕ ಮನೆಯಾಗಿದ್ದು, ಅದು ನಿಜವಾದ "ನಾವು" ಅಲ್ಲ - ಇದು ಭೂಮಿಯ ಮೇಲೆ ನಿಜವಾದ ವ್ಯಕ್ತಿ ವಾಸಿಸುವ ಸ್ಥಳವಾಗಿದೆ.

2. ಪ್ರಾಣವು ನಮ್ಮ ಜೀವದ ಒಂದು ಭಾಗ.ಅದು ನಿರಂತರವಾಗಿ!ನೋಡುವುದು,ಭಾವಿಸುವುದು,ಕೇಳುವವುದು,ಮತ್ತು ಯೋಚಿಸುತ್ತೆ.

   ಶಾರೀರಿಕ ಮರಣ ಪ್ರಾಣವು ದೇಹದಿಂದ ಬೇರಾಗುವುದೇ.(ಅ.ಕೃ.2;27) ಶರೀರವು ಸತ್ತದ್ದಾಗಿದ್ದರೂ ಕಣ್ಣುಗಳಿಂದ ನೋಡದಿದ್ದರೂ,ಉದಾಹರಣೆಗೆ-ಪ್ರಾಣವು ಪಾತಾಳದಲ್ಲಿ ನೋಡುವದಕ್ಕೆ ಮುಂದುವರಿಸುತ್ತದೆ.(ಸತ್ತವರಿಗೆ ತಾತ್ಕಾಲಿಕ ತಂಗುವ ಸ್ಥಳ) **ಲೂಕ 16:23** ರಲ್ಲಿ "ಪಾತಳದಲ್ಲಿ ಐಶ್ವರ್ಯವಂತನು ಕಣ್ಣೆತ್ತಿ ನೋಡಿದಾಗ" ಈ ಭಾಷೆಯ ಮೂಲ ಆ ಐಶ್ವರ್ಯವಂತನು ನೋಡುವದಕ್ಕೆ ಸಾಧ್ಯ. ಆತ್ಮವು ಹೊರಟುಹೋದಾಗ, ಕಣ್ಣುಗಳು ಇನ್ನು ಮುಂದೆ ನೋಡುವುದಿಲ್ಲ ಮತ್ತು ಕಿವಿಗಳಿಗೆ ಇನ್ನು ಮುಂದೆ ಕೇಳಿಸುವುದಿಲ್ಲ. ಕಣ್ಣುಗಳು ಮತ್ತು ಕಿವಿಗಳು ಕೇವಲ ದೈಹಿಕ ವಿಧಾನವಾಗಿದ್ದು, ಅದರ ಮೂಲಕ ಭೂಮಿಯ ಮೇಲೆ ಆತ್ಮವು ಕಾರ್ಯನಿರ್ವಹಿಸುತ್ತದೆ.

3. ಆತ್ಮವು ಮನುಷ್ಯನ ಜೀವ. ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು.**(ಆದಿಕಾಂಡ 1:26).**ಅವನನ್ನು ಜೀವಿಸುವ ಆತ್ಮವಾಗಿ ಮಾಡಿದನು,ದೇವರು ಆತ್ಮಸ್ವರೂಪನು **(ಯೋಹಾನ 3:24)** ಮನುಷ್ಯನ ದೇಹ ಅಥವಾ ಅವನ ಪ್ರಾಣವು ದೇವರ ಸ್ವರೂಪವಲ್ಲ. ಮನುಷ್ಯನು ದೇವರ ಸ್ವರೂಪದಲ್ಲಿ ಮಾಡಲ್ಪಟ್ಟಿದೆ.

4. ಮನಷ್ಯನಲ್ಲಿರುವ ಆತ್ಮವು ಆತನನ್ನು ಪ್ರಾಣಿಗಳಿಂದ ಪ್ರತ್ಯೇಕಿಸುತ್ತದೆ.ಪ್ರಾಣಿಗಳಿಗೆ ಶರೀರ ಮತ್ತು ಪ್ರಾಣವಿರುತ್ತದೆ,ಮನುಷ್ಯ ನೈತಿಕತೆಯ ವ್ಯಕ್ತಿ.ಅವನು ಪ್ರಾಣಿಗಳಂತೆ ವಿವೇಕವಿಲ್ಲದೆ ವರ್ತಿಸುವ ಹಾಗಿಲ್ಲ."**ಆದರೆ ಸ್ವಾಭಾವಿಕವಾಗಿ ಬೇಟೆಗೂ ಕೊಲೆಗೂ ಹುಟ್ಟಿರುವ ವಿವೇಕಶೂನ್ಯ ಪಶುಗಳಂತಿರುವ ಈ ದುರ್ಮಾರ್ಗಿಗಳು ತಮಗೆ ತಿಳಿಯದವುಗಳ ವಿಷಯವಾಗಿ ದೂಷಣೆ ಹೇಳುವವರಾಗಿದ್ದಾರೆ. ಇವರು ತಮ್ಮ ಕೆಟ್ಟತನದಿಂದ ತಾವೇ ಕೆಟ್ಟುಹೋಗಿ ತಮ್ಮ ದುಷ್ಪ್ರವರ್ತನೆಗೆ ಸರಿಯಾದ ದುಷ್ಫಲವನ್ನು ಹೊಂದುವರು."(2 ಪೇತ್ರ 2:12)**

ಮನುಷ್ಯನ ಈ ಆಧ್ಯಾತ್ಮಿಕ ಭಾಗವನ್ನು ತನ್ನ ಇಚ್ಛೆಯೆಂದು ವಿವರಿಸಬಹುದು - ಅವನ ದೀರ್ಘ ಬಯಕೆ - ಆಳವಾದ ಅನ್ಯೋನ್ಯತೆಗಾಗಿ ಅವನ ಬಯಕೆ.

**The Promise Of The Spirit ಪವಿತ್ರಾತ್ಮ ವಾಗ್ದಾನ**

ಕೆಲವೊಮ್ಮೆ ದೇವರು,ಅತನ ವಾಕ್ಯದಲ್ಲಿ,ಅದರ ಸನ್ನಿವೇಶಗಳಲ್ಲಿನ ಆ ಪದಗಳ ಅಧ್ಯಯನದಿಂದ ಮಾತ್ರ ಪಡೆಯಬಹುದಾದ ವಿಶೇಷ ಒತ್ತು ಅಥವಾ ಅರ್ಥದೊಂದಿಗೆ ಪದಗಳನ್ನು ಬಳಸುತ್ತಾನೆ.ನಾನು ಅವುಗಳನ್ನು "ಸೈಫರ್" ಪದಗಳು ಅಥವಾ "ಸಂಕೇತ" ಪದಗಳೆಂದು ಕರೆಯುತ್ತೇನೆ. ಒಂದು "ಸೈಫರ್" ಪದದ ಅರ್ಥವನ್ನು ತಿಳಿದುಕೊಂಡರೆ,ಅದನ್ನು ಬಳಸಿದ ವಾಕ್ಯದ ಸಂದೇಶವು "ಅರ್ಥ" ಆಗಿರುತ್ತದೆ."ಸೈಫರ್" ಪದದ ಅರ್ಥವು ತಿಳಿಯದಿದ್ದರೆ,ಆ ಗ್ರಂಥ ಭಾಗದ ಪ್ರಮುಖ ಸಂದೇಶವು ದೇವರ ವಾಕ್ಯ ಕಲಿಯುವ ವಿದ್ಯಾರ್ಥಿ ಕಳೆದುಕೊಳ್ಳುತ್ತಾನೆ.

ಇಂತಹ "ಸೈಫರ್" ಪದವು ***ವಾಗ್ದಾನವಾಗಿದೆ***. ಕೆಲವೊಮ್ಮೆ ***ವಾಗ್ದಾನ*** ನಿತ್ಯಜೀವವನ್ನು ಸೂಚಿಸುತ್ತದೆ.**"ಕ್ರಿಸ್ತನು ತಾನು ಕೊಡುತ್ತೇನೆಂದು ನಮಗೆ ವಾಗ್ದಾನ ಮಾಡಿದ್ದು ನಿತ್ಯಜೀವವು."**(1ಯೋಹಾನ 2:25) ವಾಗ್ದಾನಗಳು,ಉದಾಃ 2 ಪೇತ್ರ 1:4, ಹೊಸ ಒಡಂಬಡಿಕೆಯಲ್ಲಿ ಪ್ರಕಟಿಸಿದ ಪ್ರಕಾರ ಯೇಸು ಕ್ರಿಸ್ತನಲ್ಲಿರುವ ಆನೇಕ ಆಶೀರ್ವಾದಗಳ ಕುರಿತ ಮಾತುಕತೆಗಳು,ಆದರೆ ನಾವು ತೋರಿಸುವ ವಿಷಯವೂ ಎನೆಂದರೆ ***ವಾಗ್ದಾನವು*** ಪ್ರತ್ಯೇಕವಾಗಿ ನೋಡಿದಾಗ ಅದು **ಪವಿತ್ರಾತ್ಮ ನಮ್ಮ ಆಂತರ್ಯದಲ್ಲಿ ವಾಸಿಸುವುದಾಗಿರುವುದೇ.** (ಯಾಕೆ ಪವಿತ್ರಾತ್ಮ ನಮ್ಮ ಆಂತರ್ಯದಲ್ಲಿ ವಾಸಿಸಬೇಕು,ಪವಿತ್ರಾತ್ಮನ ದೀಕ್ಷಸ್ನಾನ ಅಥವ ಪವಿತ್ರಾತ್ಮ ವರವು ಯಾಕಿಲ್ಲಾ? ಇದರ ವಿಷಯ ಪರಿಶುದ್ದಾತ್ಮ ಅಧ್ಯಯನದಲ್ಲಿ ನೋಡುತ್ತೇವೆ) ತದನಂತರ,ತಿಳುವಳಿಕೆಯ ಬೀಗದಕೈಯೊಂದಿಗೆ,ನಾವು ಹೊಸ ಒಡಂಬಡಿಕೆಯ ಕೆಲವು ಪ್ರಮುಖ ಪರಿಕಲ್ಪನೆಯ ಬಾಗಿಲುಗಳನ್ನು ತೆಗೆದು ತೋರಿಸಬೇಕು ಎಂದು ಬಯಸುತ್ತೇವೆ.

ಗಲಾತ್ಯ ಪತ್ರಿಕೆಯಲ್ಲಿ ಪೌಲನು ಬರೆಯುವದೇನೆಂದರೆ **"ಹಾಗಾಗದೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಉಂಟಾಗುವ ಆ ವಾಗ್ದಾನದ ಫಲವು ನಂಬುವವರಿಗೇ ಕೊಡಲ್ಪಡಬೇಕೆಂದು ಶಾಸ್ತ್ರವು ಸಮಸ್ತವನ್ನು ಪಾಪಕ್ಕೊಳಗಾಗಿದೆಯೆಂದು ತೀರ್ಮಾನಿಸಿತು."**(ಗಲಾತ್ಯ 3:22). ಯೇಸುವಿನಲ್ಲಿ ನಂಬಿಕೆಯಿಡುವುದರಿಂದ ಬರುವ ವಾಗ್ದಾನವನ್ನು ಅತನು ಏನೆಂದು ಕರೆಯುತ್ತಾನೆ - ಅವರು ಅದನ್ನು ಸ್ವೀಕರಿಸುವ ಸಲುವಾಗಿ ದೇವರು ಎಲ್ಲಾ ಪುರುಷರನ್ನು ಪಾಪದ ಸೆರಮನೆಯಲ್ಲಿ ಮುಚ್ಚಿಹಾಕಿದ್ದಾನೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ದೇವರು ಪುರುಷರಿಗೆ ಪಾಪದ ಅಡಿಯಲ್ಲಿ ಕಟ್ಟುಹಾಕಿರುವ ಕಾರಣ ಅವರು ಈ ವಾಗ್ದಾನವನ್ನು ಪಡೆಯಬಹುದು. ಪ್ರಮುಖ ಪ್ರಶ್ನೆ: ವಾಗ್ದಾನ ಎಂದರೇನು?

ಇದೇ ಪತ್ರಿಕೆಯ ಮೂಲಕ ಪೌಲನು ವಾಗ್ದಾನ ಎಂದರೇನೆಂದು ನಮಗೆ ವಿವರಿಸುತ್ತಾನೆ. ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.ಆ ವಾಗ್ದಾನ ಅಂದರೆ ಪವಿತ್ರಾತ್ಮ, ಅ.ಕೃ.2:38 ರ ರೀತಿಯಲ್ಲೇ, ದಾನವೆಂದರೆ ಪವಿತ್ರಾತ್ಮ. ಪೌಲನು ಅರ್ಥಪೂರ್ಣ ವಿವರಣೆಯನ್ನು ಎಫೆಸ 1:13,14 ರಲ್ಲಿ ಒತ್ತಿ ಹೇಳುವದೇನೆಂದರೆ **"ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವದೆಂಬದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟುಮಾಡುವದು."**(ಎಫೆಸ1:13,14).ಪವಿತ್ರಾತ್ಮನೇ **ವಾಗ್ದಾನ!**

ನಾವು ಸೈಫರ್ ಪದದ ಅರ್ಥ ತಿಳದುಕೊಂಡಿದ್ದೇವೆ ಹಾಗಾದರೆ ಗಲಾತ್ಯ 3ರಲ್ಲಿ ಸಂಕೇತದ ಸಂದೇಶ ನೋಡುವ,ಮತ್ತು ಅಲ್ಲಿ ಹೊಸ ಒಡಂಬಡಿಕೆಯ ಅತ್ಯಂತ ಪ್ರಮುಖ ಮೂಲಭೂತ ಅಂಶವನ್ನು ಕಂಡುಕೊಳ್ಳುತ್ತೇವೆ.ಗಲಾತ್ಯ 3:22 ರಲ್ಲಿ

ಸ್ಪಷ್ಟವಾಗಿದೆ,ನಾವು ವಾಗ್ದಾನವನ್ನು ಪಡೆಯುವಂತೆ ಪಾಪದಡಿಯಲ್ಲಿ ನಮ್ಮನ್ನು ಕಟ್ಟಿಹಾಕುವುದು ದೇವರ ಉದ್ದೇಶವಾಗಿದೆ.ಅದೇ ರೀತಿಯಲ್ಲಿ **"ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ. ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ."(ಗಲಾತ್ಯ3:13,14)** "ಕ್ರಿಸ್ತನು ನಮ್ಮನ್ನು ಬಿಡಿಸಿದನು "ಮತ್ತು "ಈ ನಿಟ್ಟಿನಲ್ಲಿ" ಬಿಡುಗಡೆ-ಪಾಪಕ್ಷಮಾಪಣೆ,ರಕ್ಷಣೆ-ಇನ್ನೊಂದು ಉದ್ದೇಶಕ್ಕಾಗಿ.ಹಾಗಾದರೆ ಆ ಬೇರೆ ಉದ್ದೇಶವೇನು?

ಉದ್ದೇಶದ ಮಹತ್ವವನ್ನು ಈ ರೀತಿ ವಿವರಿಸಬಹುದು. ದಿನಸಿಗಳನ್ನು ಖರೀದಿಸಲು "ಸಲುವಾಗಿ" ನಿಮ್ಮ ಕಾರ್ ಮಾರುಕಟ್ಟೆಗೆ ನೀವು ಚಲಿಸಿಕೊಂಡು ಹೋದಿರಿ. ನಿಮ್ಮ ಉದ್ದೇಶ ದಿನಸಿಗಳನ್ನು ಖರೀದಿಸುವುದು ಎಂದು ಗಮನಿಸಿ - ವಾಹನವು ನೀವು ಅಲ್ಲಿಗೆ ಹೋಗಲು ಆಯ್ಕೆ ಮಾಡಿಕೊಂಡ ಸಾಧನವಾಗಿದೆ.

ದೇವರ ಉದ್ದೇಶವು ಈ ಮಾತುಗಳಲ್ಲಿ ವ್ಯಕ್ತವಾಗಿದೆ: "ಆ ನಿಟ್ಟಿನಲ್ಲಿ " ಅಬ್ರಹಾಮನ ಆಶೀರ್ವಾದ ಬರಬಹುದು; ಅಂದರೆ, ನಾವು ಪವಿತ್ರಾತ್ಮನ ವಾಗ್ದಾನ  ಪಡೆಯಬಹುದು.ಉದ್ದೇಶವು ಪವಿತ್ರಾತ್ಮ ವಾಗ್ದಾನ.

**ಹಾಗಾದರೆ, ಆ ಪಾಪ ಕ್ಷಮಾಪಣೆಯನ್ನು ಗಮನಿಸಿ - ವಿಮೋಚನೆ - ದೇವರು ತನ್ನ ಉದ್ದೇಶವನ್ನು ಕೈಗೊಳ್ಳಲು ಆಯ್ಕೆ ಮಾಡಿದ ವಾಹನವಾಗಿದೆ.**

ಪಾಪಗಳ ಕ್ಷಮೆಯು ವಾಹನವಾಗಿದೆ, ಮತ್ತು ದೇವರ ಉದ್ದೇಶವು ನಮ್ಮಲ್ಲಿ ಪವಿತ್ರಾತ್ಮನು ವಾಸಿಸುವುದು ಎರಡು ಪ್ರಮುಖ ಧಾರ್ಮಿಕ ವಿಧಿಗಳನ್ನು ಹೊಂದಿದೆ. ಮೊದಲನೆಯದು ಹೊಸ ಒಡಂಬಡಿಕೆಯ ಕೇಂದ್ರ ಸಂದೇಶವು ಪಾಪಗಳ ಕ್ಷಮೆ ಅಲ್ಲ. ಪಾಪಗಳ ಕ್ಷಮಾಪಣೆಯು ಬಹಳ ಮುಖ್ಯವಾದ ವಾಹನವಾಗಿದೆ ಮತ್ತು ನಮ್ಮ ರಕ್ಷಕನಾದ ಕ್ರಿಸ್ತನ ಮೂಲಕ ಪಾಪಗಳ ಕ್ಷಮೆ ಪಡೆಯಬಹುದು ಎಂಬುದು ಅದ್ಭುತವಾಗಿದೆ-ಆದರೆ ವಾಹನ ಯಾವಾಗಲೂ ಉದ್ದೇಶಕ್ಕಾಗಿ ಅಧೀನವಾಗಿದೆ. ಧರ್ಮೋಪದೇಶದ ಕೇಂದ್ರೀಯ ಗಮನ ಪಾಪಗಳ ಕ್ಷಮೆಯಾದಾಗ,ಹೊಸ ಒಡಂಬಡಿಕೆಯ ಗುರುತು ತಪ್ಪಿಹೋಗುತ್ತದೆ. ಪಾಪಗಳ ಕ್ಷಮೆಯನ್ನು ಮೊದಲಿಗೆ ಕಳೆದುಹೋದವರಿಗೆ ಬೋಧಿಸಬೇಕು - ಇದು ಪ್ರಾಪಂಚಿಕ ಮನುಷ್ಯನಿಗೆ ಮೊದಲಿಗೆ ಅರ್ಥೈಸಿಕೊಳ್ಳುವ ಏಕೈಕ ಸಂದೇಶವಾಗಿದೆ. ಆದರೆ ಮುಳುಗಿಸುವಿಕೆಯ ನಂತರ,ಪವಿತ್ರಾತ್ಮನ ಮೂಲಕ ನೀಡುವ ಪರಿಪೂರ್ಣತೆ "ಬಯಸುವುದು" ಎಂಬುದನ್ನು ಧರ್ಮಪ್ರಮಾಣದ  "ಅವಶ್ಯಕತೆ"ಯೆಂದು ಕ್ರೈಸ್ತನು ಗಮನವನ್ನು ಹಿಂತಿರುಗಿಸಬೇಕು. ಪಾಪಕ್ಷಮೆ ಎಂಬುದು ವಾಹನ ಎಂದು ತಿಳಿದುಕೊಂಡು, ಮತ್ತು ಪವಿತ್ರಾತ್ಮನ  ವಾಗ್ದಾನವು ಜೀವನ ಮತ್ತು ಮರಣದ ನಡುವಿನ ವ್ಯತ್ಯಾಸ, ಮತ್ತು ಧರ್ಮಪ್ರಮಾಣದ  ಮತ್ತು ನಂಬಿಕೆಯ ನಡುವಿನ ವ್ಯತ್ಯಾಸವಾಗಿದೆ ಎಂಬುದು ದೇವರ ಉದ್ದೇಶವಾಗಿದೆ!

ಎರಡನೇ ಆತ್ಮವಿಶ್ವಾಸವು ದೇವರ ಆತ್ಮನು ನಮ್ಮೊಳಗೆ ವಾಸಿಸುವ  ಪ್ರಾಮುಖ್ಯತೆಯ ಬಗ್ಗೆ ವ್ಯವಹರಿಸುತ್ತದೆ. ದೇವರು ಮನುಷ್ಯನ ಅಪರಾಧಿ ಪ್ರಜ್ಞೆಯ ಸ್ಥಿತಿಯ ಮೇಲೆ ಮೊದಲೂ ಮತ್ತು ಆತನು ಅವನಿಗೆ ಕೊಡುವ ಕ್ಷಮೆಯನ್ನು ವ್ಯವಹರಿಸುತ್ತದೆ. ಶಾರೀರಿಕ ಮನಸ್ಸು ಆಂತರ್ಯದಲ್ಲಿ ವಾಸಿಸುವ ಆತ್ಮನ  ಪ್ರಾಮುಖ್ಯತೆಯನ್ನು ಗ್ರಹಿಸಲು ಸಾಧ್ಯವಿಲ್ಲ ಹಾಗಾಗಿ ಮನುಷ್ಯರ ತಿಳುವಳಿಕೆಯನ್ನು ಸರಿಯಾದ ಹಂತಕ್ಕೆ ಸೇರಿಸಲು, (ಸೆರೆಮನೆಯೊಂದರಲ್ಲಿ ಮುಚ್ಚಿಡುವುದು ದೇವರ ತೀವ್ರ ಕ್ರಮವಾಗಿದೆ, ಆದರೆ ಸಂವಾದಿಸಲೂ ಇದೊಂದೇ ಏಕೈಕ ಸಂಗತಿಯಾಗಿದೆ.) ಮತ್ತು ನಮ್ಮ ಸ್ಥಿತಿಯನ್ನು ಗುರುತಿಸಿದ ನಂತರ, ನಾವು ಈಗ ಸರ್ವಶಕ್ತನ ಧ್ವನಿಯನ್ನು ಕೇಳಲು ಸಿದ್ಧರಾಗಿದ್ದೇವೆ.

ಪಾಪಗಳ ಕ್ಷಮೆ ಎಷ್ಟು ಪ್ರಮುಖವಾಗಿದೆ ಎಂಬುದನ್ನು ಗುರುತಿಸುವದಾದರೆ- ಪರಲೋಕದಲ್ಲಿನ ಮಹಿಮೆ ಮತ್ತು ನಿತ್ಯ ಬೆಂಕಿಯ ಕೆರೆಯ ನಡುವಿನ ವ್ಯತ್ಯಾಸ-ಮತ್ತು ಕ್ಷಮಾಪಣೆ ಎಂಬುದು ಒಂದು ಪ್ರಮುಖ ಉದ್ದೇಶಕ್ಕಾಗಿ ಕೊಂಡೊಯ್ಯುವ ವಾಹನ ಎಂದು ಅರ್ಥಮಾಡಿಕೊಳ್ಳುವುದು,ಪವಿತ್ರಾತ್ಮನ ವಾಗ್ದಾನ ಎಷ್ಟು ಮುಖ್ಯ ಎಂದು ನಾವು ಈಗ

ಅರ್ಥಮಾಡಿಕೊಂಡಿದ್ದೇವೆ.ಇದು ಇನ್ನೂ ದುಃಖಿಸುವರಿಗೆ ದೇವರ ಏಕೈಕ ವಿಧಾನವಾಗಿದೆ - ಆದರೆ ಜಾಗೃತಿ ಬೇಕು – ಅವನ ಅಂತರಂಗದಲ್ಲಿ ವಾಸಿಸುವ ಪವಿತ್ರಾತ್ಮ ಮಹತ್ವವನ್ನು ಗ್ರಹಿಸಬೇಕು. "**ಆದದರಿಂದ -ನಿದ್ರೆ ಮಾಡುವವನೇ, ಎಚ್ಚರವಾಗು!ಸತ್ತವರನ್ನು ಬಿಟ್ಟು ಏಳು!ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು ಎಂದು ಹೇಳಿಯದೆ.**(ಎಫೆಸ **5:14**).

**ಹೊಸ ಒಡಂಬಡಿಕೆಯ ಕೇಂದ್ರ ಸಂದೇಶವು ವಾಗ್ದಾನವಾಗಿರುವ- ಪವಿತ್ರಾತ್ಮನ ಅಂತರಂಗ ನಿವಾಸ.**

ಸುಮಾರು 33ನೇ ಕ್ರಿ.ಶ.ಪಂಚಾಶತ್ತಮ ದಿನದಂದು ಪೇತ್ರನ ಪ್ರೇರಿತ ಹೊಸ ಒಡಂಬಡಿಕೆಯ ಪ್ರಮಾಣದ ಲೋಕದ ಐತಿಹಾಸಿಕ ಮೊದಲನೆ ಮಾತು "ದೇವರ ಕಡೆಗೆ ತಿರಿಗಿಕೊಂಡು" ಎಂಬ ಮಾತು ಕೇಳಿರಿ." ಪೇತ್ರನು ಅವರಿಗೆ - **ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ,ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದಿವಿರಿ;ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು."(ಅ.ಕೃ.2:38,39)**

ಪೇತ್ರನ ಪ್ರತ್ಯುತ್ತರದ ಒತ್ತಡವು ಪಾಪಗಳ ಕ್ಷಮೆ ಮಾತ್ರವೇ ಆಗಿರಲಿಲ್ಲ- ಪಾಪಗಳ ಕ್ಷಮೆ ಒಳಗೊಂಡಿದ್ದರೂ .ಅವನ ಕೇಂದ್ರ ಸೂಚನೆ **ವಾಗ್ದಾನವಾಗಿತ್ತು!** ಪಾಪಗಳ ಕ್ಷಮಾಪಣೆಯು ಸ್ಪಷ್ಟವಾಗಿ ಇಲ್ಲಿ ಪವಿತ್ರಾತ್ಮನ ದಾನದ ವಾಗ್ದಾನಕ್ಕೆ ವಾಹನವಾಗಿದೆ.

ವಾಗ್ದಾನವನ್ನು ಯಾರಿಗೆ ನೀಡಲಾಗಿದೆ ಎಂಬುದನ್ನು ಗಮನಿಸಿ.ಆ ವಾಗ್ದಾನವು "ನಿಮಗೂ ಮತ್ತು ನಿಮ್ಮ ಮಕ್ಕಳಿಗೂ" ಯಹೂದಿ ಜನರಿಗೆ ಈ ಪ್ರಸಂಗ ಹೇಳಿದರೂ "ದೂರವಾಗಿರುವರೆಲ್ಲರಿಗೂ".ಪೌಲನು ಎಫೆಸದವರಿಗೆ ಬರೆಯುವಾಗ ಕ್ರಿಸ್ತನಲ್ಲಿರುವ ಯೆಹೊದ್ಯ ಮತ್ತು ಅನ್ಯಜನರ ಅನ್ಯೂನ್ಯತೆ ಬಗ್ಗೆ ವಿವರಿಸುತ್ತಾನೆ-**"ಇದಲ್ಲದೆ ಆತನು ಬಂದು ದೂರವಾಗಿದ್ದ ನಿಮಗೂ ಸಮಾಧಾನವನ್ನು ಮತ್ತು ಸಮೀಪವಾಗಿದ್ದವರಿಗೂ ಸಮಾಧಾನವನ್ನು ಸಾರಿದನು. ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾಯಿತು."(ಎಫೆಸ 2:17,18).**

ಇಬ್ರಿಯ ಗ್ರಂಥಕರ್ತ ಬಹಳ ಮುಖ್ಯ ಹೇಳಿಕೆಯನ್ನು ನಾವು ಪರೀಕ್ಷಿಸೋಣ **"ಇವರೆಲ್ಲರೂ[ಹಳೆ ಒಡಂಬಡಿಕೆಯ ನಂಬಿಕೆಯ ಶ್ರೇಷ್ಠ ವ್ಯಕ್ತಿಗಳು] ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು."(ಇಬ್ರಿಯ 11:39,40).**

ಕನಿಷ್ಠ ಕ್ರೈಸ್ತರು ಸ್ನಾನಿಕನಾದ ಯೋಹಾನನಿಗಿಂತ ಹೆಚ್ಚಿನವರು ಎಂದು ಯೇಸು ಹೇಳಿದನು ಎಂದು ನಾವು ನೆನಪಿಸಿಕೊಳ್ಳುತ್ತೇವೆ.**(ಮತ್ತಾಯ 11:11).** ಎಲ್ಲಾ ಹಳೆ ಒಡಂಬಡಿಕೆಯ ಶ್ರೇಷ್ಠರಲ್ಲಿ ಸ್ನಾನಿಕನಾದ ಯೋಹಾನನು ಅತ್ಯಂತ ಶ್ರೇಷ್ಠನೆಂದು ನಾವು ದೃಢೀಕರಿಸಿದ್ದೇವೆ, ಮತ್ತು ಅದರಿಂದಾಗಿ ಎಲ್ಲಾ ಹಳೆ ಒಡಂಬಡಿಕೆಯ ಶ್ರೇಷ್ಠರಲ್ಲಿ ಪರಲೋಕ ರಾಜ್ಯವು ಕನಿಷ್ಟವೆಂದು ತೀರ್ಮಾನಕ್ಕೆ ಬಂದಿತು. "ಅದು ಹೇಗೆ ಸಾಧ್ಯವಿದೆ?" ಎಂದು ನಾವು ಕೇಳಿದ್ದೇವೆ. ಮತ್ತು ಕನಿಷ್ಠ ಕ್ರೈಸ್ತರು ದೇವರಿಂದ ಹುಟ್ಟಿದ್ದಾರೆ ಎಂದು ತೀರ್ಮಾನಕ್ಕೆ ಬಂದೆವು,ಆದರೆ ಯೋಹಾನನು ಸೇರಿದಂತೆ ಹಳೆಯ ಒಡಂಬಡಿಕೆಯ ಶ್ರೇಷ್ಠರಲ್ಲಿ ಯಾರೂ **ನೀರು ಮತ್ತು ಆತ್ಮನಿಂದ ಮತ್ತೆ ಜನಿಸಲಿಲ್ಲ.** ಇಬ್ರಿಯರ ಬರಹಗಾರನು ಅದೇ ವಿಷಯ ಮಾತಾಡುತ್ತಾನೆ - ನಂಬಿಕೆಯಿಂದ ಮರಣ ಹೊಂದಿದ ಎಲ್ಲರೂ ವಾಗ್ದಾನವನ್ನು ಸ್ವೀಕರಿಸಲಿಲ್ಲ! ಅವರು ಆತ್ಮನಿಂದ ಜನಿಸಲಿಲ್ಲ. ನಾವು ಹಳೆಯ ಒಡಂಬಡಿಕೆಯವರಲ್ಲ,ನಮ್ಮಲ್ಲಿ ದೇವರ ಆತ್ಮನು ವಾಸವಾಗಿದ್ದಾನೆ.

ಹೊಸ ಒಡಂಬಡಿಕೆಯ ಕೇಂದ್ರ ಸಂದೇಶವು **ವಾಗ್ದಾನ** ಮಾಡಲ್ಪಟ್ಟ ಪವಿತ್ರಾತ್ಮ. ಹಳೆಯ ಒಡಂಬಡಿಕೆಯಲ್ಲಿ ಅವರು ಯಾವುದನ್ನು ಸಾಧಿಸಿದರೂ ಆ ವಾಗ್ದಾನವನ್ನು ಯಾರಾರು ಸ್ವೀಕರಿಸಿದರೂ ಅದನ್ನು ಮೀರಬಹುದು.

ಇನ್ನೊಂದು “ಸೈಫರ್” ಪದ ಮರ್ಮ.ಮರ್ಮವೆಂದರೆ ಗುಪ್ತವಾದದ್ದು,ನಿಗೂಢ,ಅಥವಾ ಹೆಚ್ಚು ನಿರ್ದಿಷ್ಟವಾಗಿ ತುಣುಕುಗಳನ್ನು ಹಿಂದೆ ಅಡಗಿಸಿಟ್ಟಿರುವ ಒಂದು ಮಾನಸಿಕ ಒಗಟು, ಮತ್ತು ನಂತರ ಅಂತಿಮ ಅಧ್ಯಾಯದಲ್ಲಿ ಒಟ್ಟಾಗಿ ಸೇರಿಸಿ ಜೋಡಿಸುವುದು.

ವಾಗ್ದಾನದಂತೆ,ಮರ್ಮ ಎಂಬ ಪದವನ್ನು ಕೆಲವೊಮ್ಮೆ ಬೇರೆ ರೀತಿಯಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ, ಅಪೊಸ್ತಲನಾದ ಪೌಲ ಈಗಾಗಲೇ "ಅನ್ಯಾಯದ ರಹಸ್ಯ" ವನ್ನು ಕುರಿತು ಮಾತನಾಡುತ್ತಾನೆ**(2 ಥೆಸಲೊನೀಕ 2:7)** **“ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ; ಆದರೆ ಇದುವರೆಗೆ ಅಡ್ಡಿಮಾಡುವವನು ತೆಗೆದುಬಿಡಲ್ಪಡುವ ತನಕ ಅದು ಗುಪ್ತವಾಗಿಯೇ ಇರುವದು.”** ದೇವರು ವಿಶೇಷ ಉದ್ದೇಶಕ್ಕಾಗಿ ಮರ್ಮ ಎಂಬ ಪದ ಉಪಯೋಗ ಮಾಡಿದ್ದಾನೆ.

ಮರ್ಮವು ಏನು ಎಂಬುದರ ಬಗ್ಗೆ ಪೌಲನು ನೇರವಾಗಿ ಹೇಳುತ್ತಾನೆ,ಆದರೂ ಅವನ ವ್ಯಾಖ್ಯಾನದ ಪ್ರಾಮುಖ್ಯತೆಯ ಮೇಲೆ ಕೆಲವರು ಮುಗ್ಗರಿಸಬಹುದು **"ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು.ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ.ನಾನು ಸಭೆಗೆ ಸೇವಕನಾದೆನು.ದೇವರು ತನ್ನ ವಾಕ್ಯವನ್ನು ಸಂಪೂರ್ಣವಾಗಿ ತಿಳಿಸುವ ಕೆಲಸವನ್ನು ನಿಮ್ಮ ಪ್ರಯೋಜನಕ್ಕೋಸ್ಕರ ನನಗೆ ದಯಪಾಲಿಸಿದನು. ಆ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ. ಅನ್ಯಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸು ಮಾಡಿಕೊಂಡನು. ಈ ಮರ್ಮವು ಏನಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ.”(ಕೊಲಸ್ಸೆ 1:24-27).**

ಹಿಂದಿನ ಕಾಲ ಮತ್ತು ತಲೆಮಾರುಗಳಿಂದ ಮರೆಯಾಗಿರುವ ಮರ್ಮ -"ನಿನ್ನಲ್ಲಿ ಕ್ರಿಸ್ತನು" ಎಂಬ ರಹಸ್ಯವನ್ನು ಅಪೋಸ್ತಲನು ನಮಗೆ ಹೇಳುತ್ತಾನೆ. ನಿನ್ನಲ್ಲಿ ಕ್ರಿಸ್ತನು ಎಂದರೇನು?

ಪೌಲ ರೋಮನ್ನರಿಗೆ ಹೇಳಿದ ಮಾತುಗಳನ್ನು ಸ್ಮರಿಸುತ್ತೇವೆ: **“ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ. ಆದರೆ ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯ ದೆಸೆಯಿಂದ ಜೀವಸ್ವರೂಪವಾಗಿದೆ. ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು.”(ರೋಮಾಯ 8:9-11).**

ಈ ವಾಕ್ಯವೃಂದದಲ್ಲಿ ಪವಿತ್ರಾತ್ಮನಿಗೆ ನೀಡಿದ ಹೆಸರುಗಳನ್ನು ಗಮನಿಸಿ:

1. ಪವಿತ್ರಾತ್ಮ
2. ದೇವರಾತ್ಮನು
3. ಕ್ರಿಸ್ತನ ಆತ್ಮ
4. **ಕ್ರಿಸ್ತನು ನಿನ್ನಲ್ಲಿರುವುದು**
5. ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು
6. ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನು.

ಪವಿತ್ರಾತ್ಮನ  ಮತ್ತೊಂದು ಹೆಸರು **ಕ್ರಿಸ್ತನು ನಿನ್ನಲ್ಲಿರುವುದು** !ಮರ್ಮವು ವಾಗ್ದಾನದಂತೆ ಒಂದೇ ಆಗಿರುತ್ತದೆ – ನಮ್ಮೊಳಗೆ ವಾಸಿಸುವ ಪವಿತ್ರಾತ್ಮ!

ದೇವರ ವಾಕ್ಯವನ್ನು ಪೂರ್ಣವಾಗಿ ಕೈಗೊಳ್ಳಲು,ನಾವು ಮರ್ಮವನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಬೋಧಿಸಬೇಕು. ಮರ್ಮವು ನಮ್ಮ ಉಪದೇಶದ ಕೇಂದ್ರದಲ್ಲಿದ್ದರೆ ಹೊರತು ಹೊಸ ಒಡಂಬಡಿಕೆಯ ಕ್ರೈಸ್ತಧರ್ಮವನ್ನು ಪುನಃಸ್ಥಾಪಿಸಲು ಸಾಧ್ಯವಿಲ್ಲವೆಂದು ನಾವು ಹೇಳಿಕೊಳ್ಳಬಾರದು ಮತ್ತು ನಮ್ಮ ಇಂದಿನ ಯಹೂದ್ಯರಲ್ಲದವರಲ್ಲಿ ಈ ಮರ್ಮದ ಘನತೆಯ ಸಂಪತ್ತನ್ನು ನಾವು ತಿಳಿಯುತ್ತೇವೆ.

ಈ ಮರ್ಮವು ಹಿಂದಿನ ಪೂರ್ವಕಾಲ ಮತ್ತು ತಲೆಮಾರುಗಳಿಂದ ಅಡಗಿಸಲ್ಪಟ್ಟಿದೆ ಎಂದು ಅಪೋಸ್ತಲನು ಹೇಳಿದನು.ಈ ರಹಸ್ಯದ ತುಣುಕುಗಳನ್ನು ಎಲ್ಲಿ ಮರೆಮಾಡಲಾಗಿದೆ? ಹಳೆಯ ಒಡಂಬಡಿಕೆಯ ಪುಟಗಳಲ್ಲಿ ಅವುಗಳನ್ನು ಮರೆಮಾಡಲಾಗಿದೆ ಮತ್ತು ಪವಿತ್ರ ಅಪೊಸ್ತಲರು ಮತ್ತು ಹೊಸ ಒಡಂಬಡಿಕೆಯಲ್ಲಿ ಪ್ರವಾದಿಗಳಿಂದ ನಮಗೆ ಬಹಿರಂಗವಾಯಿತು. ಈ ರಹಸ್ಯದ ತುಣುಕುಗಳಲ್ಲಿ ಒಂದನ್ನು ನಾವು ಪರೀಕ್ಷಿಸೋಣ ಮತ್ತು ಹಳೆಯ ಒಡಂಬಡಿಕೆಯಲ್ಲಿ ಅದು ಎಷ್ಟು ಎಚ್ಚರಿಕೆಯಿಂದ ಮರೆಯಾಗಿದೆ ಎಂಬುದನ್ನು ಗಮನಿಸಿ ಮತ್ತು ಹೊಸ ಒಡಂಬಡಿಕೆಯಲ್ಲಿ ಹೇಗೆ ಬಹಿರಂಗಗೊಂಡಿದೆ ಎಂಬುದನ್ನು ತಪ್ಪಿಸುವುದು ಎಷ್ಟು ಸುಲಭ ಎಂದು ಗಮನಿಸಿ.

ದೇವರು ಆದಿಯಲ್ಲಿ ಮನುಷ್ಯನಿಗೆ ಪ್ರಕಟಿಸಿದ ಆರಂಭಿಕ ಹಂತಗಳಲ್ಲಿ ಹಿಂತಿರುಗಿ ನೋಡಿದಾಗ ಅವನು ಅಬ್ರಹಾಮನನ್ನು ಆಶೀರ್ವದಿಸಿದನು (ಅವನು ಇನ್ನೂ ಅಬ್ರಾಮ್ ಆಗಿದ್ದಾಗ)."**ನಾನು ನಿನ್ನನ್ನು ಆಶೀರ್ವದಿಸುವವರನ್ನು ಆಶೀರ್ವದಿಸುವೆನು ಮತ್ತು ನಿನ್ನನ್ನು ಶಪಿಸುವವನನ್ನು ನಾನು ಶಪಿಸುವೆನು ಮತ್ತು ನಿನ್ನಲ್ಲಿ ಭೂಮಿಯ ಎಲ್ಲಾ ಕುಟುಂಬಗಳು ಆಶೀರ್ವದಿಸಲ್ಪಡುವವು**"**(ಆದಿಕಾಂಡ 12:3)**

ಇದು ಪವಿತ್ರಾತ್ಮನ ಪ್ರವಾದನೆಯಂತೆ ಕಾಣಿಸುತ್ತದೆಯೇ? ಗಮನವಿಟ್ಟು ನೋಡಿ, ಏಕೆಂದರೆ ಇದು ನಿಜ.

**ಆದಿಕಾಂಡ**12:3 ಸಾಮಾನ್ಯವಾಗಿ ಕ್ರಿಸ್ತನ ಪ್ರವಾದನೆಯೆಂದು ಭಾವಿಸಲಾಗಿದೆ. ಕ್ರಿಸ್ತನು ಅಬ್ರಹಾಮನ ಮೂಲಕ ಬರಬೇಕು- ಕೇವಲ ಇಸ್ರಾಯೇಲ್ಯರಿಗೆ ಮಾತ್ರವಲ್ಲ,ಎಲ್ಲಾ ಜನಾಂಗಗಳಿಗೂ.ಆದರೆ ಕ್ರಿಸ್ತನು ಶಾರೀರಕವಾಗಿ ಮಾತ್ರ ಕಳೆದುಹೋದ ಕುರಿಗಳಂತಿರುವ ಇಸ್ರಾಯೇಲಿನ ಮನೆತನಕ್ಕೆ  ಕಳುಹಿಸಲ್ಪಟ್ಟನು.

ಆದರೆ ಪೌಲನು ವಿವರಿಸುವದು: **"ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ.ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.(ಗಲಾತ್ಯ 3:13,14)**

ಅಬ್ರಹಾಮನ ಆಶೀರ್ವಾದ ಏನು ಎಂದು ಎರಡು ಮಾನ್ಯ ಸಾಧ್ಯತೆಗಳಿವೆ.ಒಂದನೇ ಸಾಧ್ಯತೆ ನಿತ್ಯಜೀವ;ಇತರ ಸಾಧ್ಯತೆಯು ಪವಿತ್ರಾತ್ಮ.ನಿತ್ಯಜೀವವನ್ನು ಸಾಧ್ಯತೆಯೆಂದು ನಿರ್ಮೂಲನೆ ಮಾಡುವುದು ಸುಲಭ, ಏಕೆಂದರೆ 13 ನೇ ವಚನದಲ್ಲಿ, "ಕ್ರಿಸ್ತನು ನಮ್ಮನ್ನು ಬಿಡಿಸಿದನು"ಎಂದು ಹೇಳುತ್ತಾನೆ ಮತ್ತು 14 ನೇ ವಚನವು "ಅದಕ್ಕೆ ಅನುಗುಣವಾಗಿ" ಎಂದು ಹೇಳುತ್ತದೆ. ಅಬ್ರಹಾಮನ ಆಶೀರ್ವಾದ ವಾಗ್ದಾನ ಪವಿತ್ರಾತ್ಮ.

**ಆದಿಕಾಂಡ** 12:3**ರ** ಪ್ರವಾದನೆಯು ಪೂರ್ಣಗೊಳ್ಳುತ್ತದೆ - ಪವಿತ್ರಾತ್ಮನಲ್ಲಿ,ಕ್ರಿಸ್ತನು ಭೂಮಿಯ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸಿದನು!

ಹಳೆಯ ಒಡಂಬಡಿಕೆಯಲ್ಲಿ ಅಡಗಿರುವ ರಹಸ್ಯದ ಕೆಲವು ತುಣುಕುಗಳ ಉದಾಹರಣೆಗಳಿವೆ.ಆದರೆ ಇಲ್ಲಿ ನಮ್ಮ ಅಭಿಪ್ರಾಯವು,ಹಳೆಯ ಒಡಂಬಡಿಕೆಯ ಸಂದೇಶ ಸರಳವಾಗಿ ಕ್ರಿಸ್ತನಲ್ಲ. ವಾಸ್ತವವಾಗಿ,ಹಳೆಯ ಒಡಂಬಡಿಕೆಯನ್ನು ಶುದ್ಧ ಅಮಿಕ್ಸರ  ಒಂದು ತೊಟ್ಟಾಗಿ ಬೇಯಿಸಿದರೆ,ಆ ತೊಟ್ಟಿನ ಹೆಸರು ಮರ್ಮ ಆಗಿರಬೇಕು.

ಹಳೆಯ ಒಡಂಬಡಿಕೆಯ ಸಂದೇಶ ಸರಳವಾಗಿ ಕ್ರಿಸ್ತನಲ್ಲ, ಆದರೆ **ಕ್ರಿಸ್ತನು ನಿಮ್ಮಲ್ಲಿದ್ದಾನೇ!**

ಕೆಲವರಿಗೆ, ಆ ವ್ಯತ್ಯಾಸವು ಒಂದು ಸಣ್ಣ ಬಿಂದುದಂತೆ ತೋರುತ್ತದೆ. ಆದರೆ ನೀವು ಕ್ರಿಸ್ತನ ಮತ್ತು ಕ್ರಿಸ್ತನ ನಡುವಿನ ವ್ಯತ್ಯಾಸವು 10-ಗಜದ ರೇಖೆಯಲ್ಲಿ ಫುಟ್ಬಾಲ್ ಅನ್ನು ಬಿಡುವುದು ಮತ್ತು ನೀವು ಸ್ಪರ್ಶವನ್ನು ಹೊಡೆದಿದೆ ಎಂಬ ಭಾವನೆ ಸ್ವಲ್ಪಮಟ್ಟಿಗೆ ಇರುತ್ತದೆ. ಹಳೆಯ ಒಡಂಬಡಿಕೆಯ ಸಂದೇಶವು  **ಕ್ರಿಸ್ತನು ನಿನ್ನಲ್ಲಿರುವುದೇ!**

ಎಫೆಸದಲ್ಲಿರುವ ಸಭೆಗೆ ಆಪೋಸ್ತಲನಾದ ಪೌಲನು ವಾಗ್ದಾನ ಮತ್ತು ಮರ್ಮ ಎರಡನ್ನೂ ಕೂಡಿಸಿ ಅನ್ಯಜನರಿಗೆ ಬರೆದಿರುವ ಪತ್ರ ನೋಡುವ **"ಹೀಗಿರುವದರಿಂದ ಅನ್ಯಜನರಾಗಿರುವ ನಿಮ್ಮ ನಿಮಿತ್ತ ಕ್ರಿಸ್ತ ಯೇಸುವಿನ ಸೆರೆಯವನಾದ ಪೌಲನೆಂಬ ನಾನು ನಿಮಗೋಸ್ಕರ ಪ್ರಾರ್ಥಿಸುತ್ತೇನೆ. ನಿಮಗೋಸ್ಕರ ನಿರ್ವಹಿಸುವದಕ್ಕಾಗಿ ದೇವರು ನನಗೆ ಕೃಪೆಯಾಗಿ ಕೊಟ್ಟ ಕೆಲಸವನ್ನೂ ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ದೈವಪ್ರಕಟನೆಯಿಂದ ನನಗೆ ತಿಳಿಸಲ್ಪಟ್ಟಿತೆಂಬದನ್ನೂ ನೀವು ಕೇಳಿದ್ದೀರಲ್ಲಾ. ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ; ಬರೆದದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೊಸ್ತಲರಿಗೂ ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ. ಅದು ಯಾವದಂದರೆ, ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ. ದೇವರು ತನ್ನ ಶಕ್ತಿಯ ಪ್ರಯೋಗದಲ್ಲಿ ನನಗೆ ಉಚಿತಾರ್ಥವಾಗಿ ಅನುಗ್ರಹಿಸಿದ ಕೆಲಸವನ್ನನುಸರಿಸಿ ನಾನು ಈ ಸುವಾರ್ತೆಗೆ ಸೇವಕನಾದೆನು." (ಎಫೆಸ 3:1-7).**

ಪೌಲನು ಇಲ್ಲಿ ಅನ್ಯಜನರಿಗೆ ವಿವರಿಸಿರುವ ಮರ್ಮವನ್ನು ಗಮನಿಸುವುದಾದರೆ,ಸಹ ಬಾಧ್ಯಸ್ಥರು ,ಕ್ರಿಸ್ತನ ದೇಹವೆಂಬ ಸಭೆಯಲ್ಲಿ ಅಂಗಗಳು,ಮತ್ತು ವಾಗ್ದಾನಗಳಲ್ಲಿ ಸಹಭಾಗಿಗಳು ಎಂದು ಹೇಳುವಾಗ.ಇದು **ಕೊಲೊಸ್ಸೆಯವರಿಗೆ** 1:27 ರಲ್ಲಿ ವಿವರಣೆಯನ್ನು ಸಂಪೂರ್ಣವಾಗಿ ನಿವೇದಿಸುತ್ತದೆ,ಈ ರಹಸ್ಯವು **ಕ್ರಿಸ್ತನು ನಿಮ್ಮೊಳಗಿರುವುದೇ**.ವಾಗ್ದಾನದಲ್ಲಿ ಸಹ ಪಾಲುದಾರನಾಗಿರುವ ಮೂಲಕ – ಪವಿತ್ರಾತ್ಮ – ಕ್ರೈಸ್ತನಿಗೆ ಸಹ ಭಾಧ್ಯತೆ ಮತ್ತು ದೇಹದಲ್ಲಿ ಸಹ ಸದಸ್ಯತ್ವ. ಹಿಂದಿನ ಯುಗ ಮತ್ತು ತಲೆಮಾರುಗಳಿಂದ ಮರೆಮಾಡಲ್ಪಟ್ಟಿದ್ದನ್ನು ಅಪೊಸ್ತಲರು ಮತ್ತು ಹೊಸ ಒಡಂಬಡಿಕೆಯ ಪ್ರವಾದಿಗಳ ಮೂಲಕ ತಿಳಿದುಬಂದಿದೆ ಮತ್ತು ಸ್ಥಾಪಿತವಾದ ಹೊಸ ಒಡಂಬಡಿಕೆಯ ಗ್ರಂಥಗಳಲ್ಲಿ ನಮಗೆ ದಾಖಲಾಗಿದೆ!

**ಮರ್ಮ-ಕ್ರಿಸ್ತನು ನನ್ನೊಳಗಿರುವದೇ, ನನ್ನೊಳಗೆ ವಾಸಿಸುವ ಪವಿತ್ರಾತ್ಮ -ವಾಗ್ದಾನ**-ದೇವರ ಯೋಜನೆಯ ಈ ಭೂಮಿಯ ಕಾಲಾವಧಿಗೆ ಪರಾಕಾಷ್ಠೆಯಾಗಿದೆ. **"ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭಸಮಾಚಾರವನ್ನು ಅನ್ಯಜನರಿಗೆ ಪ್ರಸಿದ್ಧಿಪಡಿಸುವ ಹಾಗೆಯೂ ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು. ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬದನ್ನು ಉದ್ದೇಶಿಸಿದ್ದನು." (ಎಫೆಸ 3:8-10).**

ನಮ್ಮ ಪ್ರಸಂಗದಲ್ಲಿ ಮತ್ತು ಭೋಧನೆಯಲ್ಲಿ ಪೌಲನನ್ನು ಅನುಸರಿಸುತ್ತಾ ನಮ್ಮ ಒತ್ತೇನು? **" ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿ ಅದರಲ್ಲಿ ಎಚ್ಚರವಾಗಿದ್ದು ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ. ಇದಲ್ಲದೆ ನಮಗೋಸ್ಕರವೂ ಪ್ರಾರ್ಥನೆ**

**ಮಾಡಿರಿ. ಕ್ರಿಸ್ತನ ವಿಷಯದಲ್ಲಿ ದೇವರು ತಿಳಿಯಪಡಿಸಿದ ಸತ್ಯಾರ್ಥವನ್ನು ಪ್ರಸಂಗಿಸುವದಕ್ಕೆ ಆತನು ಅನುಕೂಲವಾದ ಸಂದರ್ಭವನ್ನು ನಮಗೆ ದಯಪಾಲಿಸಿ ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ ತಿಳಿಸುವಂತೆ ಅನುಗ್ರಹಮಾಡಬೇಕೆಂದು ಬೇಡಿಕೊಳ್ಳಿರಿ; ಆ ಸತ್ಯಾರ್ಥದ ನಿಮಿತ್ತವೇ ನಾನು ಸೆರೆಯಲ್ಲಿದ್ದೇನಲ್ಲಾ." (ಕೊಲಸ್ಸೆ 4:2-4). "ನನಗೋಸ್ಕರ ಸಹ ಪ್ರಾರ್ಥನೆಮಾಡಿರಿ. ನಾನು ಬಾಯಿ ತೆರೆಯುವಾಗ ಪೂರ್ವಕಾಲದಲ್ಲಿ ಗುಪ್ತವಾಗಿದ್ದ ಸುವಾರ್ತಾಸತ್ಯಾರ್ಥವನ್ನು ಭಯವಿಲ್ಲದೆ ತಿಳಿಸುವದಕ್ಕೆ ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿರಿ. ಆ ಸತ್ಯಾರ್ಥದ ನಿಮಿತ್ತವೇ ರಾಯಭಾರಿಯಾದ ನಾನು ಬೇಡಿಯಲ್ಲಿ ಬಿದ್ದಿದ್ದೇನಲ್ಲಾ, ಅದರ ವಿಷಯದಲ್ಲಿ ಧೈರ್ಯವಾಗಿ ಮಾತಾಡುವ ಹಂಗಿನಲ್ಲಿದ್ದೇನೆ; ಹಾಗೆಯೇ ನಾನು ಮಾತಾಡಬೇಕೆಂದು ನನಗೋಸ್ಕರ ಬೇಡಿಕೊಳ್ಳಿರಿ.(ಎಫೆಸ 6:19,20).**

ಸುವಾರ್ತೆಯ ಮರ್ಮ- ಹಳೆಯ ಒಡಂಬಡಿಕೆಯ ಗ್ರಂಥಗಳಲ್ಲಿ ಅದರ ತುಣುಕುಗಳು ಮರೆಮಾಡಲಾಯಿತು- ಅದು ಕ್ರಿಸ್ತನು ನನ್ನೊಳಗಿರುವುದೇ,ವಾಗ್ದಾನದ ಪವಿತ್ರಾತ್ಮ,ಹಳೆಯ ಒಡಂಬಡಿಕೆಯ ಹಾಗೂ ಹೊಸ ಒಡಂಬಡಿಕೆಯ ಸಂದೇಶವು ಮರ್ಮ ಮತ್ತು ವಾಗ್ದಾನ.ಈ ಮರ್ಮ ಮತ್ತು ವಾಗ್ದಾನ ಸ್ಪಷ್ಟವಾಗಿಯೂ ಧೈರ್ಯದಿಂದ ಪ್ರಚಾರ ಮಾಡಬೇಕು, ದೇವರ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬದನ್ನು ಉದ್ದೇಶಿಸಿದ್ದನು.

## Glory ಮಹಿಮೆ

ನಮ್ಮ ಮುಂದಿನ ಸ್ಫೈಫರ್ ಪದ "ಮಹಿಮೆ" ಇದು "ಮರ್ಮ","ವಾಗ್ದಾನ" ಪದಗಳ ವಿರುದ್ಧ ಸಾಮಾನ್ಯವಾಗಿ ಬಳಸುವ ಪದವಾಗಿದೆ.ಆದರೆ ಇದನ್ನು ಅಸ್ಪಷ್ಟವಾಗಿ ಅರ್ಥ ಮಾಡಿಕೊಂಡಿರುವುದೇ ಹೆಚ್ಚು. ನಾವು "ಮಹಿಮೆ" ಪ್ರತಿನಿಧಿಸುವ ನಿರ್ದಿಷ್ಟ ಪರಿಕಲ್ಪನೆಯ ಮೇಲೆ ಕೇಂದ್ರೀಕರಿಸಲು ಬಯಸುತ್ತೇವೆ, ಹೀಗಾಗಿ ಕ್ರಿಸ್ತನ ಅಗಾಧ ಸಂಪತ್ತಿನಲ್ಲಿ ಹೆಚ್ಚು ರೋಮಾಂಚನವಾದ ಬಾಗಿಲುಗಳನ್ನು ತೆರೆಯಲು ನಾವು ಬಯಸುತ್ತೇವೆ. "ಮಹಿಮೆ" ಎನ್ನುವುದು ಪುನರುತ್ಥಾನಗೊಂಡ ರಾಜ್ಯದ ವಿವರಣೆಯಾಗಿದೆ ಮತ್ತು ನಾವು "ಮಹಿಮೆಯನ್ನು" "ಹೊಳೆಯುತ್ತಿರುವ" ಅಥವಾ "ಎತ್ತರಿಸಿದ" ಎಂಬ ಅರ್ಥದಿಂದ ಅದನ್ನು ತೋರಿಸಬೇಕೆಂದು ಬಯಸುತ್ತೇವೆ.

ಯಹೂದ್ಯರೊಟ್ಟಿಗೆ ತೀವ್ರವಾದ ಚರ್ಚೆಯಲ್ಲಿ ಯೇಸು ಹೇಳಿದ್ದು **"ಯೇಸು - ನನ್ನನ್ನು ನಾನೇ ಮಹಿಮೆಪಡಿಸಿಕೊಂಡರೆ ನನ್ನ ಮಹಿಮೆ ಹುರುಳಿಲ್ಲದ್ದು; ನನ್ನನ್ನು ಮಹಿಮೆಪಡಿಸುವವನು ನನ್ನ ತಂದೆಯೇ. ನೀವು ಆತನನ್ನು ನಮ್ಮ ದೇವರು ಅನ್ನುತ್ತೀರಿ; ಆದರೂ ನೀವು ಆತನನ್ನು ತಿಳಿಯದೆ ಇದ್ದೀರಿ. ನಾನಂತು ಆತನನ್ನು ಬಲ್ಲೆನು; ಆತನನ್ನು ಅರಿಯೆನೆಂದು ಹೇಳಿದರೆ ನಿಮ್ಮ ಹಾಗೆ ಸುಳ್ಳುಗಾರನಾಗುವೆನು; ಆದರೆ ಆತನನ್ನು ತಿಳಿದಿದ್ದೇನೆ, ಆತನ ವಾಕ್ಯವನ್ನು ಕೈಕೊಂಡು ನಡೆಯುತ್ತೇನೆ."(ಯೋಹಾನ 8:54,55).**ಇಲ್ಲಿ ನಮ್ಮ ಸ್ಪಷ್ಟವಾದ ಮಾತು - ಯೇಸು ಮಹಿಮೆಯ ರಾಜ್ಯವನ್ನು ಪ್ರವೇಶಿಸಲು ಅಗಮ್ಯವಾದ ಬೆಳಕಿಗೆ ಪ್ರವೇಶಿಸುವದಕ್ಕೆ ಆತನು ಪುನರುತ್ಥಾನಗೊಳ್ಳಬೇಕಾಗಿತ್ತು.

ಅಪೊಸ್ತಲನಾದ ಯೋಹಾನನು ದೇವಾಲಯದ ಹಬ್ಬದ ಸಂದರ್ಭದಲ್ಲಿ ಹಿಂದಿನ ಘಟನೆಯನ್ನು ವರ್ಣಿಸುತ್ತಾನೆ: **"ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು - ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು; ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ."(ಯೋಹಾನ 7:37-39).** ಯೇಸು ಅತನ ಪುನರುತ್ಥಾನದಲ್ಲಿ ಮಹಿಮೆಹೊಂದಿದ್ದಾನೆ;

ನಂತರ ಪವಿತ್ರಾತ್ಮನು ಪಂಚಾಶತ್ತಮ ದಿನದಂದು ಬಂದನು. **"ದೇವಭಕ್ತಿಗೆ ಆಧಾರವಾಗಿರುವ ಸತ್ಯಾರ್ಥವು ಗಂಭೀರವಾದದ್ದೆಂಬದಕ್ಕೆ ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ; ಅದೇನಂದರೆ -ಆತನು ಶರೀರಧಾರಿಯಾಗಿ ಪ್ರತ್ಯಕ್ಷನಾದನು;ಆತ್ಮ ಸಂಬಂಧವಾಗಿ ಆತನೇ ಎಂದು ಸ್ಥಾಪಿಸಲ್ಪಟ್ಟನು;ದೇವದೂತರಿಗೆ ಕಾಣಿಸಿಕೊಂಡನು;ಅನ್ಯಜನರಲ್ಲಿ ಪ್ರಸಿದ್ಧಿ ಮಾಡಲ್ಪಟ್ಟನು;ಲೋಕದಲ್ಲಿ ನಂಬಲ್ಪಟ್ಟನು;ಪ್ರಭಾವಸ್ಥಾನದಲ್ಲಿ ಸೇರಿಸಲ್ಪಟ್ಟನು."(1 ತಿಮೊಥೆ 3:16)**

* ಇಲ್ಲಿ ಮತ್ತೊಂದು ಮರ್ಮದ ತುಣುಕು ಇದೆ.ಯೋಹಾನನು *ಜೀವಕರವಾದ ನೀರಿನ ಹೊಳೆಗಳು;*ಶಾಸ್ತ್ರದಲ್ಲಿ ಮುಂತಿಳಿಸಿದ ಹಾಗೆ ಎಂದು ಹೇಳುವಾಗ ಪವಿತ್ರಾತ್ಮ ಪರ್ಯಾಯ ನಾಮ.**(ಜಕರ್ಯ14:8 ಮತ್ತು ಯೆಹಜ್ಕೇಲನು 47:1-12)**

ಕ್ರಿಸ್ತನ ಪುನುರುತ್ಥಾನ ಮತ್ತು ಮಹಿಮೆಯೂ ಅತ್ಯಂತ ಪ್ರಮುಖವಾದ ಐತಿಹಾಸಿಕ ಘಟನೆ,ದೇವರ ವಾಕ್ಯದ ಆಧಾರವೂ,ನಮ್ಮ ಆತ್ಮಕ್ಕೆ ಲಂಗರದ ಹಾಗಿದೆ.ಹಳೆಯ ಒಡಂಬಡಿಕೆಯಿಂದ ಒಂದು ಉದಾಃ ಅಗತ್ಯವಿದ್ದು ಯೇಸುವಿನ ಪುನುರುತ್ಥಾನ ಪ್ರಾಮುಖ್ಯತೆಯ ವಿವರಣೆಯೂ,ಮತ್ತು ಮಹಿಮೆಯ ಅರ್ಥವಾಗಬೇಕು.

**"ಅರಸನಾದ ಉಜ್ಜೀಯನು ಕಾಲವಾದ ವರುಷದಲ್ಲಿ ಕರ್ತನು ಉನ್ನತೋನ್ನತ ಸಿಂಹಾಸನಾರೂಢನಾಗಿರುವದನ್ನು ಕಂಡೆನು. ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿತ್ತು. ಆಗ ಒಬ್ಬನು ಮತ್ತೊಬ್ಬನಿಗೆ - ಸೇನಾಧೀಶ್ವರನಾದ ಯೆಹೋವನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ ಎಂದು ಕೂಗಿ ಹೇಳಿದನು. ಆತನ ಸುತ್ತ ಸೆರಾಫಿಯರು ಇದ್ದರು; ಪ್ರತಿಯೊಬ್ಬನು ಆರಾರು ರೆಕ್ಕೆಯುಳ್ಳವನಾಗಿ ಎರಡರಿಂದ ತನ್ನ ಮುಖವನ್ನು, ಎರಡರಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡು ಎರಡನ್ನು ಬಡಿಯುತ್ತಾ ನೆಲಸೋಕದೆ ನಿಂತಿದ್ದನು. ಕೂಗುವವನ ಶಬ್ದಕ್ಕೆ ದ್ವಾರದ ಅಸ್ತಿವಾರವು ಕದಲಿತು; ಧೂಮವು ಮಂದಿರದಲ್ಲೆಲ್ಲಾ ತುಂಬಿತು. ಆಗ ನಾನು - ಅಯ್ಯೋ, ನನ್ನ ಗತಿಯನ್ನು ಏನು ಹೇಳಲಿ! ನಾಶವಾದೆನಲ್ಲಾ; ನಾನು ಹೊಲಸು ತುಟಿಯವನು, ಹೊಲಸು ತುಟಿಯವರ ಮಧ್ಯದಲ್ಲಿ ವಾಸಿಸುವವನು; ಇಂಥ ನನ್ನ ಕಣ್ಣುಗಳು ರಾಜಾಧಿರಾಜನನ್ನು, ಸೇನಾಧೀಶ್ವರನಾದ ಯೆಹೋವನನ್ನು ಕಂಡವು."(ಯೆಶಾಯ 6:1-5).**

ಕರ್ತನು ಎನ್ನುವುದರ ಇಬ್ರಿಯ ಪದ ಅದೂನಾಯ್ ಅಂದರೆ ***ಮಾಲೀಕ. "ಯಾ ಹ್ ವ್ ಹ್" , ಅದರ ಉಚ್ಚಾರಣೆಯೂ ಯಾಹ್ ವೇ ಅಥವಾ ಯೆಹೋವನು.***

ನಾವು ಕೇಳುವುದಕ್ಕೆ ಸಿದ್ದರಾಗಿರುವ ಪ್ರಶ್ನೆ "ಯೆಶಾಯ ನೋಡಿದ ಮಹಿಮೆ ಯಾರದ್ದು? ಉತ್ತರವು: ***"ಯಾ ಹ್ ವ್ ಹ್" - ಅಥವ ಸೇನಾಧಿಶ್ವರನಾದ ಯಹೋವ!***

**"ಸೆರಾಫಿಯರಲ್ಲಿ ಒಬ್ಬನು ಯಜ್ಞವೇದಿಯಿಂದ ತಾನು ತಂಡಸದಲ್ಲಿ ತೆಗೆದ ಕೆಂಡವನ್ನು ಕೈಯಲ್ಲಿ ಹಿಡಿದುಕೊಂಡು ನನ್ನ ಬಳಿಗೆ ಹಾರಿ ಬಂದು ' 'ನನ್ನ ಬಾಯಿಗೆ ಮುಟ್ಟಿಸಿ - ಇಗೋ, ಇದು ನಿನ್ನ ತುಟಿಗಳಿಗೆ ತಗಲಿತು; ನಿನ್ನ ದೋಷವು ನೀಗಿತು, ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು ಅಂದನು."**

**"ಆಗ, ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು ಕಳುಹಿಸು ಅಂದೆನು."**

**"'ಅದಕ್ಕೆ ಆತನು - ನೀನು ಈ ಜನರ ಬಳಿಗೆ ಹೋಗಿ - ನೀವು ಕಿವಿಯಾರೆ ಕೇಳಿದರೂ ತಿಳಿಯಬಾರದು, ಕಣ್ಣಾರೆ ಕಂಡರೂ ಗ್ರಹಿಸಬಾರದು ಎಂದು ತಿಳಿಸಿ, ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ಗ್ರಹಿಸಿ ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದದ ಹಾಗೆ ಈ ಜನರ ಹೃದಯಕ್ಕೆ ಕೊಬ್ಬೇರಿಸಿ ಕಿವಿಯನ್ನು ಮಂದಮಾಡಿ ಕಣ್ಣಿಗೆ ಅಂಟುಬಳಿ ಎಂದು ನನಗೆ ಹೇಳಿದನು."(ಯೆಶಾಯ 6:6-10).** ಕರ್ತನು ಯೆಶಾಯನಿಗೆ ಹೇಳಿದ್ದನ್ನು ನೆನಪಿಸಿಕೊಳ್ಳಿರಿ.

ಈಗ ನಾವು ಅಪೊಸ್ತಲನಾದ ಯೋಹಾನನ ಬರಹಗಳಿಗೆ ತಿರುಗಿಕೊಳ್ಳುತ್ತೇವೆ: **"ನಿಮಗೆ ಬೆಳಕು ಇರುವಾಗಲೇ ಬೆಳಕನ್ನು ನಂಬಿರಿ; ನಂಬಿದರೆ ನೀವು ಬೆಳಕಿನವರಾಗುವಿರಿ ಎಂದು ಹೇಳಿದನು. ಇದನ್ನು ಯೇಸು ಹೇಳಿದ ಮೇಲೆ ಅವರನ್ನು ಬಿಟ್ಟುಹೋಗಿ ಅಡಗಿಕೊಂಡನು. ಆತನು ಅವರ ಮುಂದೆ ಅಷ್ಟು ಸೂಚಕಕಾರ್ಯಗಳನ್ನು ಮಾಡಿದರೂ ಅವರು ಆತನನ್ನು ನಂಬಲಿಲ್ಲ. ಇದರಿಂದ ಪ್ರವಾದಿಯಾದ ಯೆಶಾಯನು ನುಡಿದ ಮಾತು ನೆರವೇರಿತು; ಅದೇನಂದರೆ -ಕರ್ತನೇ, ನಮ್ಮ ಉಪದೇಶವನ್ನು ಯಾರು ನಂಬಿದರು?ಕರ್ತನ ಬಾಹುವು ಯಾರಿಗೆ ಗೋಚರವಾಯಿತು? ಎಂಬದು. ಅವರು ನಂಬಲಾರದೆ ಹೋದದ್ದಕ್ಕೆ ಯೆಶಾಯನು ಮತ್ತೊಂದು ಮಾತಿನಲ್ಲಿ ಕಾರಣವನ್ನು ಸೂಚಿಸಿದ್ದಾನೆ; ಅದೇನಂದರೆ - ಅವರು ಕಣ್ಣಿನಿಂದ ಕಾಣದೆ ಹೃದಯದಿಂದ ಗ್ರಹಿಸದೆ ತಿರುಗಿಕೊಳ್ಳದೆ ತನ್ನಿಂದ ಸ್ವಸ್ಥತೆಯನ್ನು ಹೊಂದದೆ ಇರುವಂತೆ ಆತನು ಅವರ ಕಣ್ಣುಗಳನ್ನು ಕುರುಡುಮಾಡಿ ಅವರ ಹೃದಯವನ್ನು ಕಠಿನಮಾಡಿದನು ಎಂಬದೇ. ಯೆಶಾಯನು ಆತನ (ಯೇಸುವಿನ)ಮಹಿಮೆಯನ್ನು ನೋಡಿದ್ದರಿಂದ ಆತನ ವಿಷಯದಲ್ಲಿ ಮಾತಾಡುತ್ತಿರುವಾಗ ಆ ಮಾತನ್ನು ನುಡಿದನು."(ಯೋಹಾನ 12:36-41)**

" ಗಮನಿಸಿ ಯೋಹಾನ 12:40 ಹೇಳುವ ಸಂಗತಿ ಯೆಶಾಯ 6:10 ರಲ್ಲಿನ ಪ್ರವಾದಿಸಿದ ವಚನ, ಈಗ ನಮ್ಮ ಮುಖ್ಯ ಪ್ರಶ್ನೆ "ಯಾರ ಮಹಿಮೆಯನ್ನು ಯೆಶಾಯ ನೋಡಿದ?" ಅದಕ್ಕೆ ಉತ್ತರ: **"ಯೇಸು ಕ್ರಿಸ್ತನು".**

ಯೆಶಾಯನು ನೋಡಿದ ಯೇಸುವಿನ ಮಹಿಮೆಯು ಎರಡು ವಿಷಯಗಳನ್ನು ಸ್ಪಷ್ಟಪಡಿಸುತ್ತದೆ. ಮೊದಲನೆಯದೆಂದರೆ ಯೇಸು ಯಾಹವೇ (ಅಥವಾ ಯೆಹೋವನು).ಎರಡನೆಯದಾಗಿ ಯೆಶಾಯನು ನೋಡಿದ್ದೇನೆಂದರೆ ಯೇಸು ಪುನರುತ್ಥಾನ ನಂತರದ ಮಹಿಮೆ.

ಅತನು ಸಿಂಹಾಸನದ ಮೇಲೆ ಕುಳಿತಿರುವಂತೆ ಯೆಶಾಯನು ಯೇಸುವಿನ ಮಹಿಮೆಯನ್ನು ನೋಡಿದನು. ದಾವೀದನ ಪ್ರವಾದನೆಯನ್ನು ಪೇತ್ರನು ವಿವರಿಸಿ ಯೆಶಾಯನು ನೋಡಿದ ಸಿಂಹಾಸನಕ್ಕೆ ಮಹಿಮೆ ಉಲ್ಲೇಖಿಸುವ ಮತ್ತು ಸ್ಥಾಪಿಸುವದನ್ನು ಗಮನಿಸಿ. **"ಸಹೋದರರೇ, ಮೂಲ ಪಿತೃವಾದ ದಾವೀದನ ವಿಷಯದಲ್ಲಿ ನಾನು ಧೈರ್ಯದಿಂದ ನಿಮ್ಮ ಸಂಗಡ ಮಾತಾಡಬಹುದು ಏನಂದರೆ - ಅವನು ತೀರಿಹೋಗಿ ಹೂಣಲ್ಪಟ್ಟನು; ಅವನ ಸಮಾಧಿ ಈ ದಿನದವರೆಗೂ ನಮ್ಮಲ್ಲಿ ಅದೆ.ಅವನು ಪ್ರವಾದಿಯಾಗಿದ್ದು-ನಿನ್ನ ಸಂತತಿಯವರೊಳಗೆ ಒಬ್ಬನನ್ನು ನಾನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನೆಂದು ತನಗೆ ದೇವರು ಆಣೆಯಿಟ್ಟು ಹೇಳಿದ್ದನ್ನು ಬಲ್ಲವನಾಗಿ ಮುಂದಾಗುವದನ್ನು ಕಂಡು ಕ್ರಿಸ್ತನ ಪುನರುತ್ಥಾನವನ್ನೇ ಕುರಿತು-ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನುಭವಿಸುವದಿಲ್ಲವೆಂತಲೂ ಹೇಳಿದನು. ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೆಲ್ಲರು ಸಾಕ್ಷಿಗಳಾಗಿದ್ದೇವೆ.**
**ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ. ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ. ತಾನೇ ಹೇಳುವ ಮಾತೇನಂದರೆ - ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದೇ. ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು."(ಅ.ಕೃ.2:29-36).**

ಯೇಸುವು ಕರ್ತನು!ಯಹೋವನು!ಕ್ರಿಸ್ತನು! ರಾಜಾಧಿರಾಜ!ಎಂದು ಪುನರುತ್ಥಾನದ ಮೂಲಕ ಘೋಷಿಸಲ್ಪಟ್ಟಿದ್ದಾನೆ! ಯೆಶಾಯನು ನಿಖರವಾಗಿ ನೋಡಿದ -ರಾಜಾಧಿರಾಜ ಸಿಂಹಾಸನರೂಢನು ಸೇನಾಧಿಶ್ವರನಾದ ಯಹೋವನು!

ನಮ್ಮ ಮನಸ್ಸಿನಲ್ಲಿ ಚಿತ್ರಿಸಲಾದ ಘನತೆಯ ಸ್ಪಷ್ಟವಾದ ಚಿತ್ರದೊಂದಿಗೆ, ಕರ್ತನ ಮಹಿಮೆಯೂ ಅಂಗೀಕರಿಸಲ್ಪಟ್ಟಾಗ ಮೋಶೆಯು ಏನು ನೋಡಿದನೋ ಅಥವಾ ಕರ್ತನ ಮಹಿಮೆ ದೇವಸ್ಥಾನವನ್ನು ತುಂಬಿಸಿದಾಗ ಸೊಲೊಮನನು ನೋಡಿದನು.

ನಾವು ಸಹ ಕರ್ತನನ್ನು ಮಹಿಮೆಪಡಿಸಲೂ ಅರ್ಥಮಾಡಿಕೊಳ್ಳುತ್ತೇವೆ,ಯೇಸು ಹೇಳಿದ್ದು **“ ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ.”(ಯೋಹಾನ 15:8)** ಹಾಗಾದರೆ

ಮಹಿಮೆ, ಪುನರುತ್ಥಾನಗೊಂಡ ನಂತರದ ಸ್ಥಿತಿಯ ವಿವರಣೆ. **“ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ. ಆತನು ಎಲ್ಲವನ್ನೂ ತನಗೆ ಅಧೀನಮಾಡಿಕೊಳ್ಳಲಾಗುವ ಪರಾಕ್ರಮವನ್ನು ಸಾಧಿಸಿ ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು.”(ಫಿಲಿಪ್ಪಿ 3:20,21). “ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು. ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದುಬರುವದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಬಲಾವಸ್ಥೆಯಲ್ಲಿ ಎದ್ದು ಬರುವದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮೀಕ ದೇಹವಾಗಿ ಎದ್ದು ಬರುವದು. ಪ್ರಾಕೃತ ದೇಹವಿರುವದಾದರೆ ಆತ್ಮೀಕ ದೇಹವೂ ಇರುವದು.” (1 ಕೊರಿಂಥ 15:42-44)**

ಪುನರುತ್ಥಾನಗೊಳ್ಳುವ ಬಯಕೆ - ಮಹಿಮೆಯಾಗುವ ಬಯಕೆ – ಕ್ರೈಸ್ತರ ಸಂಚಾಲನೆಯ ಭರವಸೆ. **“ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ. ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರುನೋಡುತ್ತಿರುವದು. ಜಗತ್ತು ವ್ಯರ್ಥತ್ವಕ್ಕೆ ಒಳಗಾಯಿತು; ಹೀಗೆ ಒಳಗಾದದ್ದು ಸ್ವೇಚ್ಛೆಯಿಂದಲ್ಲ, ಅದನ್ನು ಒಳಪಡಿಸಿದವನ ಸಂಕಲ್ಪದಿಂದಲೇ. ಆದರೂ ಅದಕ್ಕೊಂದು ನಿರೀಕ್ಷೆಯುಂಟು; ಏನಂದರೆ ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವದೇ.”(ರೋಮಾಯ 8:18-21).**

ಈ ಮಹಿಮೆಯನ್ನು ರಕ್ಷಣೆಯೆಂದು ಅಥವಾ ವಿಮೋಚನೆಯೆಂದು ಕರೆಯಲಾಗುತ್ತದೆ. ಹಳೆಯ ಒಡಂಬಡಿಕೆಯಲ್ಲಿ ರಕ್ಷಣೆಯೂ ಭೌತಿಕ ಶತ್ರುವಿನಿಂದ ವಿಮೋಚನೆಯನ್ನು ಅರ್ಥೈಸುತ್ತದೆ. ಉದಾಹರಣೆಗೆ, ಮೋಶೆಯು ಫರೋಹನ ರಥಗಳಿಂದ ಇಸ್ರಾಯೇಲ್ಯರನ್ನು ರಕ್ಷಿಸಲು ಕೆಂಪು ಸಮುದ್ರವನ್ನು ತೆರೆಯಲು ತಯಾರಿಸಿದಾಗ, "ನಿಂತುಕೊಂಡು ಕರ್ತನ ರಕ್ಷಣೆ ನೋಡಿ" **(ವಿಮೋಚನಾಕಾಂಡ14:13).**ಎಂದನು. ಈ ಪರಿಕಲ್ಪನೆಯೊಂದಿಗೆ, ಮುಂಬರುವ ರಕ್ಷಕನು ,ಬಿಡಿಸುವಾತನು , ಅಥವಾ ಇಸ್ರೇಲಿನ ವಿಮೋಚಕನ ಪ್ರವಾದನೆಗಳನ್ನು ಅವರು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. ಯೇಸುವಿನ ಮರಣದ ಮೂಲಕ ಹೊಸ ಮತ್ತು ಜೀವಂತ ಮಾರ್ಗವನ್ನು ಉದ್ಘಾಟಿಸಿದಾಗ, ಒತ್ತು ನೀಡುವಲ್ಲಿ ಬದಲಾವಣೆಯು ಕಂಡುಬಂದಿದೆ. ಕ್ರೈಸ್ತರು “ರಕ್ಷಣೆ”**(ತೀತ 3:5)** “ಬಿಡುಗಡೆ” **(ಗಲಾತ್ಯ 3:13)** ಮತ್ತು “ವಿಮೋಚನೆ” **(ಕೊಲಸ್ಸೆ 1:13)** ಎಂದು ಮಾತನಾಡುತ್ತಾನೆ. ನಮ್ಮ ಆತ್ಮಗಳು "**ರಕ್ಷಿಸಲಾಗಿದೆ**,"**ಬಿಡುಗಡೆಯಾಗಿದೆ** , ಮತ್ತು “**ವಿಮೋಚಿಸಲ್ಪಟ್ಟಿದೆ** ". ಆದರೆ ನಾವು ಇವೆಲ್ಲದರ ವಿಷಯವಾಗಿ ಮಹಿಮೆಯಾಗುವದಕ್ಕಾಗಿ ಎದುರುನೋಡುವವರಾಗಿದ್ದೇವೆ.

ಯೇಸುವಿನ ಎರಡನೇ ಬರೋಣವಾಗಿ ,ಇಬ್ರಿಯ ಬರಹಗಾರನು ಹೇಳುವುದು: **“ಮತ್ತು ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣೆಯನ್ನುಂಟು ಮಾಡುವದಕ್ಕೋಸ್ಕರ ಪಾಪಸಂಬಂಧವಿಲ್ಲದವನಾಗಿ ಎರಡನೆಯ ಸಾರಿ ಕಾಣಿಸಿಕೊಳ್ಳುವನು.”(ಇಬ್ರಿಯ 9:28)** ಕ್ರೈಸ್ತರು ಈಗಾಗಲೇ ರಕ್ಷಣೆಗೊಂಡಿದ್ದರೆ, ಯೇಸು ರಕ್ಷಣೆಗಾಗಿ ಎರಡನೇ ಬಾರಿಗೆ ಏಕೆ ಬರುತ್ತಿದ್ದಾನೆ? ಅಥವಾ, ಪೌಲನು ಥೆಸಲೋನಿಕರಿಗೆ ಬರೆದಂತೆ: **“ನಾವಾದರೋ ಹಗಲಿನವರಾಗಿರಲಾಗಿ ವಿಶ್ವಾಸಪ್ರೀತಿಗಳೆಂಬ ವಜ್ರಕವಚವನ್ನೂ ರಕ್ಷಣೆಯ ನಿರೀಕ್ಷೆಯೆಂಬ ಶಿರಸ್ತ್ರಾಣವನ್ನೂ ಧರಿಸಿಕೊಂಡು ಸ್ವಸ್ಥಚಿತ್ತರಾಗಿರೋಣ. ಯಾಕಂದರೆ ದೇವರು ನಮ್ಮನ್ನು ತನ್ನ ಕೋಪಕ್ಕೆ ಗುರಿಯಾಗಬೇಕೆಂದು ನೇಮಿಸದೆ ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕವಾಗಿ ರಕ್ಷಣೆಯನ್ನು ಸಂಪಾದಿಸಿಕೊಳ್ಳಬೇಕೆಂದು ನೇಮಿಸಿದನು.”( 1 ಥೆಸಲೊನಿಕ 5 : 8,9 )**

ನಾವು ಹೊಂದಿರುವ ರಕ್ಷಣೆಯ ಭರವಸೆ - ನಾವು ಕಾಯುವ ರಕ್ಷಣೆಯೂ - ದೇಹದಿಂದ ಬಿಡುಗಡೆ ಪಡೆದುಕೊಳ್ಳುವುದು.
**"ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ ಪ್ರಸವ ವೇದನೆಪಡುತ್ತಾ ಇರುತ್ತದೆಂದು ನಾವು ಬಲ್ಲೆವು. ಇದು ಮಾತ್ರವಲ್ಲದೆ ಪ್ರಥಮ ಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೂ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ.**
**ನಾವು ರಕ್ಷಣೆಯನ್ನು ಹೊಂದಿದವರಾದರೂ ಇನ್ನು ಎದುರುನೋಡುವವರಾಗಿದ್ದೇವೆ. ಎದುರುನೋಡುವ ಪದವಿ ಪ್ರತ್ಯಕ್ಷವಾಗಿದ್ದರೆ ಎದುರುನೋಡುವದೇಕೆ? ಪ್ರತ್ಯಕ್ಷವಾದದ್ದನ್ನು ಎದುರುನೋಡುವದುಂಟೇ? ಆದರೆ ಕಾಣದಿರುವದನ್ನು ನಾವು ಎದುರುನೋಡುವವರಾಗಿದ್ದರೆ ತಾಳ್ಮೆಯಿಂದ ಕಾದುಕೊಂಡಿರುವೆವು."(ರೋಮಾಯ 8:22-25)**

ನಮ್ಮ ದೇಹ ವಿಮೋಚನೆಯ ವಾಗ್ದಾನದ ಸಂಚಕಾರ ನಮ್ಮೊಳಗೆ ವಾಸಿಸುವ ಪವಿತ್ರಾತ್ಮವಾಗಿದೆ. **"ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ.**
**ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವದೆಂಬದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟುಮಾಡುವದು."**(ಎಫೆಸ **1:13,14).** ನಮ್ಮ ದೇಹಗಳು ಪವಿತ್ರಾತ್ಮನ ದೇವಸ್ಥಾನ, ದೇವರ ಸ್ವಾಸ್ತ್ಯವಾಗಿದ್ದು, ಅವರು ಕ್ರಿಸ್ತನ ಬರೋಣದಲ್ಲಿ ಬಿಡುಗಡೆ ಪಡೆದುಕೊಳ್ಳುತ್ತಾರೆ. ನಮ್ಮ ವಿಮೋಚನೆಯು ನಮ್ಮ ಅಪೇಕ್ಷೆಯಾಗಿರುವುದರಿಂದ ಮತ್ತು ಈ ವಿಮೋಚನೆಯು ಪವಿತ್ರಾತ್ಮದಿಂದ ಖಾತರಿಪಡಿಸಲ್ಪಟ್ಟಿರುವುದರಿಂದ, ಮರ್ಮ - ಕ್ರಿಸ್ತನು ನಮ್ಮೊಳಗಿರುವುದೇ - ಮಹಿಮೆಯ ವಾಗ್ದಾನದ ನಿರೀಕ್ಷೆ ಎಂದು ಕರೆಯಲಾಗುತ್ತದೆ!**(ಕೊಲಸ್ಸೆ 1:27). "ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರೇ; ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ." (1ಪೇತ್ರ 4:14).**

ನಾವು ನೋಡಿದಂತೆ **"ನಾವು ಭಕ್ತಿಹೀನತೆಯನ್ನೂ ಲೋಕದ ಆಶೆಗಳನ್ನೂ ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ."**(ತೀತ **2:13),**ನಾವು ಈಗಾಗಲೇ ಪುನರುತ್ಥಾನಗೊಂಡಿದ್ದೇವೆಂದು,ನಮ್ಮ ಪೌರತ್ವವು ಪರಲೋಕದಲ್ಲಿದೆಯೆಂದು,ಈಗಾಗಲೇ ದೇವರ ಸಿಂಹಾಸನದಲ್ಲಿ ಕುಳಿತುಕೊಂಡಿದ್ದೇವೆಯೆಂದು,ಈಗಾಗಲೇ ಮಹಿಮೆಯ ಸ್ಥಿತಿಯಲ್ಲಿಯಲ್ಲಿದ್ದೇವೆಂದು. ನಾವು ಹಾಗೆ ಮಾಡಿದರೆ,ನಾವು ಜಾಗೃತವಾಗಿದ್ದು. **"ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗತಕ್ಕ ಕಾಲವೆಂದು ಅರಿತು ಇದನ್ನೆಲ್ಲಾ ಮಾಡಿರಿ. ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ವಿಮೋಚನೆಯು ಹತ್ತಿರವಾಯಿತು." (ರೋಮಾಯ 13:11).**

ಪುನರುತ್ಥಾನಗೊಂಡ ಸ್ಥಿತಿ ಮಹಿಮೆಯ ವಿವರಣೆಯಾಗಿದೆ.ಪವಿತ್ರಾತ್ಮನು ನಮ್ಮೊಳಗಿರುವುದೇ ನಮ್ಮ ಮಹಿಮೆಯ ನಿರೀಕ್ಷೆ, ದೇವರು ನಮ್ಮ ದೇಹಗಳನ್ನು ವಿಮೋಚಿಸುತ್ತಾನೆ ಎಂಬ ಭರವಸೆ ಇದೆ.

## The Mirror ಕನ್ನಡಿ

ನಮ್ಮ ಕೊನೆಯ "ಸೈಫರ್" ಪದ "ಕನ್ನಡಿ" ಆಗಿದೆ. ಕನ್ನಡಿಯೊಂದಿಗೆ ಜೋಡಿಸಲಾದ ವಾಕ್ಯಗಳನ್ನು ಪರಿಶೀಲಿಸುವಲ್ಲಿ ನಾವು ದೇವರ ಉದ್ದೇಶಕ್ಕಾಗಿ ಒಂದು ಅಚ್ಚುಕಟ್ಟಾದ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.

**"ಪ್ರೀತಿಯು ಎಂದಿಗೂ ಬಿದ್ದುಹೋಗುವದಿಲ್ಲ; ಪ್ರವಾದನೆಗಳಾದರೋ ಇಲ್ಲದಂತಾಗುವವು; ವಾಣಿಗಳೋ ನಿಂತುಹೋಗುವವು. ವಿದ್ಯೆಯೋ ಇಲ್ಲದಂತಾಗುವದು. ಅಪೂರ್ಣವಾಗಿ ತಿಳುಕೊಳ್ಳುತ್ತೇವೆ, ಅಪೂರ್ಣವಾಗಿ ಪ್ರವಾದಿಸುತ್ತೇವೆ. ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವದು. ನಾನು ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದೆನು, ಬಾಲಕನ ಸುಖ ದುಃಖಗಳನ್ನು ಅನುಭವಿಸಿದೆನು, ಬಾಲಕನ ಆಲೋಚನೆಗಳನ್ನು ಮಾಡಿಕೊಂಡೆನು. ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟುಬಿಟ್ಟೆನು. ಈಗ ಕಂಚಿನ ದರ್ಪಣದಲ್ಲಿ ಕಾಣಿಸುವಂತೆ [ದೇವರ ಮುಖವು] ನಮಗೆ ಮೊಬ್ಬಾಗಿ ಕಾಣಿಸುತ್ತದೆ; ಆಗ ಮುಖಾಮುಖಿಯಾಗಿ ಆತನನ್ನು ನೋಡುವೆವು. ಈಗ ಸ್ವಲ್ಪ ಮಾತ್ರ ನನಗೆ ತಿಳಿದದೆ; ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳುಕೊಂಡಂತೆ ನಾನು ಸಂಪೂರ್ಣವಾಗಿ ತಿಳುಕೊಳ್ಳುವೆನು. ಹೀಗಿರುವದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ." (1ಕೊರಿಂಥ 13:8-13).**

ನಮ್ಮ ಪೂರ್ವ ಅಧ್ಯಯನದಿಂದ ಸ್ಥಾಪಿಸಿದ್ದು (ಪವಿತ್ರಾತ್ಮ,ಅದರಲ್ಲಿ ಪವಿತ್ರಾತ್ಮ ವರಗಳ ಕಾಲಾವಧಿ) ಅಪೂರ್ಣವಾದದ್ದು ಇಲ್ಲದಂತಾಗುವದು ಆದು ಪವಿತ್ರಾತ್ಮ ವರಗಳು,ಯಾವುದೆಂದರೆ ಪ್ರವಾದನೆಯ ವರ,ವಾಣಿಗಳನ್ನಾಡುವ ವರ,ಜ್ಞಾನವಾಕ್ಯದ ವರ. ಪರಿಪೂರ್ಣವಾದದ್ದು ಬಂದು ಈ ಅಪೂರ್ಣವಾದದ್ದು ಇಲ್ಲದಂತಾಗುವುದು ಅದು ***"ಹೊಸ ಒಡಂಬಡಿಕೆ."*** ಈ ಪರಿಪೂರ್ಣ ಪ್ರಕಟಣೆಯ ವಾಕ್ಯದ ಅನುಪಸ್ಥಿತಿಯಲ್ಲಿ ಸಭೆಗೆ ತನ್ನ ಬಾಲ್ಯಾವಸ್ಥೆಯಲ್ಲಿ ಇಂತ ಪವಿತ್ರಾತ್ಮ ವರಗಳನ್ನು ಅದರ ಪರಿಪಾಲನೆಗೋಸ್ಕರ ಕೊಡಲ್ಪಟ್ಟಿತ್ತು.

ಪೌಲ ಮತ್ತು ಕೊರಿಂಥದವರು ಮಾತ್ರ ***ಕನ್ನಡಿಯಲ್ಲಿ*** ಮೊಬ್ಬಾಗಿ ನೋಡಬಹುದಾಗಿತ್ತು, ಆದರೆ ನಂತರ ಬರುವವರು ಮುಖಾಮುಖಿಯಾಗಿ ನೋಡುವರು. ಪೌಲನಿಗೆ ಭಾಗಶಃ ಮಾತ್ರ ತಿಳಿದಿತ್ತು, ಆದರೆ ನಂತರ ಬರುವವರಿಗೆ ಆವರ ಹಾಗೆ ಸಂಪೂರ್ಣವಾಗಿ ತಿಳಿದಿರುವಂತೆ ಇವರಿಗೂ ಕಾಣುವುದಕ್ಕಾಗುವುದು.

ಕನ್ನಡಿ ಪೂರ್ಣಗೊಂಡ ಹೊಸ ಒಡಂಬಡಿಕೆಯೆಂದು ಸ್ಪಷ್ಟವಾಗುತ್ತದೆ. ನಮ್ಮ ಪ್ರಶ್ನೆ, "ಕನ್ನಡಿಯಲ್ಲಿ ನಾವು ಏನು ನೋಡುತ್ತೇವೆ?" ಅದು ಏನೇ ಇರಲಿ, ಮುಖಾಮುಖಿಯಾಗುವಂತೆ ನಾವು ಅದನ್ನು ನೋಡಬಹುದು, ಮತ್ತು ನಾವು ನೋಡುವುದು ನಮ್ಮನ್ನು ಸಂಪೂರ್ಣವಾಗಿ ಬಹಿರಂಗಪಡಿಸುತ್ತದೆ.

**"ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು;ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೇನೆಂಬದನ್ನು ಆ ಕ್ಷಣವೇ ಮರೆತುಬಿಡುವನು. ಆದರೆ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷ್ಯಕೊಟ್ಟು ನೋಡಿ ಇನ್ನೂ ನೋಡುತ್ತಲೇ ಇರುವವನು ವಾಕ್ಯವನ್ನು ಕೇಳಿ ಮರೆತು ಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು." (ಯಾಕೋಬ 1:23-25).**

ಮತ್ತೆ ಕನ್ನಡಿಯನ್ನು ಬಳಸಲಾಗಿದೆ, ಈ ಸಮಯದಲ್ಲಿ **ಸರ್ವೋತ್ತಮ ಧರ್ಮಪ್ರಮಾಣದ** ಉಲ್ಲೇಖವಿದೆ. ಎರಡು ವಿಧದ ವೀಕ್ಷಕರು ಇದ್ದಾರೆ - ಯಾರು ನೋಡುತ್ತಾರೆ,ನಂತರ ಮರೆತುಬಿಡುತ್ತಾರೆ ,ಇನ್ನು ಕೆಲವರು ಕನ್ನಡಿಯೊಳಗೆ ನೋಡುತ್ತಾ ಇವರು ನಿರಂತರವಾಗಿ ನೋಡುತ್ತಿದ್ದಾರೆ ಮತ್ತು ಅವರು ನೋಡುವುದರಲ್ಲಿ ಕಾರ್ಯನಿರ್ವಹಿಸುತ್ತಾರೆ.

" ಹೊಸ ಒಡಂಬಡಿಕೆಯ ಪ್ರಕಾರ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣದಂತೆಯೇ ಪೂರ್ಣಗೊಂಡ ಹೊಸ ಒಡಂಬಡಿಕೆಯು ಹಳೆಯ ಒಡಂಬಡಿಕೆಗೆ ವಿರುದ್ಧವಾಗಿದೆ, ಅದು ಪರಿಪೂರ್ಣವಾದದ್ದನ್ನು ಏನೂ ಮಾಡಲಿಲ್ಲ. ನಮ್ಮ ಪ್ರಶ್ನೆ, "ಸರ್ವೋತ್ತಮ ಧರ್ಮಪ್ರಮಾಣದ ಕನ್ನಡಿಯಲ್ಲಿ ನಾವು ಏನು ನೋಡುತ್ತೇವೆ?"

**"ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ."** (2 ಕೊರಿಂಥ 3:18)..

ನಾವು- ಮುಸುಕು ತೆಗೆದ ಮುಖದವರಾದರೆ-ಹೊಸ ಒಡಂಬಡಿಕೆಯ (ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣದ) ಕನ್ನಡಿ ನೋಡಿದಾಗ- ಕರ್ತನ ಮಹಿಮೆ-ಪುನುರುತ್ಥಾನಗೊಂಡ ಕ್ರಿಸ್ತನು!

ಕನ್ನಡಿಯಲ್ಲಿ ನೋಡುತ್ತಲೇ ಇರುವವರ ಫಲವು,ಮತ್ತು ಏನು ನೋಡಿದ್ದಾರೋ ಅದರಲ್ಲಿ ನೆಲಗೂಂಡಿದ್ದರೆ,ಅದನ್ನ ಕೈಗೊಳ್ಳುವವನು ಆ ಮಹಿಮೆಯ ಕರ್ತನು ಪುನರುತ್ಥಾನಗೊಂಡ ಕ್ರಿಸ್ತನ ಹಾಗೆ ಆಗುವನು.ನಾವು ನೀರಿನಲ್ಲಿ ಆತನೊಳಗೆ ಸೇರಿದ ನಂತರ ಪ್ರಾರಂಭದಿಂದಲೂ ನಾವು ನಮ್ಮನ್ನು ಆಗಲೇ ಪುನರುತ್ಥಾನಗೊಂಡವರೆಂದು ದೃಷ್ಟಿಕೋನ ಇಟ್ಟುಕೊಳ್ಳಬೇಕು.ತನ್ನ ಮುಂದಿನ ಕನ್ನಡಿಯಲ್ಲಿ ನಿರ್ದಿಷ್ಟವಾಗಿ ನೋಡುವಾಗ ಒಬ್ಬ ಮಹಿಮೆಯ ಕರ್ತನು ಪುನರುತ್ಥಾನಗೊಂಡ ಕ್ರಿಸ್ತನ ನೋಡುತ್ತಿರುವವನು ಆತನಂತೆ ಆಗುತ್ತಾನೆ.

ನಮ್ಮ ಈಗಿನ ಮಹಿಮೆಯಿಂದ- ಕ್ರಿಸ್ತನ ಪುನುರುತ್ಥಾನದಲ್ಲಿ ಪಾಲುದಾರನಾಗಿ-ಮುಂದೆ ಕ್ರಿಸ್ತನ ಎರಡನೆಯ ಬರೋಣದಲ್ಲಿ ಮಹಿಮೆಯ ಸ್ಥಿತಿ,ರೂಪಾಂತರವಾಗುತ್ತದೆ.ಕಥೆಯ ತೂತ್ತೂರಿ ಊದಿದಾಗ,ಲಯಾವಸ್ಥೆಯೂ ಹೋಗಿ ನಿರ್ಲಯಾವಸ್ಥೆಯೂ ಉಂಟಾಗುತ್ತದೆ.ಆಗ ನಾವು ಕರ್ತನಂತೆ ಆಗುತ್ತೇವೆ.ದೀನಾವಸ್ಥೆಯಲ್ಲಿರುವ ನಮ್ಮ ದೇಹ ವಿಮೋಚನೆಯಾಗಿ ಆತನಂತೆ ಮಹಿಮಾ ಶರೀರ ಧರಿಸಿಕೂಳ್ಳುತ್ತೇವೆ.

ಮತ್ತು ಎಲ್ಲಾ ಈ ರೂಪಾಂತರದ ಹಿಂದೆ ಚಾಲನಾ ಶಕ್ತಿ ಯಾರು – ಕರ್ತನು,ಪವಿತ್ರಾತ್ಮ. ಅದಕ್ಕಾಗಿಯೇ ಆತನು ವಾಗ್ದಾನದಂತೆ - ಹೊಸ ಒಡಂಬಡಿಕೆಯ ಕೇಂದ್ರ ಸಂದೇಶ, ಮತ್ತು ಮರ್ಮವಾಗಿ , ಹಳೆಯ ಒಡಂಬಡಿಕೆಯ ಕೇಂದ್ರ ಸಂದೇಶದ  ಒಳಗೆ ಮಹಿಮೆಯ ವಾಗ್ದಾನದಂತೆ ಅತನು ಕ್ರಿಸ್ತನಂತೆ ನಮ್ಮ ಅಂತಿಮ ರೂಪಾಂತರದ ವಾಗ್ದಾನ.

## Summary And Conclusion  ಸಾರಾಂಶ ಮತ್ತು ಅಂತಿಮ ತೀರ್ಮಾನಗಳು

ಆರಂಭದಲ್ಲಿ ಮನುಷ್ಯನು ಪಾಪದಿಂದ ದೇವರೊಂದಿಗೆ ತನ್ನ ಸಂಬಂಧವನ್ನು ಕಳೆದುಕೊಂಡನು. ಆ ಸಂಬಂಧ ಮಹತ್ವದ ತಂದೆ ಜೊತೆ,ನಮ್ಮ ಸಂಬಂಧವನ್ನು ವಾಗ್ದಾನದ ಪವಿತ್ರಾತ್ಮನ ಮೂಲಕ ಪುನಃಸ್ಥಾಪನೆ ಮಾಡಿದೆ: **"ಯೇಸು ಅವನಿಗೆ - ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು."** (ಯೋಹಾನ 14:23).

ನಮ್ಮೊಳಗೆ ಕೆಲಸ ಮಾಡುತ್ತಾ-ನಮ್ಮಾತ್ಮದೂಂದಿಗಿರುತ್ತಾ-ಪವಿತ್ರಾತ್ಮನು,ಕ್ರಿಸ್ತನು ನಮ್ಮಲ್ಲಿದ್ದು, ಮಹಿಮಾ ನಿರೀಕ್ಷೆಯಾಗಿ,ನಾವು ಕ್ರಿಸ್ತನ ಹಾಗಾಗುವಂತೆ ಮಾಡುತ್ತಾನೆ. **"ಆದದರಿಂದ ನಾವು ಧೈರ್ಯಗೆಡುವದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಅಂತರ್ಯವು ದಿನೇದಿನೇ ಹೊಸದಾಗುತ್ತಾ ಬರುತ್ತದೆ."** **(2 ಕೊರಿಂಥ 4:16).** ನೊತನಪಡಿಸುವ ನಿರಂತರ ಪ್ರಕ್ರಿಯೆಯಿಂದ ನಮ್ಮ ರಕ್ಷಣೆಯ ಸಾಧ್ಯ-ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕ ನಮ್ಮ ಪೂರ್ವ ಪಾಪಗಳೆಲ್ಲಾ ಅಳಿಸಲ್ಪಟ್ಟವು,ನಮ್ಮ ಆತ್ಮವನ್ನು ನೊತನಪಡಿಸುವ ನಿರಂತರ ಪ್ರಕ್ರಿಯೆಯಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ. **"ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟುಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. ನಾವು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಕೃಪೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟು**

**ನಿತ್ಯಜೀವದ ನಿರೀಕ್ಷೆಯನ್ನು ಪಡೆದು ಅದಕ್ಕೆ ಬಾಧ್ಯರಾಗುವಂತೆ ದೇವರು ಆತನ ಮೂಲಕ ಪವಿತ್ರಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು. ಇದು ನಂಬತಕ್ಕ ಮಾತಾಗಿದೆ; (ತೀತ 3:5,6).**

ಹಾಗಾದರೆ ದೇವರ ಉದ್ದೇಶ ನಮ್ಮನ್ನು ಕ್ರಿಸ್ತನ ಪುನುರುತ್ಥಾನ ಸ್ವರೂಪಕ್ಕೆ ರೂಪಾಂತರಪಡಿಸುವುದೇ.ನಾವು ಅಂತಿಮ ನಿರ್ಧಾರ ಕೈಗೊಳ್ಳುವದಾದರೆ,ಈ ಕೆಳಗಿನ ಸ್ಪೈಫರ್ ಪದದ ಪರಿಶೋಧನೆ ಮಾಡಿದೆವು:

*ವಾಗ್ದಾನ*

*ಮರ್ಮ*

*ಮಹಿಮೆ*

*ಕನ್ನಡಿ*

ಈ ಪದಗಳನ್ನು ದೇವರ ವಾಕ್ಯದ ಭಾಗಗಳಲ್ಲಿ ನೋಡಿದ ನಂತರ ನಾವು ಅರ್ಥ ಮಾಡಿಕೊಂಡು ಬಂದು ಈ ಕೆಳಗಿನ ನಿರ್ಣಾಯಕ ತೀರ್ಮಾನ ಮಾಡಿದ್ದೇವೆ.

1. ಪಾಪಕ್ಷಮಾಪಣೆ ಹೊಸ ಒಡಂಬಡಿಕೆಯ ಕೇಂದ್ರ ಸಂದೇಶ ಅಲ್ಲ.ಅದು ವಾಗ್ದಾನ ಮಾಡಿದ್ದ ಪವಿತ್ರಾತ್ಮ ನಮ್ಮೊಳಗೆ ವಾಸಿಸುವದಕ್ಕೆ ಸಂಚಾಲನೆಯಾಗಿದೆ.

2. ಹಳೆಯ ಒಡಂಬಡಿಕೆಯ ಸಂದೇಶ ಕ್ರಿಸ್ತನಲ್ಲ- ಆದರೆ ಮರ್ಮವಾಗಿರುವ ಕ್ರಿಸ್ತನು ನಮ್ಮೊಳಗಿರುವದೇ.

3. ಮಹಿಮೆ ಪ್ರಮುಖವಾಗಿ ಯೇಸುವಿನ ಪುನುರುತ್ಥಾನ ಸ್ಥಿತಿಯ ನಿಜರೂಪ ವಿವರಣೆ.

4. ಪರಿಪೂರ್ಣವಾದ ಹೊಸ ಒಡಂಬಡಿಕೆಯೆಂಬ ದರ್ಪಣದಲ್ಲಿ ಮತ್ತು ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣದ ಸ್ವರೂಪ ಪುನುರುತ್ಥಾನವಾದ ಕ್ರಿಸ್ತನು.ಮತ್ತು ಈ ಪುನುರುತ್ಥಾನ ಹೊಂದಿರುವ ಕ್ರಿಸ್ತನ ಸ್ವರೂಪ ನೋಡುತ್ತಲೇ ಇರುವವನು ಆ ಸ್ವರೂಪಕ್ಕೆ ರೂಪಾಂತರಗೊಳ್ಳುತ್ತಾನೆ.

## IV. WHAT DOES THE SPIRIT DO FOR THE CHRISTIAN? ಪವಿತ್ರಾತ್ಮ ಕ್ರೈಸ್ತನಿಗೆ ಏನು ಮಾಡುತ್ತಾರೆ?

### He Enables Us To Be Like Christ ನಮ್ಮನ್ನು ಕ್ರಿಸ್ತನ ಹಾಗೆ ಮಾಡುತ್ತಾನೆ

ಯೇಸು,ಈ ಲೋಕದಲ್ಲಿ ದೇಹದಲ್ಲಿದ್ದಾಗ, ದೇಹ,ಪ್ರಾಣ,ಮತ್ತು ಆತ್ಮ, ನಮ್ಮಂತೆಯೇ ಇತ್ತು.ಆತನ ಶರೀರ ಶಿಲುಬೆಯಲ್ಲಿ ತೂಗಾಡುತಿತ್ತು,ಆತನ ಪ್ರಾಣವು ಪಾತಾಳಕ್ಕಿಳಿಯಿತು,ತನ್ನ ತಂದೆಗೆ ಆತನ ಆತ್ಮವನ್ನು ಒಪ್ಪಿಸಿದನು.ಯೇಸು ಒಪ್ಪಿಸಿದ ಆತ್ಮ ಯಾರು? ಪವಿತ್ರಾತ್ಮ,ಅಥವ ಕ್ರಿಸ್ತನ ಆತ್ಮ **(ಅ.ಕೃ.16:7).**

ಹಾಗಾದರೆ,ನಮ್ಮ ದೇಹದಲ್ಲಿ ವಾಸಿಸಲು ಮತ್ತು ಅತನ ದೇವಸ್ಥಾನವನ್ನು ಮಾಡಲು ಬಂದ ಪವಿತ್ರಾತ್ಮ ಮುಂಚೆಯೇ ದೇಹದಲ್ಲಿ ವಾಸಿಸುತ್ತಿದ್ದನೆಂದು ಗಮನಿಸಿ. ಮತ್ತು ಆ ದೇಹದಲ್ಲಿ, ಅವನು ಏನು ಮಾಡಿದನು ಎಂಬುದನ್ನು ಆತನು ಸಾಬೀತುಮಾಡಿದನು.**"ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ."(2 ತಿಮೊಥೆ 1:7).**ಅದೇ ತೇಜೋಮಯ ಪವಿತ್ರಾತ್ಮ- ಕ್ರಿಯಾತ್ಮಕನೂ ನಿರ್ಣಾಯಕನೂ-ಒಂದು ಸಾರಿ ಯೆರುಸಲೇಮಿಗೆ ಹೋಗುವ ಮುಖ ಮಾಡಿದ ಬಳಿಕ,ದೇವಾಲಯದ ವ್ಯಾಪಾರ ಮಾಡುವವರು,ಕುರಿ,ದನಗಳು,ಪಾರಿವಾಳಗಳನ್ನೂ, ಹೊರಗಟ್ಟಿದನು-ಈಗ ಈತನು ನಮ್ಮೊಳಗೆ ವಾಸಿಸುವವನಾಗಿದ್ದಾನೆ.ಇದೇ ಪ್ರೀತಿಸ್ವರೂಪಿ ಪವಿತ್ರಾತ್ಮನು- ಹೇಳಿದ್ದು,**"ತಂದೆಯೇ,ಅವರಿಗೆ ಕ್ಷಮಿಸು,ತಾವು ಏನು**

**ಮಾಡುತ್ತೇವೆಂಬುದನ್ನು ಅರಿಯರು"**-ಈತನು ಈಗ ನಮ್ಮೊಳಗೆ ವಾಸಿಸುತ್ತಾನೆ.ಇದೇ ಸತ್ಯದ ಆತ್ಮನು -ಒಂದು ಕ್ಷಣ ತನ್ನ ಶರೀರದಲ್ಲಿ ಶರೀರಾಧೀನ ಸ್ವಭಾವಕ್ಕೆ ಅವಕಾಶ ನೀಡಲಿಲ್ಲ- ಈಗ ನಮ್ಮೊಳಗೆ ವಾಸಿಸುತ್ತಾನೆ. ಈಗ ನಮ್ಮ ದೇಹದಲ್ಲಿ ಕಡಿಮೇ ಸಾಮರ್ಥ್ಯ ಹೊಂದಿರುವ ಆತ್ಮನೂ? ಅಥವ ಸಮಸ್ಯೆಯೂ ನಮ್ಮಲ್ಲಿದೆಯೂ?

**"ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ."(ರೋಮಾಯ 8:15).**

**He Helps Us Crucify The Flesh ಆತನು ಶರೀರಾಧೀನ ಸ್ವಭಾವ ನಾಶಮಾಡಲೂ ನಮಗೆ ಸಹಾಯ ಮಾಡುತ್ತಾನೆ**

**"ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ." (ಗಲಾತ್ಯ 5:17).** ಇದು ಸ್ಪಷ್ಟ ನಮ್ಮೊಳಗೆ ನಮಗೆ ವಿರುದ್ದವಾಗಿ ಯುದ್ಧ ನಡೆಯುತ್ತಿದೆ.ನಮ್ಮನ್ನು ವಿರೋಧಿಸುವ ಶರೀರಾಧೀನ ಸ್ವಭಾವದ ಶಕ್ತಿ ಆತ್ಮ ವಿರುದ್ಧ ಹೋರಾಡುವ ಸೈನ್ಯ.ಶರೀರಾಧೀನಸ್ವಭಾವ ಗೆದ್ದರೆ,ಸಾಯುವುದು ಖಚಿತ;ಆತ್ಮನು ಗೆದ್ದರೆ,ನಾವು ನಿತ್ಯಜೀವ ಅನುಭವಿಸುತ್ತೇವೆ **(ರೋಮಾಯ 8:5-8).**

ಇಂತ ಯುದ್ಧದಲ್ಲಿ ಪ್ರಮುಖವಾಗಿ ನಮ್ಮನ್ನು ಪರೀಕ್ಷಿಸಿ ಯುದ್ಧ ಹೇಗೆ ನಡೆಯುತ್ತಿದೆ ಎಂಬುದನ್ನು ನಾವು ನೋಡಿಕೊಳ್ಳಬೇಕು..

ಪೌಲನು ಆ ಶರೀರಾಧೀನ ಸ್ವಭಾವದ ಪಟ್ಟಿಮಾಡಿದ್ದಾನೆ: **"ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಯಾವವಂದರೆ - ಜಾರತ್ವ ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೇಕಿಚ್ಚು ಸಿಟ್ಟು ಕಕ್ಷಭೇದ ಭಿನ್ನಮತ ಮತ್ಸರ ಕುಡಿಕತನ ದುಂದೌತಣ ಇಂಥವುಗಳೇ.** (ಗಲಾತ್ಯ **5:19-21). ಇವುಗಳ ವಿಷಯದಲ್ಲಿ - ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ."** ಪವಿತ್ರಾತ್ಮನು *ಇಂಥ ಕಾರ್ಯಗಳನ್ನು ನಡಿಸುವವರು* ಬಳಸುವ ಪದ ಗಮನಿಸುವುದು ಮುಖ್ಯವಾಗಿದೆ. ನಾವು ಕೆಲವು ಸಂದರ್ಭಗಳಲ್ಲಿ ಶಾರೀರಿಕ ಕೆಲಸಗಳಲ್ಲಿ ಮುಗ್ಗರಿಸಬಹುದು ಮತ್ತು ಪ್ರದರ್ಶಿಸಬಹುದು, ಆದರೆ ಅಂತಹ ಕೃತ್ಯಗಳು ನಮ್ಮ ಅಭ್ಯಾಸವಾದಾಗ,ಶಾರೀರಿಕ ಅಭಿಲಾಷೆಯು ಯುದ್ಧವನ್ನು ಗೆಲ್ಲುತ್ತದೆ ಎಂಬುದು ಒಂದು ನಿರ್ದಿಷ್ಟ ಎಚ್ಚರಿಕೆ; ಮತ್ತು ಪ್ರಾಮಾಣಿಕ ಹೃದಯದಿಂದ ಮಾತ್ರ ಪಶ್ಚಾತ್ತಾಪದ ಬಲವಾದ ಕ್ರಮಗಳು ನಮ್ಮನ್ನು ಆತ್ಮನ ಕಡೆಗೆ ತಿರುಗುವ ಅಲೆಯಾಗುತ್ತದೆ.

ಇದಕ್ಕೆ ವಿರುದ್ದವಾಗಿ ಪೌಲನು "ಪವಿತ್ರಾತ್ಮ ಫಲ" ಪಟ್ಟಿಮಾಡುತ್ತಾನೆ **(ಗಲಾತ್ಯ 5:22,23).** ಈ ಫಲಗಳು **"ಪ್ರೀತಿ,ಸಂತೋಷ,ಸಮಾಧಾನ,ದೀರ್ಘಶಾಂತಿ,ದಯೆ,ಉಪಕಾರ,ನಂಬಿಕೆ,ಸಾಧುತ್ವ,ಶಮೆ-ದಮೆ."**

ಅಂತಹ ಎಲ್ಲಾ ಫಲಗಳ ಸಾಮಾನ್ಯ ಗುಣಮಟ್ಟವನ್ನು ಗಮನಿಸುವುದು ಮುಖ್ಯ. ಪ್ರೀತಿ, ಉದಾಹರಣೆಗೆ,ಕರ್ತನಾದ ಯೇಸು ಕ್ರಿಸ್ತನು ಆಜ್ಞಾಪಿಸಿದ್ದೇನೆಂದರೆ.**"ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂತಲೇ ಇವುಗಳನ್ನು ನಿಮಗೆ ಆಜ್ಞಾಪಿಸುತ್ತೇನೆ." (ಯೋಹಾನ 15:17).** ಮಾನಸಿಕ ಪ್ರಯತ್ನದಿಂದ ನಾವು ಸಾಧಿಸುವ ಗುಣಮಟ್ಟ ಕ್ರಿಸ್ತನ ಪ್ರೀತಿ ಮತ್ತು ಮಾನಸಿಕ ಪ್ರಯತ್ನವನ್ನು ಮಾಡಲು ಯೇಸು ನಮಗೆ ಆಜ್ಞಾಪಿಸಿದ್ದಾನೆ. ಅದೇ ಸಂತೋಷದ ಸಂಗತಿಯಾಗಿದೆ.ಸಂತೋಷದ ಫಲ ಇದೆ **(ಯಾಕೋಬ 1:2)** ಮತ್ತು ಇತರ ಫಲಗಳು ಹಾಗೆ ಇದೆ.ಇಂತ ಗುಣಗಳು ರೂಪಾಂತರ ಹೊಂದಿರುವ ಮನಸ್ಸಿನಿಂದ ಬರುತ್ತದೆ.ಯಾರು ಪವಿತ್ರಾತ್ಮ ಅನುಸರಿಸಿ ನಡೆಯುತ್ತಾರೂ.

ಆತನು ಬಳಸುವ ಪದದ ಚಿತ್ರ – ಪವಿತ್ರಾತ್ಮ ಫಲವನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ವಸಂತಕಾಲದಲ್ಲಿ ಒಂದು ಸೇಬು ಮರ ಹೂವುಗಳು ಬಿಟ್ಟು;ಅದು ಚಳಿಗಾಲದ ತನಕ ಹಣ್ಣನ್ನ ಹೊಂದುವುದಿಲ್ಲ. ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಿದ ನಂತರ, ವಿಕಸನಗೊಳ್ಳುವ ಹೊಸ ಜೀವಿ ಪವಿತ್ರಾತ್ಮ ಫಲವನ್ನು ಹೊಂದುವದಕ್ಕೆ ಸ್ವಲ್ಪ ಸಮಯ ಮುಗಿಯುತ್ತದೆ. ನಾವು ಇದನ್ನು ಅರ್ಥಮಾಡಿಕೊಳ್ಳಬೇಕು ಆದ್ದರಿಂದ ನಾವು ನಮ್ಮೊಂದಿಗೆ ತಾಳ್ಮೆಗೆಡುಯುವುದಿಲ್ಲ. ನಾವು ಬೆಳೆದುಬಂದಾಗ ದೇವರ ತಾಳ್ಮೆಯು ನಮ್ಮ ದೋಷಗಳನ್ನು ನಮ್ಮನ್ನು ಖಂಡಿಸಿ ತಪ್ಪುಗಳನ್ನಾಗಿಸುವ ಅವಕಾಶಗಳೊಂದಿಗೆ ಹೊಸ ಒಡಂಬಡಿಕೆಯ **"ಪರಿಪೂರ್ಣ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣದ ನಿಯಮ." ( ಯೋಹಾನ 1:25).**

**"ಕ್ರಿಸ್ತ ಯೇಸುವಿನವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು." (ಗಲಾತ್ಯ 5:24).** ಅಂತಹ ಫಲವನ್ನು ಹೊತ್ತುಕೊಳ್ಳಲು ನಮಗೆ ಸಹಾಯ ಮಾಡುವ ಮೂಲಕ,ದೇಹವನ್ನು ಅದರ ಭಾವೋದ್ರೇಕಗಳೊಂದಿಗೆ ಶಿಲುಬೆಗೆ ಹಾಕಲು ಪವಿತ್ರಾತ್ಮ ನಮಗೆ ಸಹಾಯ ಮಾಡುತ್ತಾನೆ .ಆತನ ಸಹಾಯವಿಲ್ಲದೆ, ನಾವು ಆ ಮಹಾ ಕೆಲಸವನ್ನು ಸಾಧಿಸಲು ಸಾಧ್ಯವಿಲ್ಲ.

## The Spirit Leads Us ಪವಿತ್ರಾತ್ಮ ನಮ್ಮನ್ನು ಮುನ್ನಡಿಸುತ್ತಾನೆ

**"ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು." (ರೋಮಾಯ 8:14).**

1. ಪವಿತ್ರಾತ್ಮ ನಮ್ಮನ್ನು ಮುನ್ನಡಿಸುವುದು ಪ್ರಮುಖವಾಗಿ ಸತ್ಯವೇದದ ಮೂಲಕವೇ. **"ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ." (ಯೋಹಾನ 6:63)** ಮತ್ತೊಂದು ಕಡೆಯಲ್ಲಿ ಯೇಸು ಯಹೊದ್ಯರೂಟ್ಟಿಗೆ ವಾದಿಸುವಾಗ **"ಹಾಗಾದರೆ ಶಾಸ್ತ್ರವು ಸುಳ್ಳಾಗಲಾರದಷ್ಟೆ." (ಯೋಹಾನ 10:34).** ಸತ್ಯವೇದ ಹೇಳುವ ವಿಷಯಕ್ಕೆ ವಿರುದ್ಧವಾಗಿ ಏನನ್ನೂ ದೇವರು ಮಾಡುವುದಿಲ್ಲ. ಆದ್ದರಿಂದ, ಪೌಲನು ಬರೆಯುತ್ತಾನೆ: **"ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ.ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು."(2 ತಿಮೊಥೆ 3:16,17).**

2. ಪವಿತ್ರಾತ್ಮ ಎರಡನೇ ರೀತಿಯಲ್ಲಿ ನಮಗೆ ಮುನ್ನಡಿಸುತ್ತಾನೆ ಇದು ನಮ್ಮ ಆತ್ಮಸಾಕ್ಷಿ ಮೂಲಕ. ಪೌಲನು ತಿಮೋತಿಗೆ "ಒಳ್ಳೆಯ ಆತ್ಮಸಾಕ್ಷಿ" ಇರಲಿ.**(1ತಿಮೊಥೆ 1:19).** ಉದಾಹರಣೆಗೆ, ಒಬ್ಬ ದುರ್ಬಲ ಸಹೋದರನ "ಮನಸ್ಸಾಕ್ಷಿಯನ್ನು ಗಾಯಗೊಳಿಸುವುದರ" ಬಗ್ಗೆ ಕ್ರೈಸ್ತರಿಗೆ ಎಚ್ಚರಿಕೆ ನೀಡಲಾಗುತ್ತದೆ.**(1ಕೊರಿಂಥ 8:12).**ದೇವರ ವಾಕ್ಯದಲ್ಲಿ ಮತ್ತೂ ಎಚ್ಚರಿಕೆಯ ಮಾತು "ಸ್ವಂತ ಮನಸ್ಸಿನಲ್ಲಿ ಅಪರಾಧಿಗಳೆಂದು ಬರೆಯುಳ್ಳವರಾದರೂ."**(1ತಿಮೊಥೆ 4:2).** ಆತ್ಮಸಾಕ್ಷಿಯೆಂದರೆ ದೇವರು ನೀಡಿದ ಮಾರ್ಗದರ್ಶಿಯಾಗಿದೆ ಮತ್ತು ಒಬ್ಬ ಕ್ರೈಸ್ತನು ತನ್ನನ್ನು ಅನುಸರಿಸಬೇಕು ಮತ್ತೊಬ್ಬ ದುರ್ಬಲಗೊಳ್ಳಬಾರದು.

ಆದರೆ ಆತ್ಮಸಾಕ್ಷಿಯು ಸಂಪೂರ್ಣವಾಗಿ ವಿಶ್ವಾಸಾರ್ಹ ಮಾರ್ಗದರ್ಶಿಯಾಗಿಲ್ಲ. ದೇವರ ವಾಕ್ಯ ಸ್ಪಷ್ಟವಾಗಿರುತ್ತದೆ, ನಿಖರವಾಗಿದೆ, ಮತ್ತು ಸರಿ ಮತ್ತು ತಪ್ಪುಗಳ ನಡುವೆ ನಿಖರವಾಗಿ ನಿರೂಪಿಸುತ್ತದೆ. ಆತ್ಮಸಾಕ್ಷಿಯ ನಂಬಲರ್ಹವಲ್ಲ, ಪೌಲನು ಸ್ಪಷ್ಟಪಡಿಸುವಂತೆ **"ನನ್ನಲ್ಲಿ ದೋಷವಿದೆಯೆಂದು ನನ್ನ ಬುದ್ಧಿಗೆ ತೋರುವದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವದಿಲ್ಲ; ನನ್ನನ್ನು ವಿಚಾರಣೆಮಾಡುವವನು ಕರ್ತನೇ." (1 ಕೊರಿಂಥ 4:4).**

3. ಪವಿತ್ರಾತ್ಮ ಘಟನೆಗಳ ಮೂಲಕ ಮುನ್ನಡಿಸುತ್ತಾನೆ ಆದರ ಮೇಲೇ ನಮ್ಮ ನಿಯಂತ್ರಣ ಸಾಧ್ಯವಿಲ್ಲ. **"ಮೂಸ್ಯಕ್ಕೆ ಎದುರಾಗಿ ಬಂದಾಗ ಬಿಥೂನ್ಯಕ್ಕೆ ಹೋಗುವ ಪ್ರಯತ್ನಮಾಡಿದರು.ಅಲ್ಲಿಯೂ ಯೇಸುವಿನ ಆತ್ಮನು ಅವರನ್ನು ಹೋಗಗೊಡಿಸಲಿಲ್ಲ.ಆಗ ಅವರು ಮೂಸ್ಯವನ್ನು ಸುಮ್ಮನೆ ದಾಟಿ ತ್ರೋವಕ್ಕೆ ಬಂದರು."(ಅ.ಕೃ.16:7,8). "ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ." (1ಕೂರಿಂಥ 12:18).**

ಕ್ರೈಸ್ತರು (2) &(3) ರಲ್ಲಿ ಹೇಳಿದಂತೆ ಹೆಚ್ಚು ಆತುಕೊಳ್ಳಬಾರದೆಂದು ಎಚ್ಚರಿಸಬೇಕು. ಸತ್ಯವೇದ ದೇವರು ನಮ್ಮ ಜೊತೆ ಮಾತನಾಡುವ ವಿಧಾನವಾಗಿದೆ.ದೇವರು ತನ್ನ ವಾಕ್ಯವನ್ನು ನಾವು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕೆಂದು ಅಪೇಕ್ಷಿಸುತ್ತಾನೆ.ಈ ರೀತಿಯಾಗಿ ಪೌಲನನ್ನು ಇಲ್ಲವೆ ವಿಶೇಷವಾಗಿ ಕರ್ತನಾದ ಯೇಸು ಕ್ರಿಸ್ತನ ಆನುಸರಿಸಬೇಕು.ಯೇಸು ತನ್ನ ಸ್ವಂತ ಉಪಕ್ರಮದ ಮೇಲೆ ನಿಧನರಾದರು.**(ಯೋಹಾನ 10:18)**.ಅದೇ ರೀತಿಯ ವಿಧೇಯತೆಯನ್ನು ನಮ್ಮಿಂದಲೂ ಅಪೇಕ್ಷಿಸುತ್ತಾರೆ.

### The Spirit Intercedes For Us ಪವಿತ್ರಾತ್ಮ ನಮಗೋಸ್ಕರ ಬೇಡುವವನಾಗಿದ್ದಾನೆ

**"ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು."(ರೋಮಾಯ 8:26,27).**

### Summary ಸಾರಾಂಶ

ಯೇಸುವಿನಲ್ಲಿ ವಾಸಿಸಿದ ದೇವರಾತ್ಮನನ್ನೇ ನಾವು ನಮ್ಮ ದೇಹದಲ್ಲಿ ಪಡೆದವು- ಆತನು ಬಲ,ಪ್ರೀತಿ,ಮತ್ತು ಶಿಕ್ಷಣದ ಆತ್ಮನೇ.ಆತನು ನಮ್ಮ ಶರೀರಾಧೀನಸ್ವಭಾವವನ್ನು ನಾಶಮಾಡಲು ಸಹಾಯ ಮಾಡುವ ಮೂಲಕ ನಾವು ದೇವರ ಮಕ್ಕಳಾಗುವ ಸ್ವಾರೂಪಕ್ಕೆ ನಮ್ಮನ್ನು ಮುನ್ನಡಿಸುತ್ತಾನೆ,ಮತ್ತು ನಮಗೋಸ್ಕರ ಬೇಡುವವನಾಗಿದ್ದಾನೆ.

## V. EXHORTATIONS FROM THE SPIRIT ಪವಿತ್ರಾತ್ಮನಿಂದ ಎಚ್ಚರಿಕೆಗಳು

### Be Filled With The Spirit ಪವಿತ್ರಾತ್ಮ ಭರಿತರಾಗಿರಿ

ನಮಗೆ ಆಜ್ಞಾಪಿಸಿರುವುದು: **"ಮದ್ಯಪಾನ ಮಾಡಿ ಮತ್ತರಾಗಬೇಡಿರಿ; ಅದರಿಂದ ಪಟಿಂಗತನವು ಹುಟ್ಟುತ್ತದೆ." (ಎಫೆಸ 5:18).** ಪವಿತ್ರಾತ್ಮಭರಿತರಾಗಿರುವುದು ಹೇಗೆ? ಪೌಲನು ಕೂಡುವ ಮೂರು ಕಾರ್ಯಗಳಿಂದ ಪವಿತ್ರಾತ್ಮ ಭರಿತರಾಗಿರಬಹುದು.

1. **"ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನಮಾಡುತ್ತಾ ಕೀರ್ತನೆ ಹಾಡುತ್ತಾ"**

**(ಎಫೆಸ 5:19).**

ಹಾಡುವದು ಪವಿತ್ರಾತ್ಮ ಭರಿತರಾಗಿರುವುದರ ಒಂದು ಮಾರ್ಗ! ಗೆತ್ಸೆಮನೆ ತೋಟಕ್ಕೆ ಹೋಗುವ ಮುನ್ನ ಯೇಸು ಮತ್ತು ಅಪೊಸ್ತಲರು ಕೀರ್ತನೆ ಹಾಡಿದರು.**(ಮತ್ತಾಯ 26:30).** ಪೌಲ ಮತ್ತು ಸೀಲನು ಮೆಕೆದ್ಯೋನದ ಪಟ್ಟಣದ ಸೆರೆಮನೆ ಕೊಡಿಹಾಕಲ್ಪಟ್ಟಿರಲು **"ಮಧ್ಯರಾತ್ರಿಯಲ್ಲಿ ಪೌಲ ಮತ್ತು ಸೀಲನು ಪ್ರಾರ್ಥನೆಮಾಡುವವರಾಗಿ ದೇವರಿಗೆ ಸ್ತುತಿಪದಗಳನ್ನು ಹಾಡುತ್ತಿದ್ದರು."** (ಅ.ಕೃ.16:25).

ಪೌಲ ಮತ್ತು ಸೀಲರು ಮನಸ್ಸಿನಲ್ಲಿ ಆಶಾವಾದಿಗಳಾಗಿದ್ದರು. ಇತರರ ಸ್ಥಿತಿಯೂ ಚಿಂತಾಜನಕವಾಗಿದ್ದರೂ ಅವರಿಬ್ಬರೂ ದೇವರಿಗೆ ಸ್ತುತಿಪದಗಳನ್ನು ಹಾಡುತಿದ್ದರು.

2. ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ. **(ಎಫೆಸ 5:20).**

ಪವಿತ್ರಾತ್ಮ ಭರಿತರಾಗಿರುವುದರ ಎರಡನೆಯ ಪ್ರಮುಖ ವಿಧಾನ ನಾವು *ಯಾವಾಗಲೂ* ಎಲ್ಲಾ ವಿಷಯಗಳಲ್ಲಿ ಕೃತಜ್ಞತೆ ಸಲ್ಲಿಸಬೇಕು.ನಮಗುಂಟಾಗುವ ಕಷ್ಟದ ಅನುಭವಗಳಲ್ಲಿ ನಾವು ಯಾವಾಗಲೂ ಪವಿತ್ರಾತ್ಮ ಭರಿತರಾಗಿ ಕೃತಜ್ಞತೆ ಸಲ್ಲಿಸಬೇಕು. ಅಥವ "ಕರ್ತನೆ ನನಗೇಕೆ ಈ ಕಷ್ಟ?" ಎನ್ನಬಾರದು.

ಯೋಸೇಫನನ್ನು ಜ್ಞಾಪಕಮಾಡಿಕೊಳ್ಳಿರಿ- ಆತನ ಅಣ್ಣಂದಿರು ದಾಸತ್ವಕ್ಕೆ ಐಗುಪ್ತ ದೇಶದವರಿಗೆ ಮಾರಿಬಿಟ್ಟರು.ಆತನು ನಿಷ್ಠಾವಂತ ಸೇವೆ ಮಾಡುವ ಯಜಮಾನನ ಹೆಂಡತಿಯ ತಪ್ಪು ಆಲೋಚನೆಯ ನಿಮಿತ್ತ ಆತನಿಗೆ ಸೆರೆವಾಸದ ಗತಿ ಬಂತು.ಆದರೆ ಆತನು ಒಳ್ಳೆ ಕೆಲಸ ಮಾಡಿದ.

ಆತನು ಸೆರೆಮನೆಯ ಹಾಕಲ್ಪಟ್ಟ ಮೇಲೇ ಆವನ ಆತ್ಮವಿಶ್ವಾಸ ಮತ್ತು ಸದ್ಗುಣಗಳಿಂದ ಎಲ್ಲಾ ಕೈದಿಗಳ ಮೇಲ್ವಿಚಾರಕನಾಗಿ ನೇಮಿಸಲ್ಪಟ್ಟನು. ಕನಸಿನ ಅರ್ಥ ಹೇಳಿದ ನಂತರ ಪಾರುಪತ್ಯಗಾರನಿಗೆ ಅವನನ್ನು ನೆನಸಿಕೂ ಅಂದರೂ ಯೋಸೇಫನನ್ನು ಮರೆತುಬಿಟ್ಟನು!

ಹಾಗಾದರೆ ಯೋಸೆಫನು ಸೆರೆಮನೆಯ ಸ್ಥಿತಿಯಲ್ಲಿ "ಕರ್ತನೇ ನನಗೇಕೆ ಎಂದನೂ"? ಇಲ್ಲ, ಆತನು ದೇವರನ್ನು ನಂಬಿದ್ದನು.ಮತ್ತು ದೇವರು ಆತನನ್ನು ಆಶೀರ್ವದಿಸಿ ಐಗುಪ್ತ ದೇಶದ ಸರ್ವಾಧಿಕಾರ ಕೊಟ್ಟನು.

ನಾವು ಜ್ಞಾಪಕದಲ್ಲಿಟ್ಟುಕೊಳ್ಳುವ ಅಗತ್ಯ ಇದೆ. **" ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ." (ರೋಮಾಯ 8:28).**

3. **"ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ."(ಎಫೆಸ 5:21).**

ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ ಎನ್ನುವದಕ್ಕೂ ಪವಿತ್ರಾತ್ಮ ಭರಿತರಾಗಿರುವುದರ ಸಂಬಂದವೇನು ?
ಯೇಸು ಹಿಡಿದುಕೂಡಲ್ಪಟ್ಟ ರಾತ್ರಿ,ಅವರು ಕರ್ತನ ಭೋಜನ ತಿನ್ನುವಾಗ, **"ಇದಲ್ಲದೆ ತಮ್ಮಲ್ಲಿ ಯಾವನು ಹೆಚ್ಚಿನವನೆನಿಸಿಕೊಳ್ಳುವನು ಎಂಬ ವಿಷಯದಲ್ಲಿ ಅವರೊಳಗೆ ಚರ್ಚೆ ಹುಟ್ಟಿತು."** ಈ ವಿವಾದ ಚರ್ಚಿಸುವ ಸಮಯದಲ್ಲೇ ಯೇಸು ತಾನೆ ನಡುಪಾವುಡವನ್ನು ಕಟ್ಟಿಕೊಂಡು ಶಿಷ್ಯರ ಕಾಲುಗಳನ್ನು ತೊಳೆದು ಮತ್ತು ಒರೆಸಿದ ಮೇಲೆ,ವಿವರಿಸಿ **"ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು**

**ತೋರಿಸಿದ್ದೇನೆ."** **(ಯೋಹಾನ 13:15).**

ಯೇಸು ಸೇವೆಮಾಡುವುದಕ್ಕೆ ಬಂದನೇ ಹೊರತು ಸೇವೆಮಾಡಿಸಿಕೊಳ್ಳಲೂ ಬರಲಿಲ್ಲ**(ಮತ್ತಾಯ 20:28).** ಈ ರೀತಿಯ ಸೇವೆಯಿಂದ ಆತನಿಗೆ ಸಂತೋಷವಿತ್ತು: **"ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ."(ಯೋಹಾನ 15:11).**

ಸ್ವಯಂಪ್ರೇರಣೆಯಿಂದ ಸೇವೆ ಸಲ್ಲಿಸುವಲ್ಲಿ ಬಹಳ ಸಂತೋಷವಿದೆ. ನಾವು ಸೇವೆ ಮಾಡಬೇಕು - ನಾವು ಒಬ್ಬರಿಗೊಬ್ಬರು ಒಳಗಾಗಬೇಕು ಮತ್ತು ಪರಸ್ಪರ ಸೇವಕರಾಗಬೇಕು - ಆತ್ಮದ ಮೂಲಕ ತುಂಬಬೇಕು ಮತ್ತು ನಮ್ಮ ಸೇವೆಯು ರಕ್ಷಕನಂತೆ ಇರಬೇಕು.

## Do Not Grieve The Spirit ಪವಿತ್ರಾತ್ಮನನ್ನು ದುಖಃಪಡಿಸಬೇಡಿರಿ

ಪವಿತ್ರಾತ್ಮ ನಮಗೆ ಸಹಾಯಕನು,ಆದರೆ ದುಖಃಪಡಬಹುದು.ಆದುದರಿಂದ ಆತನು ಎಚ್ಚರಿಸುತ್ತಾನೆ, **"ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ."(ಎಫೆಸ 4:30).**

ನಾವು ಪವಿತ್ರಾತ್ಮನನ್ನು ಅನಗತ್ಯ ಆಧಿತಿಯೆಂದು ದೀರ್ಘಕಾಲ ದುಖಃಪಡಿಸುತ್ತಲೇ ಇದ್ದರೆ ಆತನು ನಮ್ಮನ್ನು ಬಿಟ್ಟುಹೋಗುತ್ತಾನೆ.ಅಥವಾ ವಿಮೋಚನೆಯ ದಿನದಂದು ನಮ್ಮನ್ನು ಮುದ್ರಿಸುವುದಿಲ್ಲ. **"ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು ಭ್ರಷ್ಟರಾದರೆ ಅವರಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ; ಯಾಕಂದರೆ ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ ಆಗಿದ್ದಾರೆ."(ಇಬ್ರಿಯ 6:4-6).**

ಕಿವಿಗಳು,ಕೈಗಳು ಮತ್ತು ಪಾದಗಳು,ಬಾಯಿ ಮತ್ತು ಮನಸ್ಸಿಗೂ ಇದು ನಿಜವಾಗಿದೆ,ದೇವರ ಪವಿತ್ರ ಆತ್ಮವನ್ನು ದುಃಖಿಸಬೇಡ!

## Do Not Quench The Holy Spirit ಪವಿತ್ರಾತ್ಮನನ್ನು ನಂದಿಸಬೇಡಿರಿ

ಬೆಂಕಿಯನ್ನು ಯಾರಾದರೂ ನಂದಿಬೇಕಾದರೆ ಅದರ ಮೇಲೆ ತಣ್ಣೀರು ಹಾಕಬೇಕು.ಪವಿತ್ರ ಆತ್ಮದ ಆಲೋಚನೆಗಳಲ್ಲಿ ತಣ್ಣೀರು ಎಸೆಯುವ ಅನೇಕ ಜನರಿದ್ದಾರೆ. ಆದರೆ ಅತನು ಎಚ್ಚರಿಸುತ್ತಾನೆ, **"ಪವಿತ್ರಾತ್ಮನನ್ನು ನಂದಿಸಬೇಡಿರಿ; ಪ್ರವಾದನೆಗಳನ್ನು ಹೀನೈಸಬೇಡಿರಿ;"(1ಥೆಸಲೋನಿಕ 5:19).**

ಸಾರ್ವಜನಿಕವಾಗಿ ಪ್ರಾರ್ಥಿಸಲಾಗದು ಎಂದು ಹೇಳುವ ಜನರಿದ್ದಾರೆ ಏಕೆಂದರೆ ಅವರು ತುಂಬಾ ನಾಚಿಕೆಪಡುತ್ತಾರೆ.ಕ್ರಿಸ್ತನ ಬಗ್ಗೆ ಇತರರೊಂದಿಗೆ ಮಾತಾಡಲಾಗದು ಎಂದು ಹೇಳುವ ಜನರಿದ್ದಾರೆ, ಏಕೆಂದರೆ ಅವರಿಗೆ ಅದರ ವ್ಯಕ್ತಿತ್ವ ಇಲ್ಲ.ತಮ್ಮ ಗಂಡಂದಿರಿಗೆ ವಿಧೇಯರಾಗಲು ಸಾಧ್ಯವಿಲ್ಲವೆಂದು ಹೇಳುವ ಮಹಿಳೆಯರು ಇದ್ದಾರೆ, ಏಕೆಂದರೆ ಅವರು ಆ ರೀತಿಯಲ್ಲಿ ಮಾಡಲ್ಪಟ್ಟಿಲ್ಲ ಎನ್ನುತ್ತಾರೆ. ಇಂತಹ ಜನರಿಗೆ ಹೊಸ ಸೃಷ್ಟಿ ಅರ್ಥವಾಗುವುದಿಲ್ಲ.

ನಮ್ಮನ್ನು ಕ್ರಿಸ್ತನೊಂದಿಗೆ ಮುಳುಗಿಸಿದಾಗ, ನಾವು ನಮ್ಮ ಹಳೆಯ ಸ್ವಭಾವಗಳನ್ನು ಮತ್ತು ಗುಣಗಳನ್ನು ಸಮಾಧಿ ಮಾಡಿದ್ದೇವೆ. ಮತ್ತು ನಾವು ಹೊಸ ಸ್ವಭಾವಗಳು ಮತ್ತು ಹೊಸ ಗುಣಲಕ್ಷಣಗಳೊಂದಿಗೆ ಹೊಸ ಜೀವಿಗಳಾಗಿದ್ದೇವೆ. ನಾವು ಸತ್ಯವೇದಲ್ಲಿ ಹೇಳಿರುವದನ್ನೆಲ್ಲಾ ಮಾಡಬಹುದು. ಪವಿತ್ರಾತ್ಮನನ್ನು ನಂದಿಸಬಾರದು!

**Making The Body Our Slave ದೇಹವನ್ನು ನಮ್ಮ ಸ್ವಾಧೀನವಾಗಿ ಮಾಡಿಕೊಳ್ಳಬೇಕು**

ಪೌಲನು **(1ಕೊರಿಂಥ 9:24-27)** ನಲ್ಲಿ ಒತ್ತಿ ಹೇಳಿದ್ದಾನೆ. **"ರಂಗಸ್ಥಾನದಲ್ಲಿ ಓಡುವದಕ್ಕೆ ಗೊತ್ತಾದವರೆಲ್ಲರೂ ಓಡುತ್ತಾರಾದರೂ ಒಬ್ಬನು ಮಾತ್ರ ಬಿರುದನ್ನು ಹೊಂದುತ್ತಾನೆ ಎಂಬದು ನಿಮಗೆ ತಿಳಿಯದೋ? ಅವರಂತೆ ನೀವೂ ಬಿರುದನ್ನು ಪಡಕೊಳ್ಳಬೇಕೆಂತಲೇ ಓಡಿರಿ. ಅದರಲ್ಲಿ ಹೋರಾಡುವವರೆಲ್ಲರು ಎಲ್ಲಾ ವಿಷಯಗಳಲ್ಲಿ ಮಿತವಾಗಿರುತ್ತಾರೆ. ಅವರು ಬಾಡಿಹೋಗುವ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆಮಾಡುತ್ತಾರೆ; ನಾವಾದರೋ ಬಾಡಿಹೋಗದ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆ ಮಾಡುವವರಾಗಿದ್ದೇವೆ. ಹೀಗಿರಲಾಗಿ ನಾನು ಸಹ ಗುರಿಗೊತ್ತಿಲ್ಲದವನಾಗಿ ಓಡದೆ ಗೆಲ್ಲಬೇಕೆಂದಿರುವ ಅವರಂತೆಯೇ ಓಡುತ್ತೇನೆ; ನಾನು ಗಾಳಿಯನ್ನು ಗುದ್ದುವವನಾಗಿರದೆ ಗೆಲ್ಲಬೇಕೆಂದವನಾಗಿ ಗುದ್ದಾಡುತ್ತೇನೆ. ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನ ಪಡಿಸಿಕೊಳ್ಳುತ್ತೇನೆ."**

ದೇಹ ಯಾವಾಗಲೂ ಸುಲಭವಾದ ಕೆಲಸವನ್ನು ಮಾಡಲು ಬಯಸುತ್ತದೆ. ನಮ್ಮ ಹಿಂದಿನ ಸ್ವರೂಪವು ಸುಲಭವಾದ ಕೆಲಸಕ್ಕಾಗಿ, ಹೆಚ್ಚು ರಜಾದಿನದ ಸಮಯವನ್ನು, ಹೆಚ್ಚು ವಿಶ್ರಾಂತಿ ಪಡೆಯಲು, ಹೆಚ್ಚು ಸಮಯವನ್ನು ಆರಾಮವಾಗಿರಲೂ. ದೇಹವು ಶ್ರಮದಿಂದ ಹೊರಬರಲು ಮತ್ತು ನಾಳೆ ಸ್ವಲ್ಪ ಮಟ್ಟಿಗೆ ಹೆಚ್ಚು ಮಲಗಲು ಬಯಸುತ್ತದೆ.

ಆದರೆ ನಾವು ನಮ್ಮ ದೇಹವನ್ನು ಮಕ್ಕಳಂತೆಯೇ ನೋಡಿಕೊಳ್ಳಬೇಕಾಗಿದೆ - ಅವರಿಗೆ ಕೆಲವೊಮ್ಮೆ ಮೃಷ್ಟಾನ್ನ ಕೊಡಬೇಕಾಗುತ್ತದೆ. ಇವತ್ತು ನಮ್ಮ ದೇಹಗಳನ್ನು ಇಂದಿನವರೆಗೂ ಏನೂ ಮಾಡದೆಯೇ ನಮ್ಮ ದೇಹಗಳನ್ನು ನಾವು ಬಿಡುವುದಾದರೆ, ಅದು ನಾಳೆ ಸುಲಭವಾದ ಸಮಯಕ್ಕಾಗಿ ಒತ್ತಾಯ ಮಾಡುತ್ತದೆ.

ಓಟಗಾರನು ಬಿರುದನ್ನು ಗೆಲ್ಲುವ ಸಲುವಾಗಿ ಅವನು ತನ್ನಲ್ಲಿರುವ ಎಲ್ಲವನ್ನೂ ಕೊಡಬೇಕು ಎಂದು ಯಾವುದೇ ಓಟಗಾರ ತಿಳಿದಿರುತ್ತಾನೆ. ಪವಿತ್ರಾತ್ಮ ನಮ್ಮನ್ನು ಓಡಲು ಹೇಳುತ್ತಾನೆ!

ಯಾವುದೇ ಕ್ರೀಡಾಪಟುವು ಸ್ಪರ್ಧೆಗೆ ಸಂಬಂಧಿಸಿದಂತೆ ಅವರು ಯಾವಾಗಲೂ ಕಠಿಣ ತರಬೇತಿಯಲ್ಲಿರಬೇಕು ಎಂದು ತಿಳಿದಿದ್ದಾರೆ. ಆತ್ಮೀಕ ಬಹುಮಾನವು ಕಠಿಣ ತರಬೇತಿಗೆ ಯೋಗ್ಯವಾಗಿದೆ ಎಂದು ಪವಿತ್ರಾತ್ಮನು ನಮಗೆ ಹೇಳುತ್ತಾನೆ.

ಒಬ್ಬ ಫುಟ್ಬಾಲ್ ಆಟಗಾರನು ಅಂಕಗಳನ್ನು ತನ್ನ ತಂಡಕ್ಕೆ ಹೆಚ್ಚಿಕೆ ಮಾಡಲು ಸರಿಯಾದ ದಿಕ್ಕಿನಲ್ಲಿ ಓಡಬೇಕು ತನ್ನ ತಂಡದ ಆಟಗಾರನಿಗೇ ಚೆಂಡನ್ನು ಮುಂದಕ್ಕೆ ಕಳುಹಿಸಬೇಕು, ಬಾಕ್ಸರ್ಗ ತನ್ನ ಹೊಡೆತಗಳನ್ನು ಎಣಿಸುವಂತೆ ಮಾಡಬೇಕು ಎಂದು ತಿಳಿದಿದೆ. ಕ್ರೈಸ್ತನು ಸ್ವತಃ ಗುರಿಗಳನ್ನು ಹೊಂದಿರಬೇಕು - ಅವನು ಸರಿಯಾದ ದಿಕ್ಕಿನಲ್ಲಿ ಓಡಬೇಕು,ಮತ್ತು ಅವನು ತನ್ನ ಹೊಡೆತಗಳನ್ನು ಲೆಕ್ಕ ಮಾಡಬೇಕು.

ದೇಹ ನಾವು ಸತ್ಯವೇದಲ್ಲಿ ನೀಡಿದ ನಿರ್ದೇಶನಗಳನ್ನು ಅನುಸರಿಸಿದರೆ,ಪವಿತ್ರಾತ್ಮ ನಮ್ಮ ದೇಹಗಳನ್ನು ನಮ್ಮ ಗುಲಾಮರನ್ನಾಗಿ ಮಾಡಲು ಸಹಾಯ ಮಾಡುತ್ತಾನೆ. ಆದರೆ ತರಬೇತುದಾರರು ತಮ್ಮ ತಂಡಕ್ಕೆ ಅಗತ್ಯವಿರುವ ಮಾನಸಿಕ ಶಿಸ್ತು ಮತ್ತು ತರಬೇತಿಯನ್ನು ಕೊಡುತ್ತಾರೆ. ಮತ್ತು ನಾವು ನಮ್ಮ ದೇಹವನ್ನು ನಮ್ಮ ಗುಲಾಮರನ್ನಾಗಿ ಮಾಡಲು ನಿರಾಕರಿಸಿದರೆ, ನಾವು ಇತರರಿಗೆ ಬೋಧಿಸಿದರೂ ಸಹ, ನಾವು ಅನರ್ಹರಾಗಿರುತ್ತೇವೆ.

## Summary ಸಾರಾಂಶ

ಪವಿತ್ರಾತ್ಮನು ನಮಗೆ ಹೇಳುವುದು ನಾವು ಹೇಗೆ ಆತನಿಂದ ತುಂಬಿರುವುದು.

1. ಆತ್ಮ ಸಂಬಂಧವಾದ ಸಂಗೀತ ಮತ್ತು ಕೀರ್ತನೆ ಹಾಡುತ್ತಾ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ.
2. ಎಲ್ಲಾ ವಿಷಯದಲ್ಲಿ ಕೃತಜ್ಞತೆ ಸಲ್ಲಿಸಿರಿ.
3. ಕರ್ತನಿಗೆ ಭಯಪಟ್ಟು ಒಬ್ಬರಿಗೊಬ್ಬರು ಸೇವೆಮಾಡಿರಿ.

ಪವಿತ್ರಾತ್ಮ ದುಃಖಪಡಿಸಬಾರದು,ಆತನನ್ನು ನಂದಿಸಬಾರದು,ಮತ್ತು ನಮ್ಮ ದೇಹವನ್ನು ನಮಗೆ ಅಧೀನದಲ್ಲಿಟ್ಟುಕೊಳ್ಳಬೇಕು.

ಪವಿತ್ರಾತ್ಮನ ಎಚ್ಚರಿಕೆಗಳೆಲ್ಲಾ ನಮ್ಮ ಮನಸ್ಸಿನ ಶಿಸ್ತು ಕ್ರಮಗಳನ್ನೊಳಗೊಂಡಿದೆ.ಪವಿತ್ರಾತ್ಮನು ನಮ್ಮನ್ನು ಮಹತ್ಕಾರ್ಯದಿಂದ ತಕ್ಷಣವೇ ಕ್ರಿಸ್ತನ ಸ್ವರೂಪಕ್ಕೆ ರೂಪಾಂತರಪಡಿಸುವುದಿಲ್ಲ.ಆತನು ನಾವು ಸಂತೋಷಪಟ್ಟು ಕರ್ತನಂತಾಗುವ ಪ್ರಕ್ರಿಯೆಯ ತರಬೇತಿ ನೀಡುತ್ತಾನೆ.

## VI. LIFE! IN JESUS ಜೀವ! ಯೇಸುವಿನಲ್ಲಿಯೇ

**"ಆತನಲ್ಲಿ ಜೀವವಿತ್ತು; ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು."** (ಯೋಹಾನ 1:4). ಯೋಹಾನನು ಮತ್ತೂ ಹೇಳುವುದು **"ಯೇಸು ಅವನಿಗೆ - ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ."**

ಯೇಸು ಕ್ರಿಸ್ತನಲ್ಲಿ ಜೀವವಿದೆ.ಆದರೆ ನಮಗೆ ಕೆಲವು ಸಮಯ ಜೀವವೆಂದರೇನು ತಿಳಿಯುವುದಿಲ್ಲ.

ಬಹಳ ಪ್ರಮುಖ ವಚನಗಳಲ್ಲಿ ಒಂದಾದ ವಚನ (ರೋಮಾಯ 8:2) ರಲ್ಲಿದೇ, **"ಯಾಕಂದರೆ ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು."** ಪಾಪ ಮರಣದ ನಿಯಮವೆಂದರೇನು? ಇದಕ್ಕೆ ಬದಲಾಗಿ ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವೆಂದರೇನು?

ಕಾನೂನು ಒಂದು ಕಾರಣ ಮತ್ತು ಪರಿಣಾಮ ಸಂಬಂಧವನ್ನು ಹೇಳುತ್ತದೆ- ಭೂಸಂಬಂಧವಾದದ್ದು, ಸಾಮಾನ್ಯವಾಗಿ ಗಣಿತದ ರೂಪದಲ್ಲಿ ವ್ಯಕ್ತಪಡಿಸಲಾಗುತ್ತದೆ.ಪಾಪ ಮರಣದ ನಿಯಮು (ದಶಾಜ್ಞೆಗಳ ಆಧಾರದಿಂದ) ಸ್ಪಷ್ಟವಾದ ಕಾರಣ ಮತ್ತು ಪರಿಣಾಮದ ಸಂಬಂಧ- ನೀವು ಪಾಪ ಮಾಡಿದರೆ ಸಾಯುವಿ, ಅದರ ಮುಖ್ಯ ತಾತ್ಪರ್ಯವೆಂದರೆ ನೀವು ಪಾಪ ಮಾಡದಿದ್ದರೆ, ನೀವು ಜೀವಿಸಬೇಕು.

"ಪಾಪ ಮರಣದ ನಿಯಮ, ಆದಾಗ್ಯೂ ಪಾಪ ಮತ್ತು ಮರಣದ ಕಾನೂನು ಮರಣ ವಿಧಿ "ಮರಣವಿಧಿಸುವ ನಿಯಮದ ಸೇವೆಯು ಕಲ್ಲಿನ ಮೇಲೆ ಲಿಖಿತವಾದ ಅಕ್ಷರಗಳಲ್ಲಿ ಆಧಾರಗೊಂಡಿದ್ದರೂ ಪ್ರಭಾವದಿಂದ ಕೂಡಿದ್ದಾಗಿತ್ತು. ಆ ಪ್ರಭಾವದಿಂದ ಮೋಶೆಯ ಮುಖಕ್ಕೆ ಬಂದ ಪ್ರಕಾಶವು ಕುಂದಿಹೋಗುವಂಥದಾಗಿದ್ದರೂ ಅದರ ನಿಮಿತ್ತ ಇಸ್ರಾಯೇಲ್ಯರು ಅವನ ಮುಖವನ್ನು ನೋಡಲಾರದೆ ಇದ್ದರು." (2ಕೊರಿಂಥ 3:7) ನಿರಂತರವಾಗಿ ವ್ಯಕ್ತಿಯ ಗಮನವನ್ನು ಕಲ್ಲಿನ ಫಲಕಗಳಲ್ಲಿ ಒತ್ತಾಯಿಸುವ ಮೂಲಕ, ಅಭಿವೃದ್ಧಿಪಡಿಸುವ ಒಳ ಚಿತ್ರವು ಪಾಪವಾಗಿರುವುದು. ಒಬ್ಬ ವ್ಯಕ್ತಿಯು ತನ್ನನ್ನು ತಾನು ಪಾಪಿಯಾಗಿ ನೋಡುತ್ತಾ ಹೋದರೆ, ಅವನು ಹಾಗೆ ಕಾರ್ಯನಿರ್ವಹಿಸುತ್ತಾನೆಂಬುದು.ನಿಖರವಾಗಿ ನಮ್ಮ ಆಲೋಚನೆಗಳು "ಏನು ಮಾಡಬಾರದು" ನಿಂದ "ಏನಾಗಬೇಕೆಂಬ" ಕಡೆಗೆ ಗಮನಹರಿಸಬೇಕು.

ಇದು ಯೇಸುಕ್ರಿಸ್ತನಲ್ಲಿ ಜೀವವನ್ನುಂಟು ಮಾಡುವ ನಿಯಮವಾಗಿದೆ. ಪುನರ್ಜನ್ಮ ಹೊಂದಿದ ಮೇಲೇ ನಾವು ಈಗ ಕ್ರಿಸ್ತನಂತೆ ಇರುವ ಸಾಮರ್ಥ್ಯ ಹೊಂದುತ್ತೇವೆ! ನಾವು "ಕ್ರಿಸ್ತ ಯೇಸುವಿನಲ್ಲಿ ದೇವರ ಮೇಲ್ಮುಖವಾದ ಕರೆ" ಯನ್ನು ಅನುಸರಿಸುತ್ತೇವೆ (ಫಿಲಿಪ್ಪಿ 3:14). ನಮಗೆ ಹೊಸ ಮನೋಭಾವವಿದೆ - ನಾವು ಕ್ರಿಸ್ತನಂತೆ ಇರಬೇಕೆಂದು ಬಯಸುತ್ತೇವೆ! ನಾವು ದೇವರನ್ನು ಆರಾಧಿಸಬೇಕಾಗಿಲ್ಲ - ನಾವು ಬಯಸುತ್ತೇವೆ! ನಾವು ಸಭೆಗೆ ಹೋಗಬೇಕಾಗಿಲ್ಲ - ನಾವು ಬಯಸುತ್ತೇವೆ!

ಅನೇಕ ಕ್ರೈಸ್ತರು ದೇವರಿಗಾಗಿ ಕೆಲಸ ಮಾಡಲು ಉತ್ಸಾಹದ ದೃಷ್ಟಿಕೋನವನ್ನು ಬಯಸುತ್ತಿರುವವರಾಗಿ ಕಾಣುವುದಿಲ್ಲ. ಅವರು ಇನ್ನೂ ಪಾಪ ಮತ್ತು ಮರಣದ ನಿಯಮದ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಅವರು ಸಭೆಗೆ ಹೋಗಬೇಕು ಎಂದು ಅವರು ಭಾವಿಸುತ್ತಾರೆ. ಅವರು ಯೇಸುವಿನ ಬಗ್ಗೆ ಇತರರೊಂದಿಗೆ ಮಾತಾಡಬೇಕು ಎಂದು ಅವರು ಭಾವಿಸುತ್ತಾರೆ. ಅವರು ಮಾಡಬೇಕಾದ ಬಹಳಷ್ಟು ವಿಷಯಗಳಿವೆ, ಮತ್ತು ಕ್ರೈಸ್ತ ಧರ್ಮ ಅವರಿಗೆ ನಿಜವಾದ ಹೊರೆಯಾಗಿದೆ. ಅವರ ಸಮಸ್ಯೆ - ಅವರ ವರ್ತನೆಗಳು!

ಈ ಹಂತದಲ್ಲಿ ಯೋಹಾನನು ಬರೆಯುತ್ತಾನೆ; **"ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ."** (1ಯೋಹಾನ 5:3). ಆತನ ಆಜ್ಞೆಗಳು ಭಾರವಾದವುಗಳಲ್ಲ- ನಮಗೆ ಆತನ ಆಜ್ಞೆಗಳು ಭಾರವಾಗಿದ್ದರೆ ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಸಹಾಯ ಕೇಳಬೇಕು. **"ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ."** (1ಯೋಹಾನ 5:4).

ನಮ್ಮ ನಂಬಿಕೆ ಲೋಕವನ್ನು ಜಯಿಸಿದೆ.ನಮಗೆ ಯಾವುದೇ ನಿರೀಕ್ಷೆಯಿಲ್ಲದ ಪರಿಸ್ಥಿತಿಯೂ ಇಲ್ಲ,ಯಾವುದೇ ಸಮಸ್ಯೆ ತುಂಬಾ ಕಠಿಣವಾಗಿಲ್ಲ, ಯಾವುದೇ ಪರ್ವತವು ತುಂಬಾ ದೊಡ್ಡದು ಚಲಿಸಲು ಅಸಾಧ್ಯ ಎನ್ನುವಂತಿಲ್ಲ.ನಮಗೆ ಇದು ಕೇವಲ ನಮ್ಮ ನಂಬಿಕೆಯನ್ನು ಬೆಳೆಸುವ ಒಂದು ವಿಷಯವಾಗಿದೆ, ನಮ್ಮ ನಂಬಿಕೆಯ ಮಟ್ಟವನ್ನು ಹೆಚ್ಚಿಸುವುದು ದೇವರನ್ನು ಸಂತೋಷದಿಂದ ಅರ್ಥಮಾಡಿಕೊಳ್ಳಲು **"ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ."** (ಎಫೆಸ 3:20).

ಒಳಗೆ ಪವಿತ್ರಾತ್ಮ ಶಕ್ತಿಯನ್ನು ಹೊಂದಿರುವ ನಾವು ಈ ಲೋಕವನ್ನು ತಲೆಕೆಳಗಾಗಿ ಮಾಡಬಹುದು ಪ್ರತಿಯೊಬ್ಬ ಮನುಷ್ಯ ಕ್ರಿಸ್ತನಲ್ಲಿ ಪರಿಪೂರ್ಣತೆಯನ್ನು ಪ್ರಸ್ತುತಪಡಿಸಲು ನಾವು ಶ್ರಮಿಸಬೇಕು. ನಮ್ಮ ಸುತ್ತಲಿನ ನಾಶವಾಗುವುತ್ತಿರುವ ಜಗತ್ತಿಗೆ ನಾವು ಜೀವವನ್ನು ನೀಡಬಹುದು. **"ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು - ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ.ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು."** ( ಯೋಹಾನ 7:37,38).

## Summary ಮುಖ್ಯ ಸಾರಾಂಶ

ಕ್ರಿಸ್ತನಲ್ಲಿ ಜೀವಿಸುವರಿಗೆ ಸಂತೋಷವಿದೆ. ಏಕೆಂದರೆ ನಾವು ಆತನ ಆಜ್ಞೆಗಳನ್ನು ಕೈಗೊಳ್ಳುತ್ತೇವೆ ಆದುದರಿಂದ ದೇವರು ನಮ್ಮ ಮೂಲಕ ಅತ್ಯಧಿಕವಾಗಿ ಮಾಡುತ್ತಾನೆ ಎಂದು ನಮಗೆ ತಿಳಿದಿದೆ. ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಮೂಲಕವೂ ನಾವು ಕೇಳುವುದಕ್ಕಿಂತಲೂ ಅಥವಾ ಯೋಚಿಸವುದಕ್ಕಿಂತಲೂ ದೇವರು ಅತ್ಯಧಿಕವಾದದ್ದನ್ನು ಮಾಡುತ್ತಾನೆ.

## CONCLUSION ಅಂತಿಮ ತೀರ್ಮಾನಗಳು

ಈ ಅಧ್ಯಯನದಲ್ಲಿ ತಲುಪಿದ ಮೂಲ ಅಂತಿಮ ತೀರ್ಮಾನಗಳು ಹೀಗಿವೆ:

1. ಕ್ರೈಸ್ತನಿಗೆ ಇದು ಸಾಧ್ಯ,ಯಾಕೆಂದರೆ ಕ್ರಿಸ್ತನೊಳಗೆ ದೀಕ್ಷಸ್ನಾನದ ಮೂಲಕ ಸೇರಿದ ಮೇಲೇ ಆತನು ಹೊಸ ಸೃಷ್ಟಿ, ನಂತರ ಕ್ರಿಸ್ತನಂತೆ ಆಗುತ್ತಾನೆ.

2. ಈ ಹೊಸ ಸೃಷ್ಟಿಯ ಅಭಿವೃದ್ಧಿಗಾಗಿ ನಿರಂತರ ಪ್ರಕ್ರಿಯೆಯ ಮೂಲಕ ಮನಸ್ಸನ್ನು ನೂತನಪಡಿಸುತ್ತಿರಬೇಕು-ಪುನುರುತ್ಥಾನ ಹೊಂದಿದ ಕ್ರಿಸ್ತನ ಚಿತ್ರವನ್ನು ನೋಡುವ ಮೂಲಕ,ಆತನ ಪುನುರುತ್ಥಾನ ಚಿತ್ರವನ್ನು ಅಭಿವೃದ್ಧಿಪಡಿಸುತ್ತಾ,ನಮ್ಮ ಮನಸ್ಸಿನ ದೃಷ್ಟಿಕೋನ ಪುನುರುತ್ಥಾನ ಹೊಂದಿರುವ ಕ್ರಿಸ್ತನ ಮೇಲಿಟ್ಟಿರಬೇಕು.

3. ದೇವರ ಉದ್ದೇಶವು ಪವಿತ್ರಾತ್ಮನನ್ನು ಆತನಿಗೆ ನಂಬಿಗಸ್ತರಾಗಿರುವವರಿಗೆ ಕಳುಹಿಸುವುದಾಗಿದೆ, ಆದ್ದರಿಂದ ದೇವರೊಂದಿಗೆ ಸಂಬಂಧ  ಪುನಃಸ್ಥಾಪಿಸಬಹುದು ಮತ್ತು ನಂಬಿಗಸ್ತರು ತಮ್ಮ ಪರಲೋಕದ ತಂದೆಯಂತೆ ಪರಿಪೂರ್ಣರಾಗಬಹುದು. ದೇವರ ಈ ಅದ್ಭುತ ಪರಿಕಲ್ಪನೆಯನ್ನು ತನ್ನ ವಾಕ್ಯದ ವಿಶೇಷ ಪದಗಳಲ್ಲಿ ತಿಳಿಸಿದ್ದಾನೆ,ಆ ಪದಗಳು “ವಾಗ್ದಾನ, ಮರ್ಮ,ಮಹಿಮೆ,ಮತ್ತು ಕನ್ನಡಿ” ಮುಂತಾದ ಈ ಪದಗಳಲ್ಲಿ,ನಾವು ಆತನ ಉದ್ದೇಶವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.ಪಾಪಕ್ಷಮಾಪಣೆಯು ನಮ್ಮೊಳಗಿರುವ ಪವಿತ್ರಾತ್ಮನಿಗೆ ವಾಹನವಾಗಿದೆ, ಮತ್ತು ದೇವರ ಪ್ರಮುಖ ಪರಿಕಲ್ಪನೆಯ ಬೀಗದ ಕೈ ಆಗಿದೆ,ಹೊಸ ಒಡಂಬಡಿಕೆಯ  ಕೇಂದ್ರ ಸಂದೇಶ ಗ್ರಹಿಸುವಲ್ಲಿ ಅರ್ಥಮಾಡಿಕೊಳ್ಳಬೇಕು. ಹಳೆಯ ಒಡಂಬಡಿಕೆಯ ಸಂದೇಶ ಕೇವಲ ಕ್ರಿಸ್ತನಲ್ಲ, ಆದರೆ ಕ್ರಿಸ್ತನು ನಿಮ್ಮಲ್ಲಿರುವುದೇ.ದೇವರ ಪರಿಪೂರ್ಣ ಪ್ರಕಟಣೆಯ ಕನ್ನಡಿಯಲ್ಲಿ - ಪೂರ್ಣಗೊಂಡ ಹೊಸ ಒಡಂಬಡಿಕೆಯಲ್ಲಿ ಮತ್ತು ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣದಲ್ಲಿ - ಪುನರುತ್ಥಾನಗೊಂಡ ಕ್ರಿಸ್ತನ ಮಹಿಮೆಯ ಚಿತ್ರಣವನ್ನು ನಾವು ನೋಡುತ್ತೇವೆ ಮತ್ತು ಇದರ ಪರಿಣಾಮವಾಗಿ ಅದೇ ಚಿತ್ರವನ್ನು ನಮಗೆ ಮಾರ್ಪಡಿಸಲಾಗುತ್ತಿದೆ

4. ಪವಿತ್ರಾತ್ಮನು ಕ್ರೈಸ್ತನಿಗೆ ಸಂಪೂರ್ಣನಾಗಲೂ,ಪಾಪಾಧೀನಸ್ವಭಾವವನ್ನು ನಾಶಪಡಿಸಲೂ,ಸಹಾಯ ಮಾಡುತ್ತಾನೆ.ಪವಿತ್ರಾತ್ಮನು ಆತನನ್ನು ದೇವರ ಮಗನಾಗಲೂ ಮುನ್ನಡಿಸುತ್ತಾನೆ,ಮತ್ತು ಆತನ ಪ್ರಾರ್ಥನೆಯಲ್ಲಿ ಬೇಡಿವವನಾಗಿದ್ದಾನೆ.

5. ಕ್ರೈಸ್ತರು ಪವಿತ್ರಾತ್ಮ ಭರಿತರಾಗಿರುವುದು,ಆತನನ್ನು ದುಃಖಪಡಿಸದೆಯೂ,ಆತನನ್ನು ನಂದಿಸದೆಯೂ,ಮತ್ತು ನಮ್ಮ ದೇಹವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಎಚ್ಚರಿಸಲಾಗಿದೆ.

6. ಯೇಸುವಿನಲ್ಲಿ ಜೀವಿಸುವುದು ಹಳೇ ಆಲೋಚನೆಯಿಂದ ಬಿಡುಗಡೆ ಹೊಂದುವುದೇ.ಕ್ರೈಸ್ತನು ಸಂತೋಷದಿಂದ ದೇವರ ಚಿತ್ತವನ್ನು ಕೇಂದ್ರಿಕೃತ ಪ್ರಯತ್ನ ಮಾಡುತ್ತಾ ಕ್ರಿಸ್ತನಂತಾಗುತ್ತಾನೆ.ಆತನು ನಂಬುವುದು ದೇವರು ತಾನು ಕೇಳುವದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಆತ್ಯಾಧಿಕವಾದದ್ದನ್ನು ಆತನೊಳಗೆ ವಾಸಿಸುವ ಪವಿತ್ರಾತ್ಮನ ಶಕ್ತಿಯ ಕಾರ್ಯದ ಮೂಲಕ ಮಾಡಲೂ ಶಕ್ತನಾಗಿದ್ದಾನೆ.